" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಕರ್ನಾಟಕ ವಿಧಾನ ಪರಿಷತ್ತು**

17ನೇ ಮಾರ್ಚ್ 2017
ಶುಕ್ರವಾರ

**ವಿಷಯಾನುಕ್ರಮಣಿಕೆ**

1. ಸಂತಾಪ ಸೂಚನೆ
ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀ ಎನ್.ಮಂಜುನಾಥ್ ಇವರು ನಿಧನರಾಗಿರುವ ಬಗ್ಗೆ.
– ಡಾ: ಜಿ.ಪರಮೇಶ್ವರ್ (ಸಭಾನಾಯಕರು)
– ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)

2. ಪ್ರಶ್ನೋತ್ತರಗಳು
*ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.*

673 – ಸರ್ಕಾರಿ ಶಾಲೆಗಳಲ್ಲಿ ಖಾಲಿ ಇರುವ ದೈಹಿಕ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ
– ಶ್ರೀ ರಾಮಚಂದ್ರಗೌಡ

692 – ದಿನಾಂಕ:01.06.1987ರ ನಂತರ ಪ್ರಾರಂಭವಾದ ಖಾಸಗಿ ಪ್ರಥಮ ದರ್ಜೆ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ
– ಶ್ರೀ ಎಸ್.ವ್ಹಿ.ಸಂಕನೂರ

663 – ಅತಿಥಿ ಉಪನ್ಯಾಸಕರಿಗೆ ಗೌರವಧನ ಹೆಚ್ಚಿಸುವ ಪ್ರಸ್ತಾವನೆ ಬಗ್ಗೆ
– ಕ್ಯಾಪ್ಟನ್ ಗಣೇಶ್ ಕಾರ್ಣಿಕ್

703 – ಪಿ.ಡಿ.ಓ. ಹುದ್ದೆಗಳನ್ನು ಗ್ರೂಪ್ 'ಬಿ' ಹುದ್ದೆಗೆ ಉನ್ನತೀಕರಿಸುವ ಬಗ್ಗೆ.
– ಶ್ರೀ ಎಂ.ಕೆ.ಪ್ರಾಣೇಶ್

606 – ಬಿಸಿಯೂಟ ಯೋಜನೆಯ ಬೇಳೆಕಾಳು ಹಾಗೂ ಅಕ್ಕಿಯನ್ನು ಹಾಡು ಹಗಲೇ ದರೋಡೆ ಮಾಡುತ್ತಿರುವ ಬಗ್ಗೆ.
– ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ

718 – ಗ್ರಾಮ ಪಂಚಾಯತ್‍ಗಳಲ್ಲಿ ಹಳ್ಳಿ ಸಂತೆ ವಿಚಾರ
– ಶ್ರೀ ಭಾನುಪ್ರಕಾಶ

687 – ಖಾಸಗಿಯವರು ನಡೆಸುತ್ತಿರುವ ಪ್ಲೇ ಹೋಂಗಳ ಬಗ್ಗೆ
– ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ)

638 – ರಾಜ್ಯದಲ್ಲಿ ಬಹುಗ್ರಾಮ ಘನ ತ್ಯಾಜ್ಯ ವಿಲೇವಾರಿ ಘಟಕ ಪ್ರಾರಂಭಿಸುವ ಬಗ್ಗೆ
– ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ

709 – ಹೈದ್ರಾಬಾದ್–ಕರ್ನಾಟಕದ ಭಾಗದಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಮೂಲಭೂತ ಸೌಕರ್ಯ ಕೊರತೆ ಹಾಗೂ ಹುದ್ದೆಗಳ ಬಗ್ಗೆ.
– ಶ್ರೀ ಅಮರನಾಥ ಪಾಟೀಲ್

697+623+699 – ಪಠ್ಯಪುಸ್ತಕ ಪರಿಷ್ಕರಣೆ ಬಗ್ಗೆ
– ಶ್ರೀ ಅರುಣ ಶಹಾಪುರ
– ಶ್ರೀ ರಾಮಚಂದ್ರಗೌಡ
– ಶ್ರೀಮತಿ ತಾರಾಅನೂರಾಧ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**721** – ಗ್ರಾಮೀಣ ವಸತಿ ಯೋಜನೆಯ ಅನುಷ್ಠಾನ ಮತ್ತು ಮೇಲ್ವಿಚಾರಣೆ
– ಶ್ರೀ ಕೆ.ವಿ.ನಾರಾಯಣಸ್ವಾಮಿ

**724** – ಕೆ.ಎಸ್.ಓ.ಯು. ಮೈಸೂರು ಇದರ ಮಾನ್ಯತೆ ಹಾಗೂ ಕಾರ್ಯವೈಖರಿ ಬಗ್ಗೆ
– ಶ್ರೀ ವಿ.ಸೋಮಣ್ಣ

**686** – ಕಾನೂನು ತೊಡಕುಗಳಿಂದಾಗಿ ವಸತಿ ಯೋಜನೆಗಳು ನೆನೆಗುದಿಗೆ ಬೀಳುತ್ತಿರುವ ಬಗ್ಗೆ
– ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ

*ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.*

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು.

4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು.

ಅ) ಅನುದಾನಕ್ಕೊಳಪಡಿಸಿದ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಗ್ರೂಪ್ 'ಡಿ' ನೌಕರರನ್ನು ಅನುದಾನಕ್ಕೊಳಪಡಿಸಬೇಕೆನ್ನುವ ಕುರಿತು.
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಎಸ್.ವ್ಹಿ.ಸಂಕನೂರ
– ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಅಲ್ಪ ಸಂಖ್ಯಾತರ ಕಲ್ಯಾಣ
– ಹಾಗೂ ವಕ್ಫ್ ಸಚಿವರು)

ಆ) ಮಡಿಕೇರಿ ನಗರದಲ್ಲಿ ಫಲಪುಷ್ಪ ಪ್ರದರ್ಶನ ನಡೆಸದೇ ಅದರ ಅನುದಾನ ದುರ್ಬಳಕೆಯಾಗಿರುವ ಬಗ್ಗೆ.
– ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ
– ಡಾ: ಜಿ.ಪರಮೇಶ್ವರ್ (ಸಭಾನಾಯಕರು)

ಇ) ಮಲ ಹೊರುವ ಪದ್ಧತಿಯನ್ನು ಸಂಪೂರ್ಣವಾಗಿ ತಡೆಗಟ್ಟಬೇಕೆಂಬ ಬಗ್ಗೆ.
– ಶ್ರೀಮತಿ ತಾರಾಅನೂರಾಧ
– ಡಾ: ಜಿ.ಪರಮೇಶ್ವರ್ (ಸಭಾನಾಯಕರು)

ಈ) ವಿಜಯಪುರ ಜಿಲ್ಲೆಯಲ್ಲಿ ಅಕಾಲಿಕ ಮಳೆಯಿಂದಾಗಿ ದ್ರಾಕ್ಷಿ ಬೆಳೆ ಹಾನಿಯಾಗಿರುವ ಬಗ್ಗೆ
– ಶ್ರೀ ಅರುಣ ಶಹಾಪೂರ
– ಡಾ: ಜಿ.ಪರಮೇಶ್ವರ್ (ಸಭಾನಾಯಕರು)

ಉ) ಕೆ.ಆರ್.ಪೇಟೆ ತಾಲ್ಲೂಕಿನ ಹೇಮಗಿರಿ ಬಳಿಯ ನಾಟನಹಳ್ಳಿ ಗ್ರಾಮದ ಚಲುವೇಗೌಡ ಎಂಬ ರೈತನು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ.
– ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ
– ಡಾ: ಜಿ.ಪರಮೇಶ್ವರ್ (ಸಭಾನಾಯಕರು)

5. ಪ್ರಕಟಣೆಗಳು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**6. ಶಾಸನ ರಚನೆ**

**ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕ, 2017**

- ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)
- ಶ್ರೀ ರಮೇಶ್ ಬಾಬು
- ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ
- ಶ್ರೀ ಎಂ.ನಾರಾಯಣಸ್ವಾಮಿ
- ಶ್ರೀ ರಾಮಚಂದ್ರಗೌಡ
- ಕ್ಯಾಪ್ಟನ್ ಗಣೇಶ್ ಕಾರ್ಣಿಕ್
- ಶ್ರೀ ವಿ.ಎಸ್.ಉಗ್ರಪ್ಪ
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ನಿರಾಣಿ ಹನುಮಂತ ರುದ್ರಪ್ಪ
- ಐವನ್ ಡಿ’ಸೋಜಾ
- ಶ್ರೀ ಎಸ್.ರವಿ
- ಶ್ರೀ ಕೆ.ಸಿ.ಕೊಂಡಯ್ಯ
- ಶ್ರೀ ಕೆ.ಟಿ.ಶ್ರೀಕಂಠೇಗೌಡ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

~~~~~~~~~~~

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”
~~~~~~~~~~~

**(249) 17.03.2017 ಕೆಜಿ.ಎಂ.ಡಿ 11.10**

**ಕರ್ನಾಟಕ ವಿಧಾನ ಪರಿಷತ್ತು**

***ಶುಕ್ರವಾರ, 17ನೇ ಮಾರ್ಚ್ 2017***

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಿಗ್ಗೆ 11 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಎಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

~~~~~~~

**1. ಸಂತಾಪ ಸೂಚನೆ**

**ವಿಷಯ:-** ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀ ಎನ್.ಮಂಜುನಾಥ್ ಇವರು ನಿಧನರಾಗಿರುವ ಬಗ್ಗೆ.

- - - -

**ಡಾ||ಜಿ.ಪರಮೇಶ್ವರ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಮ್ಮ ಅತ್ಯಂತ ಆತ್ಮೀಯ ಗೆಳೆಯರಲ್ಲಿ ಒಬ್ಬರಾದಂತಹ ಶ್ರೀಯುತ ಎನ್.ಮಂಜುನಾಥ್ ಇವರನ್ನು ಈ ದಿವಸ ನಾವು ಕಳೆದುಕೊಂಡಿದ್ದೇವೆ. ನಾನು ಬಹಳ ನೋವಿನಿಂದ ಈ ಸಂತಾಪ ಸೂಚನೆಯನ್ನು ಮಾಡುತ್ತಿದ್ದೇನೆ. 14ನೇ ತಾರೀಖಿನಂದು ನಮ್ಮ ಪಕ್ಷದ ಮುಖಂಡರೊಬ್ಬರು ದೆಹಲಿಯಿಂದ ಬರುತ್ತಾರೆ. ಶ್ರೀಯುತ ಎನ್.ಮಂಜುನಾಥ್‌ರವರು ಅವರ ಜೊತೆಯಲ್ಲಿ ಕೆ.ಜಿ.ಎಫ್.,ಗೆ ಒಂದು ಕಾರ್ಯಕ್ರಮಕ್ಕೆ ಹೋಗುತ್ತಾರೆ. ಶ್ರೀಯುತ ಎನ್.ಮಂಜುನಾಥ್‌ರವರು ಕೆ.ಜಿ.ಎಫ್.,ನಿಂದ ವಾಪಸ್ ಬಂದಾಗಲೇ ಅವರಿಗೆ ಏನೋ ಒಂದು ರೀತಿ ಆರೋಗ್ಯದಲ್ಲಿ discomfort ಆಗಿದೆ. ನಾನು ದೆಹಲಿಯಿಂದ ಬಂದಂತಹ ಮುಖಂಡರನ್ನು ವಿಮಾನ ನಿಲ್ದಾಣಕ್ಕೆ ಬಿಡುವುದಕ್ಕೆ ಹೋದೆ. ಶ್ರೀಯುತ ಎನ್.ಮಂಜುನಾಥ್‌ರವರು, 'ನನಗೆ ಸ್ವಲ್ಪ ಕೆಲಸವಿದೆ ನಾನು ಇಲ್ಲಿಯೇ ಉಳಿದುಕೊಳ್ಳುತ್ತೇನೆ' ಎಂದು ಹೇಳಿದರು. ಶ್ರೀಯುತ ಎನ್.ಮಂಜುನಾಥ್‌ರವರು, 'ನನಗೆ ಕಷ್ಟವಿದೆ ಹಾಗೂ ಆರೋಗ್ಯ ಸರಿ ಇಲ್ಲ' ಎಂದು ನನಗೆ ಹೇಳಲಿಲ್ಲ. 'ನನಗೆ ಸ್ವಲ್ಪ ಕೆಲಸವಿದೆ' ಎಂದಷ್ಟೇ ಹೇಳಿದರು. ನಾನು ವಿಮಾನ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~~~

ನಿಲ್ದಾಣಕ್ಕೆ ಹೋದೆ. ಆನಂತರ ಶ್ರೀಯುತ ಎನ್.ಮಂಜುನಾಥ್‌ರವರು ನೇರವಾಗಿ ಆಸ್ಪತ್ರೆಗೆ ಹೋಗಿದ್ದಾರೆ. ನಾನು ಸಂಜೆ ವಿಮಾನ ನಿಲ್ದಾಣದಿಂದ ವಾಪಸ್ಸ್ ಬರುತ್ತಿದ್ದಾಗ, 'ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಅವರು ದಾಖಲಾಗಿದ್ದಾರೆ. ಆ 'ಆಸ್ಪತ್ರೆಯ ನಿರ್ದೇಶಕರಾದ ಡಾ||ಮಂಜುನಾಥರವರಿಗೆ ಒಂದು ಮಾತು ಹೇಳಿ' ಎಂದು ಅವರ ಕುಟುಂಬದವರು ನನಗೆ ಹೇಳಿದರು. ನಾನು ತಕ್ಷಣವೆ ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕರಾದ ಡಾ||ಮಂಜುನಾಥರವರಿಗೆ ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸುವಂತೆ ಹೇಳಿದೆ. ಡಾ||ಮಂಜುನಾಥರವರು, 'ಶ್ರೀಯುತರ ಆರೋಗ್ಯ ಸ್ಥಿತಿ ತುಂಬಾ ಗಂಭೀರವಾಗಿದೆ. ಹಾಗಾಗಿ, ಅವರಿಗೆ 'Bypass Surgery ಮಾಡಬೇಕಾಗುತ್ತದೆ' ಎಂದು ನನಗೆ ತಿಳಿಸಿದರು. ನಾನು ಡಾ||ಮಂಜುನಾಥರವರಿಗೆ 'ವಿಧಿ ಇಲ್ಲ, ಇನ್ನೇನು ಮಾಡಲಿಕ್ಕೆ ಆಗುತ್ತದೆ? ಅವರ ಕುಟುಂಬದವರನ್ನು ಕೇಳಿ ಸರ್ಜರಿ ಮಾಡಿ' ಎಂದು ಹೇಳಿದೆ. ಶ್ರೀಯುತ ಎನ್.ಮಂಜುನಾಥ್‌ರವರ brother-in-law ಡಾ||ವೀರಭದ್ರಸ್ವಾಮಿ ಎನ್ನುವವರು ಸಹ ವೈದ್ಯರಾಗಿದ್ದಾರೆ. ಡಾ||ವೀರಭದ್ರಸ್ವಾಮಿ ಇವರು ನನಗೆ ಫೋನ್ ಮಾಡಿ, ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಸರ್ಜರಿ ಮಾಡುವುದು ಬೇಡ, ಮಣಿಪಾಲ ಆಸ್ಪತ್ರೆಗೆ, shift ಮಾಡಬೇಕು ಅಂದುಕೊಂಡಿದ್ದೇವೆ. ತಾವು ಮಣಿಪಾಲ ಆಸ್ಪತ್ರೆಯ ವೈದ್ಯರ ಬಳಿ ಮಾತನಾಡಬೇಕು ಎಂದು ಹೇಳಿದರು. ನಾನು ತಕ್ಷಣವೆ ಮಣಿಪಾಲ್ ಆಸ್ಪತ್ರೆಯ ವೈದ್ಯರಾದ ಡಾ||ಸುಭಾಷ್‌ರವರ ಬಳಿ ಮಾತನಾಡಿದೆ.

**(250) 11.20 17-03-2017 CS.RN**

**ಡಾ||ಜಿ.ಪರಮೇಶ್ವರ(ಸಭಾನಾಯಕರು):- ಮುಂದು.** ನಂತರ ಅವರು ಅಲ್ಲಿಗೆ ಕರೆಯಿಸಿಕೊಂಡರು. ಅವರನ್ನು ಮಣಿಪಾಲ್ ಆಸ್ಪತ್ರೆಗೆ ಸೇರಿಸಿದ ಮೇಲೆ ನಾನು ಅಲ್ಲಿಗೆ ಹೋಗಿ ಅವರನ್ನು ಭೇಟಿ ಮಾಡಿದೆನು. ಅಲ್ಲಿ ಅವರ ಕುಟುಂಬ ಸದಸ್ಯರೆಲ್ಲರೂ ಸಹ ಇದ್ದರು. ಅವರು ಸಹ ಚೆನ್ನಾಗಿ ಮಾತನಾಡುತ್ತಿದ್ದು, ಉತ್ತಮ ಪ್ರಜ್ಞಾವಸ್ಥೆಯಲ್ಲಿದ್ದರು. ಆದರೆ ಅಲ್ಲಿನ ಡಾಕ್ಟರ್ ಅವರ ಹೃದಯ 15% ಮಾತ್ರ ಕೆಲಸ ಮಾಡುತ್ತಿದೆ, ನಮಗೆ ಹೆಚ್ಚಿನ ಸಮಯಾವಕಾಶವಿಲ್ಲ, ಬೈಪಾಸ್ ಸರ್ಜರಿ ಮಾಡುವ ಬಗ್ಗೆ ತಕ್ಷಣ ನೀವು ನಿರ್ಧಾರ ತೆಗೆದುಕೊಳ್ಳಬೇಕೆಂದು ಹೇಳಿದರು. ಅಂತಹ ಸಂದರ್ಭದಲ್ಲಿ ವ್ಯಕ್ತಿಯ ಅಳಿವು ಉಳಿವಿನ ಪ್ರಶ್ನೆ ಇರುತ್ತದೆ, ಇಲ್ಲ ಬೇಡ ಎಂದರೆ ಸಾವನ್ನು ಒಪ್ಪಿಕೊಂಡ ಹಾಗೆ ಇಲ್ಲದಿದ್ದರೆ ಅದಕ್ಕೆ ತಕ್ಕ ಚಿಕಿತ್ಸೆಯನ್ನು ಕೊಡಿಸಬೇಕಾಗುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಕುಟುಂಬ ಸದಸ್ಯರು ಬೇರೆ ವಿಧಿ ಇಲ್ಲದೆ ಬೈಪಾಸ್ ಸರ್ಜರಿಗೆ ಒಪ್ಪಿಕೊಂಡರು. ಮಂಜುನಾಥ್ ಅವರನ್ನು ಆಪರೇಷನ್ ಥಿಯೇಟರ್‌ಗೆ ಕರೆದುಕೊಂಡು ಹೋಗುವ ಮೊದಲು ನಾನು ಅವರನ್ನು ಕಂಡು ಮಾತನಾಡಿಸಿ, ಧೈರ್ಯವಾಗಿರಿ, ದೇವರು ಒಳ್ಳೆಯದು ಮಾಡುತ್ತಾನೆ, ಎಂದು ಹೇಳಿ ಬಂದೆನು. ಬೈಪಾಸ್ ಸರ್ಜರಿ ಆಯಿತು. ರಾತ್ರಿ 11–12 ಗಂಟೆ ರಾತ್ರಿಯಲ್ಲಿ ಆಪರೇಷನ್ ಸಕ್ಸಸ್ ಆಗಿದೆ, ಮಂಜುನಾಥ್ ಚೆನ್ನಾಗಿ ಇದ್ದಾರೆ ಎನ್ನುವ ವರ್ತಮಾನ ನನಗೆ ಬಂದಿತು. ಅದಾದ ಮೇಲೆ ಅವರ ಆರೋಗ್ಯ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸುಧಾರಣೆ ಆಗುತ್ತಿತ್ತು. ಆ ಸಂದರ್ಭದಲ್ಲಿ ಅವರ ಕಿಡ್ನಿ ಫೇಲ್ಯೂರ್ ಆಗಿದೆ, ರೆಸ್ಪಿರೇಟರಿ ಸಿಸ್ಟಂ ಫೇಲ್ಯೂರ್ ಆಗಿದೆ. ಹಾರ್ಟ್ ಫಂಕ್ಷನಿಂಗ್ ಅನ್ನು ಮಷಿನ್ ಮೇಲೆ ಇಟ್ಟಿದ್ದರು. ಮಾರನೇ ದಿವಸ ಅವರನ್ನು ಹೋಗಿ ನೋಡಿದಾಗ ಏನಪ್ಪಾ ಇಂತಹ ಪರಿಸ್ಥಿತಿಯಲ್ಲಿ ಇವರನ್ನು ನೋಡುವ ಹಾಗೆ ಆಯಿತಲ್ಲ ಎಂದು ಬಹಳ ನೋವಾಯಿತು. ಡಾಕ್ಟರ್ chances are fifty-fifty ಎಂದು ಹೇಳುತ್ತಿದ್ದರು. ಆನಂತರ ಅವರಿಗೆ ಸಣ್ಣಪುಟ್ಟ ಪ್ರಾಬ್ಲಮ್ಸ್ ಸ್ಟಾರ್ಟ್ ಆಯಿತು. ಆನಂತರ ನಾನು ಡಾಕ್ಟರ್ ಅವರ ಹತ್ತಿರ ಮಾತನಾಡಿ ಅವರನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂದು ಹೇಳಿದೆನು.

ನಾನು ಲಂಡನ್‌ಗೆ ಹೋಗಬೇಕಾದ ಕಾರ್ಯಕ್ರಮವಿತ್ತು, ನಾನು ನಾಳೆ ಲಂಡನ್‌ಗೆ ಹೋಗಬೇಕೆಂದಿದ್ದಾಗ ಮಂಜುನಾಥ್‌ರವರ brother-in-law ನನಗೆ ಪೋನ್ ಮಾಡಿ, ಇಲ್ಲಿ ಏನೂ ಸರಿಯಾಗಿ ಆಗುತ್ತಿಲ್ಲ, ಇವರನ್ನು ನಾರಾಯಣ ಹೃದಯಾಲಯಕ್ಕೆ ಶಿಫ್ಟ್ ಮಾಡಬೇಕು, ಅಲ್ಲಿನ ವೈದ್ಯರೊಂದಿಗೆ ಮಾತನಾಡಿ ಎಂದು ನನಗೆ ಹೇಳಿದರು. ನಾನು ನಂತರ ನಾರಾಯಣ ಹೃದಯಾಲಯದ ದೇವಿಶೆಟ್ಟಿಯವರೊಂದಿಗೆ ಮಾತನಾಡಿ ನಮ್ಮ ಸ್ನೇಹಿತರೊಬ್ಬರಿಗೆ ಈ ರೀತಿ ತೊಂದರೆ ಆಗಿದೆ, ನಿಮ್ಮಲ್ಲಿ ಅವರನ್ನು ದಾಖಲು ಮಾಡಿಕೊಳ್ಳಬೇಕೆಂದು ಹೇಳಿದೆನು, ಅವರು ಆಯಿತು ಎಂದು ಒಪ್ಪಿಕೊಂಡರು. ಆನಂತರ ನಾನು ನಮ್ಮ ಪೊಲೀಸ್ ಇಲಾಖೆಯವರೊಂದಿಗೆ ಮಾತನಾಡಿದೆನು. ಏಕೆಂದರೆ ಶಿಫ್ಟ್ ಮಾಡುವುದೇ ಬಹಳ ಕಷ್ಟ ಎನ್ನುವ ಪರಿಸ್ಥಿತಿಯಲ್ಲಿ ನಮ್ಮ ಇಲಾಖೆಯವರು ಜಿರೋ ಟ್ರಾಫಿಕ್ ಮಾಡಿ ಅವರನ್ನು ಶಿಫ್ಟ್ ಮಾಡಿಸುವ ವ್ಯವಸ್ಥೆಯನ್ನು ಕೂಡ ಮಾಡಿಕೊಟ್ಟೆವು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾನ್ಯ ಸಭಾಪತಿಗಳೇ, ನಾನು ಏಕೆ ಈ ವಿಚಾರಗಳನ್ನೆಲ್ಲ ಹೇಳುತ್ತಿದ್ದೇನೆ ಎಂದರೆ ಮನುಷ್ಯ ನೋಡಲು ಹೇಗಿದ್ದ ಎಂದರೆ ಆತನ ಹೃದಯ 15% ಅಷ್ಟೆ ಕೆಲಸ ಮಾಡುತ್ತಿದೆ ಎಂದರೆ ನಂಬಲು ಆಗುವುದಿಲ್ಲ. ಅವರು ಬಹಳ ಆರೋಗ್ಯದಿಂದ ಇರುವ ಹಾಗೆ ಕಾಣುತ್ತಿದ್ದರು. ಆದ್ದರಿಂದ ಒತ್ತಡಗಳಲ್ಲಿ ಬದುಕುವವರು, ಅದರಲ್ಲಿಯೂ ವಿಶೇಷವಾಗಿ ನಮ್ಮಂಥ ರಾಜಕಾರಣಿಗಳು, executives, businessmens ಯಾವತ್ತು ಕೂಡ ಒತ್ತಡಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ. ಬಿಪಿ, ಷುಗರ್ ಮತ್ತಿತರ ಕಾಯಿಲೆಗಳು ಈ ಮೂರು ಕ್ಯಾಟಗರಿಯವರಿಗೆ ಬಹಳ ಬೇಗ ಬರುತ್ತದೆ. ಅವರು ಹೃದಯಾಲದಲ್ಲಿರುವಾಗಲೇ ಅಲ್ಲಿನ ಡಾಕ್ಟರ್ ನನಗೆ ಫೋನ್ ಮಾಡಿ, ಕಿಡ್ನಿ ಫೇಲ್ಯೂರ್ ಆಗಿದೆ, ಡಾಕ್ಟರ್ ಬಲ್ಲಾಳ್‌ರವರ ಜೊತೆಯಲ್ಲಿ ಮಾತನಾಡಿ ಎಂದು ನನಗೆ ಹೇಳಿದರು. ನಾನು ಮಣಿಪಾಲ್ ಆಸ್ಪತ್ರೆಯ ಡಾ॥ಬಲ್ಲಾಳ್ ರವರ ಜೊತೆ ಮಾತನಾಡಿದ ಮೇಲೆ ಅಲ್ಲಿಂದ ಡಾಕ್ಟರ್‌ಗಳ ಒಂದು ಟೀಮ್ ಅನ್ನೇ ನಾರಾಯಣ ಹೃದಯಾಲಯಕ್ಕೆ ಕಳುಹಿಸಿದರು. ಆಗ ಬೆಳಿಗ್ಗೆ ಸುಮಾರು 11 ಗಂಟೆ ಇರಬಹುದು. ಆಮೇಲೆ ಸದನ ಮುಗಿದ ಮೇಲೆ ನನ್ನ ಕಚೇರಿಗೆ ಹೋದ ಮೇಲೆ ಮಂಜುನಾಥ್‌ರವರು ತೀರಿಕೊಂಡಿದ್ದಾರೆ ಎನ್ನುವ ಸುದ್ದಿ ಬಂದಿತ್ತು. ನನಗೆ ಬಹಳ ನೋವಾಗಿದೆ, ಏಕೆಂದರೆ ಅವರನ್ನು ನಾನು ಬಹಳ ಹತ್ತಿರದಿಂದ ನೋಡಿದ್ದೇನೆ. ಮಂಜುನಾಥ್‌ರವರು ಶ್ರೀ ಟಿ.ಎನ್.ನರಸಿಂಹಮೂರ್ತಿಯವರ ಮಗ, ದಿವಂಗತ ನರಸಿಂಹಮೂರ್ತಿಯವರು ಸುಮಾರು 32 ವರ್ಷಗಳ ಕಾಲ ಈ ಸದನದಲ್ಲಿ ಕೆಲಸ ಮಾಡಿದ್ದಾರೆ. ಅವರು ತೀರಿ ಹೋದಾಗ ಅವರಿಗೆ ಅವರು ಇದ್ದ ಮನೆ ಬಿಟ್ಟರೆ ಬೇರೆ ಯಾವುದೇ ಆಸ್ತಿ ಇರಲಿಲ್ಲ. ಮಂಜುನಾಥ್‌ರವರ cousin brother ಕೂಡ ನಮ್ಮ ಸದನದಲ್ಲಿದ್ದಾರೆ. ನಾವು ರಾಜಕಾರಣದಲ್ಲಿದ್ದುಕೊಂಡು ಆಸ್ತಿ ಮಾಡಿರುವವರನ್ನು, ಹಣ ಮಾಡಿರುವವರನ್ನು ನೋಡಿದ್ದೇವೆ. ಏನೂ ಇಲ್ಲದೇ ಬಂದು ಏನೇನೋ ಆಗಿರುವುದನ್ನು ಕೂಡ ನಾನು ನೋಡಿದ್ದೇನೆ. ಸನ್ಮಾನ್ಯ ನರಸಿಂಹಮೂರ್ತಿಯವರು 32 ವರ್ಷ ರಾಜಕಾರಣದಲ್ಲಿದ್ದುಕೊಂಡು ಕಡೆಗೆ ಒಂದು ಮನೆಯನ್ನಷ್ಟೇ ಬಿಟ್ಟು ತೀರಿಕೊಂಡರು. ಮಂಜುನಾಥ್‌ರವರು ಒಬ್ಬ ಯುವಕ, ಪದವೀಧರ ಆದರೆ, ಇಲ್ಲಿ ಸಂತಾಪ ಸೂಚನೆಯಲ್ಲಿ ವಾಣಿಜ್ಯೋದ್ಯಮಿ ಎಂದು ಬರೆದಿರುವುದನ್ನು ನೋಡಿ ನನಗೆ ಬಹಳ ಆಶ್ಚರ್ಯ ಆಯಿತು. ಏಕೆಂದರೆ ಯಾವ ವಾಣಿಜ್ಯವನ್ನು ಅವರು ನಡೆಸುತ್ತಾ ಇರಲಿಲ್ಲ. ಇವತ್ತು ಅವರ ತಂದೆ ಬಿಟ್ಟುಹೋಗಿದ್ದ ಮನೆಯನ್ನು ಕೂಡ ಮಾರಿಕೊಂಡು, ಬಾಡಿಗೆ ಮನೆಯಲ್ಲಿ ಅವರು ವಾಸ ಮಾಡುತ್ತಿದ್ದರು. ಈ ವಿಷಯ ನಮಗೆ ಯಾರಿಗೂ ಅವರು ಹೇಳಿರಲಿಲ್ಲ. ನಮ್ಮೊಂದಿಗೆ ಅವರು ತಮ್ಮ ಯಾವುದೇ ಕಷ್ಟವನ್ನು ಹಂಚಿಕೊಂಡಿದ್ದೇ ಇಲ್ಲ. ನಮ್ಮ ಪಕ್ಷದಲ್ಲಿ ಬಹಳ ಒಳ್ಳೆಯ ಕೆಲಸಗಳನ್ನು ಮಾಡಿಕೊಂಡು ಬಂದಿದ್ದರು, ಅವರನ್ನು ಬೋರ್ಡ್ ಛೇರ್ಮನ್ ಅಥವಾ ಈ ಸದನಕ್ಕೆ ತರುವ ಪ್ರಯತ್ನ ಮಾಡಿದರೂ ಸಹ ಆಗಲಿಲ್ಲ. ನಾವು ಸಾಮಾನ್ಯವಾಗಿ ಎಲ್ಲರನ್ನು ಸಜ್ಜನ ಎಂದು ಹೇಳಿಬಿಡುತ್ತೇವೆ. ಆದರೆ ನಿಜವಾಗಿ ಸಜ್ಜನ ರಾಜಕಾರಣಿಯನ್ನು ಇವತ್ತು ಕಳೆದುಕೊಂಡಿದ್ದೇವೆ. ನಾನು ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ನಿನ್ನೆ ರಾತ್ರಿ ಅವರನ್ನು ನೋಡಿದಾಗ ನನಗೆ ಬಹಳ ಬೇಸರ ಆಯಿತು. ನಾನು ಅವರು ಆಸ್ಪತ್ರೆಗೆ ಸೇರಿದ ಮೊದಲ ದಿನ ನೋಡಿದಾಗಲೂ ನಿನ್ನೆ ಅವರ ಪಾರ್ಥಿವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶರೀರ ನೋಡಿದಾಗಲೂ ಮನುಷ್ಯನ ಜೀವನ ಹೇಗೆ, ಇದು ಹೇಗಾಗುತ್ತದೆ ವಿಚಿತ್ರ ಎಂದು ನನಗೆ ಅನಿಸಿತು. ನಾವು ಇದನ್ನು ಅರ್ಥ ಮಾಡಿಕೊಳ್ಳಬೇಕು, ಯಾವಾಗ ಇದನ್ನೆಲ್ಲ ಅರ್ಥ ಮಾಡಿಕೊಳ್ಳುವುದು ಎಂದು ನನಗನಿಸಿತು. ಮಾನ್ಯ ಸಭಾಪತಿಗಳೇ, ತಾವು ತಂದಿರುವ ಈ ಸಂತಾಪ ಸೂಚನೆಗೆ ಬಹಳ ನೋವಿನಿಂದ ಬೆಂಬಲವನ್ನು ವ್ಯಕ್ತಪಡಿಸುತ್ತಾ ಮತ್ತು ಅವರ ಕುಟುಂಬವರ್ಗ ಅಂದರೆ ಅವರ ಒಬ್ಬನೇ ಮಗ, ಕಾನೂನು ಪದವೀಧರ ಅವರಿಗೆ ಅವರ ನಿಧನದ ನೋವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೇ, ಮಂಜುನಾಥ್‌ರವರು ನನ್ನ ಆತ್ಮೀಯ ಸ್ನೇಹಿತರು ಅವರು ಬೆಂಗಳೂರಿನಲ್ಲಿ ಸಿಗಲಿ, ಮೈಸೂರಿನಲ್ಲಿ ಸಿಗಲಿ ಅಥವಾ ದೆಹಲಿಯಲ್ಲಿ ಸಿಗಲಿ ರಾಜ್ಯದ ರಾಜಕಾರಣದ ಬಗ್ಗೆ ಮತ್ತು ದೇಶದ ರಾಜಕಾರಣದ ಬಗ್ಗೆ ಮನಸ್ಸಿನಲ್ಲಿದ್ದುದ್ದನ್ನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದರು. ಅವರು ತಮ್ಮ ಪಕ್ಷದ ಯೋಚನೆ ಮಾಡದೇ ಪಕ್ಷಾತೀತವಾಗಿ ಮಾತನಾಡುತ್ತಿದ್ದರು. ರಾಜ್ಯದಲ್ಲಿರುವ ಸಮಸ್ಯೆಗಳ ಬಗ್ಗೆ ಬಹಳ ಸ್ಪಷ್ಟವಾಗಿ ಅವರು ಮಾತನಾಡುತ್ತಿದ್ದರು. ಅವರು ಕಾಂಗ್ರೆಸ್ ಪಕ್ಷದ ಒಬ್ಬ ನಿಷ್ಠಾವಂತ ಕಾರ್ಯಕರ್ತ. ನಾನು ಏಕೆ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಚುನಾವಣೆಗಳು ಬಂದಂತಹ ಸಂದರ್ಭಗಳಲ್ಲಿ ಈ ಪಕ್ಷಾಂತರ ವ್ಯವಸ್ಥೆಗಳು ಮಾಮೂಲು. ಆದರೆ ಅವರು, ಅವರ ತಂದೆ ನರಸಿಂಹಮೂರ್ತಿಯವರಷ್ಟೆ ನಿಷ್ಠಾವಂತರು. ಅನೇಕ ಸಂದರ್ಭಗಳಲ್ಲಿ ನಾನು ನಿಮ್ಮ ಪಕ್ಷದಲ್ಲಿರುವ ನಾಯಕರುಗಳು ಹೀಗೆ, ಎಂದು ಅವರನ್ನು ತಮಾಷೆ ಮಾಡುತ್ತಿದ್ದಂತಹ ಸಂದರ್ಭದಲ್ಲಿ ಅವರು 'ನೀವು ಅಂದುಕೊಂಡಿರುವುದು ತಪ್ಪು' ಎಂದು ನನ್ನನ್ನು convince ಮಾಡುತ್ತಿದ್ದರು. ವಿಶ್ವಾಸ ಇದ್ದವರು ಮಾತ್ರ ಈ ರೀತಿ ಮಾಡಲಿಕ್ಕೆ ಸಾಧ್ಯವೇ ಹೊರತು ಎಲ್ಲರಿಗೂ ಹೀಗೆ ಮಾಡುವುದಕ್ಕೆ ಸಾಧ್ಯವಿಲ್ಲ. ಅವರೊಬ್ಬ ಪ್ರಾಮಾಣಿಕ ರಾಜಕಾರಿಣಿ. ನಾನು ಏಕೆ ಈ ಮಾತುಗಳನ್ನು ಹೇಳುತ್ತಿದ್ದೇನೆಂದರೆ ಅವರ ಮನಸ್ಸಿನಲ್ಲಿ ಯಾವುದೇ ಕಪಟ ಇರಲಿಲ್ಲ. ಅವರು ಮಾತನಾಡುತ್ತಿದ್ದ ಸಂದರ್ಭದಲ್ಲಿ ಅವರು ಸ್ನೇಹದಿಂದ ನಡೆದುಕೊಳ್ಳುವುದನ್ನು ನೋಡಿದಾಗ ಇಂತಹ ಒಬ್ಬ ಪ್ರಾಮಾಣಿಕ ಸ್ನೇಹಿತನನ್ನು ಕಳೆದುಕೊಂಡಿದ್ದೇನೆ ಎನ್ನುವ ನೋವು ನನಗಾಗಿದೆ. ಉಳಿದ ವಿಚಾರಗಳನ್ನು ನಮ್ಮ ಸಭಾನಾಯಕರು ಹೇಳಿದ್ದಾರೆ. ಇವತ್ತು ಮಂಜುನಾಥ್‌ರವರು ನಮ್ಮನ್ನು ಅಗಲಿದ್ದಾರೆ. ನಮ್ಮನ್ನು ಅಗಲಿರುವ ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕೊಡಲಿ. ಆ ದುಃಖವನ್ನು ಭರಿಸುವ ಶಕ್ತಿಯನ್ನು ಆ ಕುಟುಂಬದವರಿಗೆ ಭಗವಂತನು ನೀಡಲಿ ಎಂದು ಪ್ರಾರ್ಥಿಸುತ್ತಾ, ತಾವು ತಂದಿರುವ ಈ ಸಂತಾಪ ಸೂಚನೆಗೆ ಬೆಂಬಲವನ್ನು ವ್ಯಕ್ತಪಡಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

" ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಮೃತರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು
ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿದರು.)**

**ಸಭಾಪತಿಯವರು:–** ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

(251):11.30:17-03-2017:ಎಂವಿ:ಆರ್‌ಎನ್

**2. ಪ್ರಶ್ನೋತ್ತರಗಳು.**

**ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ 673 (ಉತ್ತರ ಲಗತ್ತಿಸಿದೆ)**

**ಶ್ರೀ ರಾಮಚಂದ್ರ ಗೌಡ:–** ಮಾನ್ಯ ಸಭಾಪತಿಯವರೇ, ಸುಮಾರು 1426 ಹುದ್ದೆಗಳು ಖಾಲಿ ಇವೆ. ನಿಮ್ಮ ಪ್ರಕಾರ 200 ಮಕ್ಕಳಿಗೆ ಒಬ್ಬರು ಶಿಕ್ಷಕರು ಎಂದರೆ, 2,85,200 ಮಕ್ಕಳಿಗೆ ದೈಹಿಕ ಶಿಕ್ಷಕರಿಲ್ಲ, ದೈಹಿಕ ಶಿಕ್ಷಕರು ಶಾಲೆಯಲ್ಲಿ ಇಲ್ಲದೇ ಹೋದರೆ, ರಾಷ್ಟ್ರಗೀತೆ ಮತ್ತು ನಾಡಗೀತೆ ಇವುಗಳನ್ನು ಮಕ್ಕಳಿಗೆ ಕಲಿಸುವವರು ಯಾರು? ಶಾಲೆಯಲ್ಲಿರತಕ್ಕಂಥ ಆಟದ ಸಾಮಗ್ರಿಗಳನ್ನು ನೋಡಿಕೊಳ್ಳುವವರು ಯಾರು? ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ ದಿನಾಚರಣೆ ಇಂತಹ ರಾಷ್ಟ್ರೀಯ ಹಬ್ಬಗಳ ಸಂದರ್ಭದಲ್ಲಿ ಮತ್ತು ನಾಡ ಹಬ್ಬಗಳನ್ನು ನಡೆಸುವುದಕ್ಕೆ ತಯಾರು ಮಾಡುವವರು ಯಾರು? ಮೈದಾನಗಳಲ್ಲಿ *lazims* and *dumbbells* ಇದೆಲ್ಲಾ ಮಾಡಿ excercise ಮಾಡುವವರು ಯಾರು? ವಾರಕ್ಕೆ ಎರಡು ಬಾರಿ ನಡೆಸಬೇಕಾದ ದೈಹಿಕ ಶಿಕ್ಷಣ ತರಗತಿಯ ಸಮಯದಲ್ಲಿ ದೈಹಿಕ ಶಿಕ್ಷಕರೆ ಇಲ್ಲದೇ ಹೋದರೆ, ವಿದ್ಯಾರ್ಥಿಗಳಿಗೆ ತರಗತಿಯನ್ನು ಯಾರು ತೆಗೆದುಕೊಳ್ಳಬೇಕು. ನೋಡಿ John F. Kennedy ಯವರು ಒಂದು ಮಾತನ್ನು ಹೇಳುತ್ತಾರೆ, "Physical fitness is not only one of the most important keys to healthy body, it is the basis of the dynamic and creative intellectual activity" ದೈಹಿಕ ಶಿಕ್ಷಣ ಎನ್ನುವುದು ಬರೀ ದೇಹಕ್ಕೆ ಮಾತ್ರ ಕೊಡುವುದಲ್ಲ intellectual ಕೂಡ ಬಹಳ ಉಪಯೋಗಕ್ಕೆ ಬರುತ್ತದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆದರೆ, ದೈಹಿಕ ಶಿಕ್ಷಣ ಶಿಕ್ಷಕರಿಲ್ಲದೆ ಸುಮಾರು 2.80 ಲಕ್ಷ ಮಕ್ಕಳಿಗೆ ತೊಂದರೆಯಾಗುತ್ತಿದೆ. ಖಾಲಿ ಇರುವ ಈ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಆರ್ಥಿಕ ಇಲಾಖೆಗೆ ಕಳುಹಿಸಿದ್ದೇವೆ ಎಂದು ಲಿಖಿತ ಉತ್ತರದಲ್ಲಿ ತಿಳಿಸಲಾಗಿದೆ. ಆದರೆ, ಆರ್ಥಿಕ ಇಲಾಖೆಯವರಿಗೆ ಹೈದ್ರಾಬಾದ್ ಸರ್ಕಾರದಲ್ಲಿ ಏನು ನಡೆಯುತ್ತಿದೆ ಎಂದು ಕೇಳುವಂತಹ ಹಕ್ಕು ಅವರಿಗೆ ಏನಿದೆ? ಏಕೆ ಕೇಳುತ್ತಾರೆ? ಈಗ ಅಲ್ಲಿ ಎರಡು ರಾಜ್ಯಗಳಿವೆ. ಅವರನ್ನು ಕೇಳುವಂತಹ ಅವಶ್ಯಕತೆ ಏನಿದೆ? ಸರ್ಕಾರ ಕಾನೂನು ಮಾಡಿದೆ, 2006ರಲ್ಲಿ ಸರ್ಕಾರದ ಆದೇಶ ಸಂಖ್ಯೆ 290 ರಂತೆ "ಪ್ರತಿಯೊಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಒಬ್ಬರಂತೆ ದೈಹಿಕ ಶಿಕ್ಷಕರನ್ನು ಕಡ್ಡಾಯವಾಗಿ ನೇಮಿಸಬೇಕು" ಎಂಬುದಾಗಿ ಸರ್ಕಾರದ ಆಜ್ಞೆ ಆಗಿದೆ. ಆದರೆ ಇಲ್ಲಿಯವರೆವಿಗೂ ಮಾಡದೇ ಹೋದರೆ... ನೀವುಗಳಂತೂ ಈಗ ಬಂದಿದ್ದೀರಾ, ನೀವು ಮಾಡುತ್ತೀರಿ ಎನ್ನುವಂತಹ ನಂಬಿಕೆ ನನಗೆ ಇದೆ. ಏಕೆಂದರೆ ನೀವು ಅತ್ಯಂತ ಯಶಸ್ವಿಯಾಗಿ ಕೆಲಸ ಮಾಡುತ್ತಿದ್ದೀರಿ ಎನ್ನುವಂತಹ ನಂಬಿಕೆ ನನಗೆ ಇದೆ. ಈಗ ಆರ್ಥಿಕ ಇಲಾಖೆಯವರ ಜೊತೆ ಕುಳಿತುಕೊಂಡು ಮಾತನಾಡಬೇಕು, ಇಲ್ಲವೆ ಅವರನ್ನು ನಿಮ್ಮ ಬಳಿಗೆ ಕರೆಯಿಸಬೇಕು. ಹೈದ್ರಾಬಾದ್‌ನಲ್ಲಿ ಏನು ನಡೆಯುತ್ತಿದೆ, ಯಾವ ಸಿಸ್ಟಮ್ ಇದೆ ಎಂಬುದು ಅಪ್ರಸ್ತುತ. ಅವರ ಮಾಹಿತಿ ಏಕೆ ಬೇಕು. ಇದು ನಮ್ಮ ರಾಜ್ಯ. ಇದಕ್ಕೆ ನೀವು ಏನು ಮಾಡುತ್ತೀರಾ ಅಷ್ಟನ್ನು ಮಾತ್ರ ಹೇಳಿ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ದೈಹಿಕ ಶಿಕ್ಷಕರ ನೇಮಕದ ವಿಚಾರಕ್ಕೆ ಈ ಹಿಂದೆ 250 ಮಕ್ಕಳಿದ್ದರೆ ಮಾತ್ರ ಒಬ್ಬ ದೈಹಿಕ ಶಿಕ್ಷಕ ಎಂದು ಇರುವುದು. 2006ರಲ್ಲಿ ಕಾನೂನು ಜಾರಿ ಮಾಡಿ, ಪ್ರತಿಯೊಂದು ಶಾಲೆಗೆ ಒಬ್ಬ ದೈಹಿಕ ಶಿಕ್ಷಕರನ್ನು ಕೊಡಬೇಕು ಎಂಬುದಾಗಿ ಒಂದು ನಿಯಮ ಮಾಡಿಕೊಂಡಿದ್ದೇವೆ, ಈಗ ನಾನು ಸಚಿವನಾಗಿ ಬಂದ ಮೇಲೆ ಅವುಗಳನ್ನು ಭರ್ತಿ ಮಾಡುವುದಕ್ಕೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಸಿದ್ಧತೆಯನ್ನು ಮಾಡಿಕೊಂಡಂತಹ ಸಂದರ್ಭದಲ್ಲಿ, ಹೈದ್ರಬಾದ್ ಕರ್ನಾಟಕ ಪ್ರದೇಶದಲ್ಲಿ ಆರ್ಟಿಕಲ್ 371(ಜೆ) ಅನ್ವಯ ಮೀಸಲಾತಿ ಏನು ಇದೆ, ಅದನ್ನು ಸರಿಪಡಿಸುವುದಕ್ಕೆ ನಾವು ಮತ್ತೊಮ್ಮೆ ಆರ್ಥಿಕ ಇಲಾಖೆಗೆ ಕಳುಹಿಸಿದ್ದೇವೆ ಅದನ್ನು ನಾವು ಮಾಡುತ್ತೇವೆ. ಪ್ರಾಥಮಿಕ ಶಾಲಾ ವಿಭಾಗದಲ್ಲಿ ಸುಮಾರು 967 ಹುದ್ದೆಗಳು ಖಾಲಿ ಇರುವಂಥದ್ದು ಮತ್ತು ಪ್ರೌಢಶಾಲಾ ವಿಭಾಗದಲ್ಲಿ 469 ಹುದ್ದೆಗಳು ಖಾಲಿ ಇವೆ. ಆದರೆ ಈಗಾಗಲೇ ನೇಮಕಾತಿ ಮಾಡಿಕೊಂಡಿರುವಂಥದ್ದರಲ್ಲಿ ಸುಮಾರು 148 ದೈಹಿಕ ಶಿಕ್ಷಕರನ್ನು ಪ್ರೌಢಶಾಲಾ ವಿಭಾಗದಲ್ಲಿ ನೇಮಕಾತಿ ಮಾಡಿಕೊಂಡಿದ್ದೇವೆ. ಆ ನೇಮಕಾತಿ ಅಂತಿಮವಾಗಿದೆ, ಸಿ.ಇ.ಟಿ.ನಲ್ಲಿ ಒಂದು ವ್ಯಾಜ್ಯವಾಗಿರುವುದರಿಂದ ಅದು ಸ್ವಲ್ಪ ಸಮಸ್ಯೆಯಾಗಿದೆ. ಅದು ಸರಿಯಾದ ತಕ್ಷಣ ಅದನ್ನು ಭರ್ತಿ ಮಾಡುವಂತಹ ಕೆಲಸವನ್ನು ಮಾಡುವುದರ ಜೊತೆಗೆ, ಇವೊತ್ತು ಏನು ದೈಹಿಕ ಶಿಕ್ಷಕರ ಹುದ್ದೆಗಳನ್ನು ತುಂಬಬೇಕಾದಂತಹ ಅಗತ್ಯ ನಮ್ಮ ಮುಂದೆ ಇದೆ, ತಾವು ಈಗಾಗಲೇ ಹೇಳಿದ ಹಾಗೆ ನಾವು ಮಕ್ಕಳಲ್ಲಿ ರಾಷ್ಟ್ರೀಯತೆಯನ್ನು ಬೆಳೆಸಬೇಕಾದರೆ, ಅವರ ದೈಹಿಕ ಚಟುವಟಿಕೆಗಳಿಗೆ ಇನ್ನೂ ಹೆಚ್ಚಿನ ವ್ಯಾಯಾಮ ಮತ್ತು ಶಿಸ್ತನ್ನು ಕೊಡಬೇಕಾದರೆ ಇದು ಆಗತ್ಯ ಇದೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎಂಬುದು ಸರ್ಕಾರದ ಗಮನದಲ್ಲಿದೆ, ಖಂಡಿತವಾಗಿಯೂ ಮುಂದಿನ ದಿನಗಳಲ್ಲಿ ಆದಷ್ಟು ಶೀಘ್ರದಲ್ಲಿ ಇದನ್ನು ಭರ್ತಿ ಮಾಡುವ ಪ್ರಕ್ರಿಯೆಗೆ ನಾವು ಚಾಲನೆ ಕೊಡುವಂತಹ ಕೆಲಸವನ್ನು ಮಾಡುತ್ತೇವೆ.

**ಶ್ರೀ ರಾಮಚಂದ್ರ ಗೌಡ:–** ಮಾನ್ಯ ಸಭಾಪತಿಯವರೇ, ಹಿಂದಿ ಶಿಕ್ಷಕರ ವಿದ್ಯಾರ್ಹತೆಯನ್ನು ಪ್ರಶ್ನಿಸಿ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ದಾವಾ ಹೂಡಿದ್ದಾರಂತೆ, ಈ ಬಗ್ಗೆ ಹಿಂದಿ ಶಿಕ್ಷಕರು ನ್ಯಾಯಲಯಕ್ಕೆ ಹೋಗಿರುವುದೋ, ಹೇಗೆ?

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೇ, ಇಲ್ಲ ಇದು *National Council for Teacher Education* (*NCTE*) ಯವರು 2003ರಲ್ಲಿ ಎಲ್ಲ ಬೋಧಕ ವರ್ಗದವರು ಬಿ.ಎಡ್. ಮಾಡಿರಬೇಕೆಂದು ಕಡ್ಡಾಯಗೊಳಿಸಿದ್ದಾರೆ. ನಮ್ಮಲ್ಲಿ ಫೆಬ್ರವರಿ 2008ರಲ್ಲಿ ನಾವು ಒಪ್ಪಿಕೊಂಡು ಅದರ ನಂತರ ನಮ್ಮ ನೇಮಕಾತಿಗಳನ್ನು ಮಾಡುತ್ತಿದ್ದೇವೆ. ಈ ಹುದ್ದೆಗಳನ್ನು ತುಂಬುವಂತಹ ಸಂದರ್ಭದಲ್ಲಿ ನಾವು ಎಲ್ಲಾ ನೋಟಿಫಿಕೇಶನ್ ಏನು ಮಾಡಿದ್ದೇವೆ, ಈ ಅಧಿಸೂಚನೆ ಏನು ಹೊರಡಿಸಿದ್ದೇವೆ 1727 ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ಮಾಡಿದಂತಹ ಸಂದರ್ಭದಲ್ಲಿ ಮತ್ತೊಂದು ವ್ಯಾಜ್ಯ ಧಾರವಾಡ ಉಚ್ಚ ನ್ಯಾಯಾಲಯದಲ್ಲಿ ಬಂದಂತಹ ಸಂದರ್ಭದಲ್ಲಿ 'ಹಿಂದಿ ಮತ್ತು ಆಂಗ್ಲ ಭಾಷೆ ಏನು ಇದೆ, ಇದು ಬಿ.ಎಡ್.ಗೆ ಸಮಾನಾಂತರವಿಲ್ಲ, ಹಾಗಾಗಿ ಇವರನ್ನು ಪರಿಗಣಿಸುವ ಹಾಗೆ ಇಲ್ಲ' ಎಂದು ತೀರ್ಪನ್ನು ಕೊಡುವುದರ ಜೊತೆಗೆ ಅವರು ಏಕಾ–ಏಕಿಯಾಗಿ ನಮ್ಮ ವೃಂದ ಮತ್ತು ನೇಮಕಾತಿ ನಿಯಮವನ್ನೆ ರದ್ದುಗೊಳಿಸಿಬಿಟ್ಟರು. ಮತ್ತೆ ನಾವು ಹೊಸದಾಗಿ ವೃಂದ ಮತ್ತು ನೇಮಕಾತಿಯನ್ನು ಸೃಷ್ಟಿ ಮಾಡಿ, ಆಕ್ಷೇಪಣೆಗಳನ್ನು ಕರೆದು ಇದನ್ನು ಜಾರಿಗೊಳಿಸಿದ ನಂತರ ಕೆ.ಎ.ಟಿ.ನಲ್ಲಿ ಮತ್ತೊಮ್ಮೆ ದಾವೆ ಹಾಕಿ ಅದನ್ನು ತಡೆಗಟ್ಟಿದ್ದಾರೆ, ಅದನ್ನು ಸರಿಪಡಿಸುವಂತಹ ಕೆಲಸ ಮಾಡುತ್ತಿದ್ದೇವೆ. ಹೀಗಾಗಿ ದೈಹಿಕ ಶಿಕ್ಷಕರ ವಿಚಾರ ಮತ್ತು ಹಿಂದಿ ಶಿಕ್ಷಕರ ವಿಚಾರ ಬೇರೆ ಬೇರೆ ಇದೆ.

**ಸಭಾಪತಿಯವರು:–** ಮೊದಲನೆ ಪ್ರಶ್ನೆಯೇ ಇಪ್ಪತ್ತು ನಿಮಿಷ ತೆಗೆದುಕೊಂಡರೆ, ನಾನು ಪ್ರಶ್ನೋತ್ತರ ಅವಧಿಯನ್ನು ಮುಗಿಸಬೇಕೋ ಬೇಡವೋ? ನಾನು ಬೇರೆಯವರೆಗೆ ಅವಕಾಶ ಕೊಡುತ್ತಿಲ್ಲ, ಮಾನ್ಯ ಸದಸ್ಯರಾದಂತಹ ಶ್ರೀ ರಾಮಚಂದ್ರ ಗೌಡರಿಗೆ ಕೊಟ್ಟಿದ್ದೇನೆ.

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೇ, ಎರಡೇ ನಿಮಿಷ, ನನಗೆ ಮಾನ್ಯ ಸಚಿವರಿಂದ ಸರಿಯಾದ ಉತ್ತರ ಸಿಗಲಿಲ್ಲ, ಈ ಸಿ.ಪಿ.ಎಡ್. ಮತ್ತು ಬಿ.ಪಿ.ಎಡ್. ಕೋರ್ಸ್ ಏನಿದೆ. ಆ ಕೋರ್ಸ್‌ಗೆ ವಿದ್ಯಾರ್ಥಿಗಳು ಬರುತ್ತಿಲ್ಲ. ಹೀಗಾಗಿ qualified ಸಿಗುತ್ತಿಲ್ಲ. ನಾನು ಒಂದು ಶಾಲೆಯನ್ನು ನಡೆಸುತ್ತಿದ್ದೇನೆ, ಕಳೆದ ಹತ್ತು ವರ್ಷಗಳಿಂದ ನನ್ನ ಶಾಲೆಗೂ ಕೂಡ ಪಿ.ಇ. ಟೀಚರ್ ಸಿಗುತ್ತಿಲ್ಲ. ಸುಮಾರು ಇಪ್ಪತ್ತೈದು ಸಾವಿರ ಸಂಬಳ

ಕೊಡುತ್ತೇವೆಂದರೂ ಕೂಡ ಯಾರು ಬರುತ್ತಿಲ್ಲ. ನಮ್ಮ ಸಿಸ್ಟಮ್‌ನಲ್ಲಿ ಕೊರತೆ ಇದೆ, ಅದನ್ನು ಸರಿಪಡಿಸುವುದಕ್ಕೆ ಸರ್ಕಾರ ಯೋಚನೆ ಮಾಡಬೇಕಾಗಿದೆ.

**ಸಭಾಪತಿಯವರು:-** ಮುಂದಿನ ಪ್ರಶ್ನೆ ಮಾನ್ಯ ಸದಸ್ಯರಾದಂತಹ ಶ್ರೀ ಎಸ್.ವ್ಹಿ.ಸಂಕನೂರ ರವರದ್ದು. ನೀವು ಪ್ರಶ್ನೆ ಕೇಳಿ, ಒಂದು ಪ್ರಶ್ನೆಗೆ ಹತ್ತು ನಿಮಿಷ, ಮಾನ್ಯ ಸದಸ್ಯರಾದಂತಹ ಶ್ರೀ ಡಿ.ಎಸ್.ವೀರಯ್ಯನವರೆ ನನ್ನ ಕಷ್ಟ ಅರ್ಥ ಮಾಡಿಕೊಳ್ಳಿ, ಸ್ವಲ್ಪ ಕೇಳಿ, ಇವೊತ್ತು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಮತ್ತು ಉನ್ನತ ಶಿಕ್ಷಣ ಸಚಿವರು ಇಬ್ಬರ ಪ್ರಶ್ನೆಗಳಿವೆ, ನಮ್ಮ ಸದನದ mood ಹೇಗಿದೆ ಎಂಬುದು ನಿಮಗೆ ಗೊತ್ತಿದೆ, ಆ ಇಬ್ಬರು ಶಿಕ್ಷಣ ಸಚಿವರಿಗೆ ಪ್ರಶ್ನೆಗಳನ್ನು ಕೇಳಿದಾಗ ಎಲ್ಲರ ಮನಸ್ಸಿನಲ್ಲೂ ಉಪ ಪ್ರಶ್ನೆಗಳನ್ನು ಕೇಳಬೇಕು ಎಂದು ಈ ಸದನದಲ್ಲಿರುವವರ ಮನಸ್ಸಿನಲ್ಲಿರುತ್ತದೆ. ನೀವೂ ಅದಕ್ಕೆ ಧ್ವನಿಗೂಡಿಸಿದರೆ ನನ್ನ ಗತಿ ಏನು? ಆದುದರಿಂದ ಅದು ಬೇಡ.

<u>**ಪ್ರಶ್ನೆ ಸಂಖ್ಯೆ 692 (ಉತ್ತರ ಲಗತ್ತಿಸಿದೆ)**</u>

**ಶ್ರೀ.ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೆ, 1987ರ ನಂತರ ನಮ್ಮ ರಾಜ್ಯದಲ್ಲಿ ಪ್ರಾರಂಭವಾದಂತಹ ಪದವಿ ಮಹಾವಿದ್ಯಾಲಯಗಳ ಕುರಿತು ನಾನು ಮಾಹಿತಿಯನ್ನು ಕೇಳಿದ್ದೆ, ಜೊತೆಗೆ ಆ ಎಲ್ಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಕುರಿತು ಕೂಡ ಮಾಹಿತಿ ಕೇಳಿದ್ದೆ. ಇದರ ಕುರಿತು ಬಹಳಷ್ಟು ಸುದೀರ್ಘವಾದಂತಹ ವಿವರವಾದ ಉತ್ತರವನ್ನು ಸರ್ಕಾರ ನೀಡಿದ್ದಾರೆ. ಮಾನ್ಯ ಸಭಾಪತಿಯವರೆ, ನನ್ನ ಪ್ರಶ್ನೆ ಇಷ್ಟೇ ನಮ್ಮ ರಾಜ್ಯದಲ್ಲಿರತಕ್ಕಂತಹ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ಕೊಡುವಂತಹ ಸಂದರ್ಭದಲ್ಲಿ ತಾರತಮ್ಯ ನೀತಿಯನ್ನು ಏಕೆ ಸರ್ಕಾರ ಅನುಸರಿಸುತ್ತದೆ? ಈ ಇಬ್ಬಗೆಯ ನೀತಿಯನ್ನು ಏಕೆ ಅನುಸರಿಸುತ್ತದೆ? ಈ ಮಾತನ್ನು ನಾವು ಏಕೆ ಹೇಳಬೇಕಾಗುತ್ತದೆಂದರೆ, ಈಗಾಗಲೇ ನಮ್ಮ ರಾಜ್ಯದಲ್ಲಿ ಪ್ರಾಥಮಿಕ, ಪ್ರೌಢ ಮತ್ತು ಪದವಿಪೂರ್ವ ಕಾಲೇಜುಗಳವರೆಗೆ 1987ರಿಂದ 95ರವರೆಗೆ ಅನುದಾನವನ್ನು ಕೊಟ್ಟಿದ್ದಾರೆ. ಆದರೆ ಪ್ರಥಮ ದರ್ಜೆ ಮಹಾವಿದ್ಯಾಲಯಗಳಿಗೆ ಮಾತ್ರ ಕೊಟ್ಟಿಲ್ಲ. ಏಕೆ ಸರ್ಕಾರ ಈ ರೀತಿಯ ತಾರತಮ್ಯವನ್ನು ಮಾಡುತ್ತಿದೆ ಎನ್ನುವುದು ನನ್ನ ಮೂಲವಾದ ಪ್ರಶ್ನೆ. ಇದರ ಜೊತೆಗೆ ಬಹಳ ಮುಖ್ಯವಾಗಿ ಹೇಳಬೇಕಾದುದ್ದು ಏನೆಂದರೆ, ಸರ್ಕಾರ 1987ರ ನಂತರ ಅಂದರೆ 1987ರಿಂದ 1995ರವರೆಗೆ ಪ್ರಾರಂಭವಾದಂತಹ ಉನ್ನತ ಶಿಕ್ಷಣದ ಪದವಿ ಮಹಾವಿದ್ಯಾಲಯದ ಎಸ್.ಸಿ. ಮತ್ತು ಎಸ್.ಟಿ. ಶಿಕ್ಷಣ ಸಂಸ್ಥೆಗಳಿಗೂ ಕೊಟ್ಟಿದ್ದಾರೆ, ಆದರೆ ಸಾಮಾನ್ಯ ಶಿಕ್ಷಣ ಮ್ಯಾನೇಜ್‌ಮೆಂಟ್‌ಗೆ ಪದವಿ ಕಾಲೇಜು ಪ್ರಾರಂಭ ಮಾಡಿರುವವರಿಗೆ ಅನುದಾನ ಕೊಟ್ಟಿಲ್ಲ. ಅದಕ್ಕೆ ನಾನು ಸರ್ಕಾರವನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಒತ್ತಾಯಿಸುವುದು ಇಷ್ಟೇ, ಈ ತಾರತಮ್ಯ ನೀತಿಯನ್ನು ಮತ್ತು ಇಬ್ಬಗೆಯ ನೀತಿಯನ್ನು ಕೈಬಿಟ್ಟು, ಯಾವ ರೀತಿ ನೀವು ಪ್ರಥಮ, ಪ್ರಾಥಮಿಕ, ಪ್ರೌಢ ಮತ್ತು ಪದವಿಪೂರ್ವ ಕಾಲೇಜುಗಳಿಗೆ 1987ರಿಂದ 1995ರವರೆಗೆ ಅನುದಾನ ಕೊಟ್ಟಿದ್ದೀರಿ, ಅದೇ ರೀತಿ 1986ರಿಂದ 1995ರವರೆಗೆ ಏನು ಪದವಿ ಕಾಲೇಜುಗಳು ಪ್ರಾರಂಭವಾಗಿವೆ, ಅವುಗಳಿಗೂ ಕೂಡ ಕೊಡಬೇಕು, ಅದಕ್ಕೆ ಏನು ಕ್ರಮವನ್ನು ಕೈಗೊಳ್ಳುತ್ತೀರಿ, ಅದು ಆಗುತ್ತದೆಯೋ ಇಲ್ಲವೋ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

(252) 17.03.2017 11.40 LL-VK

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶಿಕ್ಷಣ ಇಲಾಖೆಯು ಇಬ್ಬಗೆಯ ನೀತಿ ಅನುಸರಿಸುತ್ತಿದೆ ಎಂದರು. ಇಬ್ಬಗೆಯ ನೀತಿಯೆಂದರೆ, double standard ಎಂದು ಆಗುತ್ತದೆ. ಎರಡು ಸ್ಟಾಂಡರ್ಡ್ ಇಲ್ಲ ನಮ್ಮಲ್ಲಿ, we have only one standard.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ...

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ, let me answer.

**(ಗೊಂದಲ)**

**ಸಭಾಪತಿಯವರು:–** ಅವರು ಹೇಳುತ್ತಾರೆ. ತಾವುಗಳು ಹೇಳಿದ್ದು ಆಯಿತಲ್ಲವೇ? ಮಾನ್ಯ ಸಚಿವರ ಉತ್ತರ ಬೇಡವೇ? ಉತ್ತರ ಹೇಳುವುದಕ್ಕೆ ಬಿಡುವುದಿಲ್ಲವೆಂದರೆ ಹೇಗೆ? ಮಧ್ಯೆ ಬಾಯಿ ಹಾಕಬೇಡಿ. ಅವರು ಉತ್ತರ ಕೊಡಲಿ ಬಿಡಿ.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೇ, ನಮ್ಮಲ್ಲಿ ಎರಡು ಸ್ಟಾಂಡರ್ಡ್ ಖಂಡಿತವಾಗಿ ಇಲ್ಲ.

**ಸಭಾಪತಿಯವರು:–** ತಾವುಗಳು ಇಬ್ಬಗೆಯ ನೀತಿಯೆಂದು ಹೇಳಿದ್ದೀರಿ. ಅದಕ್ಕೆ ಅವರು ಇಲ್ಲವೆಂದು ಹೇಳುತ್ತಿದ್ದಾರೆ. ಇಬ್ಬಗೆಯ ನೀತಿ ಅಲ್ಲವೆನ್ನುವುದನ್ನು ಅವರು ಹೇಳಲಿ ಬಿಡಿ.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೆ, ಅದು ತಮಗೆ ಈಗಾಗಲೇ ಗೊತ್ತಿದೆ. ನಮ್ಮ ರಾಜ್ಯದಲ್ಲಿ 37 ಎಸ್.ಸಿ./ಎಸ್.ಟಿ. ಆಡಳಿತ ಮಂಡಳಿಯ ಕಾಲೇಜುಗಳು 1987ರಿಂದ 1995ರವರೆಗೆ ಗ್ರಾಂಟ್ ಇನ್ ಏಯ್ಡ್ ಕೊಡುವುದಕ್ಕೆ ತೀರ್ಮಾನ ಮಾಡಿತ್ತು. ಅದರಂತೆ, ಎಸ್.ಸಿ./ಎಸ್.ಟಿ. ಆಡಳಿತ ಮಂಡಳಿಯ 30 ಕಾಲೇಜುಗಳಿಗೆ ಗ್ರಾಂಟ್ ಇನ್ ಏಯ್ಡ್ ಈಗಾಗಲೇ ನೀಡಲಾಗಿದೆ. ಇನ್ನು 7 ಎಸ್.ಸಿ./ಎಸ್.ಟಿ. ಆಡಳಿತ ಮಂಡಳಿಗೆ ಸಂಬಂಧಪಟ್ಟಂತೆ ಕೆಲವು ಕಾಲೇಜುಗಳು ಸರಿಯಾದಂತಹ ದಾಖಲೆಗಳನ್ನು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಒದಗಿಸಬೇಕಾಗಿದೆ. ಅವರು ದಾಖಲೆಗಳನ್ನು ಒದಗಿಸಿದ ನಂತರ ಆ 7 ಎಸ್.ಸಿ./ಎಸ್.ಟಿ. ಕಾಲೇಜುಗಳಿಗೆ ಸರ್ಕಾರ ಗ್ರಾಂಟ್ ಇನ್ ಏಯ್ಡ್ ಅನ್ನು ಕೊಡುತ್ತಿದೆ. ಇದು ಎಸ್.ಸಿ./ಎಸ್.ಟಿ. ಆಡಳಿತ ಮಂಡಳಿಗೆ ಸಂಬಂಧಿಸಿದ್ದು. ಅಂದರೆ, up to 1995 ವರೆಗೆ ಎಸ್.ಸಿ./ಎಸ್.ಟಿ. ಆಡಳಿತ ಮಂಡಳಿಯಲ್ಲಿ ಪ್ರಾರಂಭ ಮಾಡಿದಂತಹ ಕಾಲೇಜುಗಳಿಗೆ ನಾವು ಶೇಕಡ 100ರಷ್ಟು ಗ್ರಾಂಟ್ ಇನ್ ಏಯ್ಡ್ ಅನ್ನು ಕೊಡುತ್ತಿದ್ದೇವೆ.

ಇನ್ನು ಎರಡನೆಯ ವಿಚಾರ, ಮಾನ್ಯ ಸದಸ್ಯರು ಇಬ್ಬಗೆಯ ನೀತಿಯೆಂದು ಹೇಳಿದ್ದು ಸಾಮಾನ್ಯ ಆಡಳಿತಕ್ಕೆ. ನೋಡಿ, ಸಾಮಾನ್ಯ ಆಡಳಿತ ಮಂಡಳಿಗಳು ನಡೆಸುವಂತಹ ಕಾಲೇಜುಗಳು 1987ರಿಂದ 1995ರವರೆಗೆ ಈಗಾಗಲೇ ಗ್ರಾಂಟ್ ಇನ್ ಏಯ್ಡ್ ಅನ್ನು ಅವರಿಗೆ ಕೊಡಬೇಕೆಂದು ಹೇಳಿ ತಾತ್ವಿಕವಾಗಿ ಸರ್ಕಾರ ಒಪ್ಪಿಕೊಂಡಿದೆ. ದಾಖಲೆಗಳು ಪರಿಶೀಲನೆಯಲ್ಲಿವೆ. ಕ್ಯಾಬಿನೇಟ್ ಸಬ್ ಕಮಿಟಿ ಫಾರ್ ಗ್ರಾಂಟ್ ಇನ್ ಏಯ್ಡ್ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿದೆ. ಈಗಾಗಲೇ 88 ಕಾಲೇಜುಗಳು ಸಂಬಂಧಪಟ್ಟಂತಹ ಗ್ರಾಂಟ್ ಇನ್ ಏಯ್ಡ್ ಸಲುವಾಗಿ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಕೊಟ್ಟಿವೆ. ಈಗ ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಸಾಮಾನ್ಯ ಆಡಳಿತ ಮಂಡಳಿಗೆ ಸಂಬಂಧಿಸಿದಂತೆ, ಒಟ್ಟು 128 ಕಾಲೇಜುಗಳಲ್ಲಿ 88 ಕಾಲೇಜುಗಳು ದಾಖಲೆಗಳನ್ನು ಕೊಟ್ಟಿರುತ್ತವೆ. ಉಳಿದಂತಹ ಕಾಲೇಜುಗಳು ದಾಖಲೆಗಳನ್ನು ಕೊಟ್ಟ ನಂತರ ಅವುಗಳನ್ನು ಗ್ರಾಂಟ್ ಇನ್ ಏಯ್ಡ್‌ಗೆ ಒಳಪಡಿಸುವುದಕ್ಕೆ ಸರ್ಕಾರ ಗಂಭೀರವಾಗಿ ಪರಿಶೀಲನೆಯನ್ನು ಮಾಡುತ್ತದೆ. ಅದು ನಮ್ಮ ಆರ್ಥಿಕ ಸ್ಥಿತಿ–ಗತಿಯನ್ನು ನೋಡಿಕೊಂಡು ಮಾಡಬೇಕಾಗುತ್ತದೆ. ಇನ್ನು 1987ರಿಂದ ಏನು ಸಾಮಾನ್ಯ ಆಡಳಿತದಲ್ಲಿ ನಾವು ಕಾಲೇಜುಗಳನ್ನು ಮಂಜೂರು ಮಾಡಿದ್ದೇವೆ, 1987ರ ನಂತರ 1812 ಕಾಲೇಜುಗಳಿವೆ. ತಮಗೆ ಗೊತ್ತಿದೆ ಅದು. ಆ 1812 ಕಾಲೇಜುಗಳಿಗೆ ನಾವು ಶಾಶ್ವತವಾಗಿ ಗ್ರಾಂಟ್ ಇನ್ ಏಯ್ಡ್ ಕೊಡಲಿಕ್ಕೆ ಆಗುವುದಿಲ್ಲವೆಂಬ ಷರತ್ತಿನ ಮೇರೆಗೆ ಕಾಲೇಜುಗಳನ್ನು ಮಂಜೂರು ಮಾಡಿದ್ದೇವೆ. ಅವರು ಬಾಂಡ್ ಪೇಪರ್‌ಗೆ ಸಹಿ ಮಾಡಿ ಕೊಟ್ಟಿದ್ದಾರೆ. 'Yes we will not claim the Grant-in-Aid for ever' ಎಂದು ಹೇಳಿ. ಈಗಾಗಲೇ ಅವರಿಗೆ ಗ್ರಾಂಟ್ ಇನ್ ಏಯ್ಡ್ ಕೊಡುವಂತಹ ಪ್ರಶ್ನೆ ಉದ್ಭವಿಸುವುದಿಲ್ಲ. ಅವರು ಅದರ ಪ್ರಕಾರ ಬಾಂಡ್ ಪೇಪರ್‌ಗೆ ಸಹಿ ಮಾಡಿ ಕೊಟ್ಟಿದ್ದಾರೆ. ನಮ್ಮ ಷರತ್ತಿಗೆ ಒಪ್ಪಿಗೆ ಕೊಟ್ಟಿದ್ದಾರೆ. ಹೀಗಾಗಿ ನಮ್ಮ ಮುಂದೆ ಇರುವಂತಹ ಪ್ರಶ್ನೆಯೇನೆಂದರೆ, ಎಸ್.ಸಿ./ಎಸ್.ಟಿ. ಆಡಳಿತ ಮಂಡಳಿಗೆ ಸೇರಿದಂತೆ, ಕೇವಲ 7 ಕಾಲೇಜುಗಳಿಗೆ ಮಾತ್ರ ಗ್ರಾಂಟ್ ಇನ್ ಏಯ್ಡ್ ಕೊಡಬೇಕಾಗುತ್ತದೆ. ಅದು ದಾಖಲೆಗಳ ಪರಿಶೀಲನೆಯಾದ ನಂತರ ಕೊಡುತ್ತೇವೆ. ಇನ್ನು ಎರಡನೆಯದಾಗಿ ತಾವು ಹೇಳಿದ ಹಾಗೆ 128 ಕಾಲೇಜುಗಳಲ್ಲಿ 88 ಕಾಲೇಜುಗಳಿಗೆ ದಾಖಲಾತಿ ಕೊಟ್ಟಿದ್ದಾರೆ. ನಮ್ಮ ಆರ್ಥಿಕ ಸ್ಥಿತಿ–ಗತಿಯನ್ನು ನೋಡಿಕೊಂಡು ಸಚಿವ ಸಂಪುಟದ ಉಪ ಸಮಿತಿಗೆ ತಂದು ಅದರ ಬಗ್ಗೆ ಗಂಭೀರವಾದ ಪರಿಶೀಲನೆಯನ್ನು ಸರ್ಕಾರ ಮಾಡುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಈಗ 1987ರ ನಂತರ ನಮ್ಮ ರಾಜ್ಯದಲ್ಲಿ ಪ್ರಾರಂಭವಾಗಿರುವಂತಹ ಪದವಿ ಕಾಲೇಜುಗಳಿಗೆ ಇವರು ಅನುದಾನ ಕೊಡುತ್ತಾರೋ ಅಥವಾ ಇಲ್ಲವೋ? ಎಂದಾಗ ಅದು ಪರಿಶೀಲನೆಯಲ್ಲಿದೆಯೆಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ, ಇಲ್ಲಿ ಏನು ಉತ್ತರ ಕೊಟ್ಟಿದ್ದಾರೆಂದರೆ, ಯೋಜನಾ ಇಲಾಖೆಗೆ ಈ ವಿಷಯವನ್ನು ಅಧ್ಯಯನ ಮಾಡಿ ವರದಿ ಸಲ್ಲಿಸುವುದಕ್ಕೆ ಕೇಳಿದ್ದೇವೆ. ವರದಿ ಬಂದ ನಂತರ ಅದರ ಬಗ್ಗೆ ವಿಚಾರ ಮಾಡುತ್ತೇವೆಂದು ಉತ್ತರ ಕೊಟ್ಟಿದ್ದಾರೆ. ಅವರು ಏನು ಹೇಳುವುದು..?

**ಸಭಾಪತಿಯವರು:–** ತಮ್ಮ ಪ್ರಶ್ನೆಯೇನು?

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೇ, 'ದಾಖಲೆ – ಪರಿಶೀಲನೆ'ಯೆಂದರೆ ಏನು ಅರ್ಥವೆಂಬುದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲವೇ?

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಸರ್, ಸರ್, ಒಂದು ನಿಮಿಷ. ಈಗ...

**ಸಭಾಪತಿಯವರು:–** ಸಚಿವರು ತಮ್ಮ ಉತ್ತರ ನೀಡಿದ್ದಾರೆ. ಈಗ ತಮ್ಮ ಪ್ರಶ್ನೆಯೇನು?

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದು ಇಷ್ಟೇ. ರಾಜ್ಯದಲ್ಲಿರತಕ್ಕಂತಹ ಖಾಸಗಿ ಶಾಲಾ–ಕಾಲೇಜುಗಳಿಗೆ ಅನುದಾನವನ್ನು ಕೊಡುವುದರ ಬಗ್ಗೆ ಸಚಿವ ಸಂಪುಟದ ಉಪ ಸಮಿತಿ ರಚನೆಯಾಗಿತ್ತು. ಹಿಂದಿನ ಉನ್ನತ ಶಿಕ್ಷಣ ಸಚಿವರಾದಂತಹ ಶ್ರೀ ಆರ್.ವಿ.ದೇಶಪಾಂಡೆಯವರು ಅದರ ಅಧ್ಯಕ್ಷರಾಗಿದ್ದರು. ಈಗ ಮಾನ್ಯ ಬಸವರಾಜ ರಾಯರೆಡ್ಡಿಯವರು ಅದರ ಅಧ್ಯಕ್ಷರಾಗಿದ್ದಾರೆ. ಹಿಂದಿನ ಸಚಿವರು ಇದ್ದಾಗ ಇದರ ಬಗ್ಗೆ ಅಧ್ಯಯನ ಮಾಡಿ ಒಂದು ನಿರ್ಣಯಕ್ಕೆ ಬಂದಿದ್ದಾರೆ. ಆ ನಿರ್ಣಯದ ಪ್ರತಿ ನನ್ನ ಕಡೆ ಇದೆ. ಬಹಳ ಶ್ರದ್ಧೆಯಿಂದ ಅಧ್ಯಯನ ಮಾಡಿದ್ದಾರೆ. ಅಂಕಿ–ಸಂಖ್ಯೆಗಳನ್ನು ಸಂಗ್ರಹಿಸಿದ್ದಾರೆ. ಆಗ ಅವರು ಏನು ನಿರ್ಣಯ ಮಾಡಿದ್ದಾರೆಂದರೆ, ನಮ್ಮ ರಾಜ್ಯದಲ್ಲಿ 124 ಡಿಗ್ರಿ ಕಾಲೇಜುಗಳಿವೆ. ಅದರಲ್ಲಿ 78 ಕಾಲೇಜುಗಳು ಅನುದಾನವನ್ನು ಕೇಳಿವೆ. ಈ 78 ಕಾಲೇಜುಗಳಿಗೆ ಅನುದಾನವನ್ನು ಕೊಟ್ಟರೆ, ಸರ್ಕಾರದ ಮೇಲೆ ವರ್ಷಕ್ಕೆ 75 ಕೋಟಿ ರೂಪಾಯಿಗಳಷ್ಟು ಆರ್ಥಿಕ ಹೊರೆಯಾಗುತ್ತದೆ. ಎರಡನೆಯದ್ದು, ನಮ್ಮ ರಾಜ್ಯದಲ್ಲಿ NAAC (National Assessment and Accreditation Council) ನಲ್ಲಿ 'ಬಿ' ಗ್ರೇಡ್ ಪಡೆದ 12 ಕಾಲೇಜುಗಳಿವೆ. ಈ 12 ಕಾಲೇಜುಗಳಲ್ಲಿ 10 ಕಾಲೇಜುಗಳವರು ಅನುದಾನವನ್ನು ಕೇಳಿದ್ದಾರೆ. NAAC Accreditation ನಲ್ಲಿ 'ಬಿ' ಗ್ರೇಡ್ ಮಾನ್ಯತೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪಡೆದಂತಹ 10 ಕಾಲೇಜುಗಳಿಗೆ ಅನುದಾನವನ್ನು ಕೊಟ್ಟರೆ ಅದು 19 ಕೋಟಿ ರೂಪಾಯಿಗಳಷ್ಟು ಮೊತ್ತವಾಗುತ್ತದೆ. ಹೈದರಾಬಾದ್ ಎಜುಕೇಷನ್ ಆ ಪ್ರದೇಶದೊಳಗೆ 19 ಕಾಲೇಜುಗಳಿವೆ.

**ಸಭಾಪತಿಯವರು:–** ಈಗ ಅದರ ಬಗ್ಗೆ ವಿವರಣೆ ಬೇಡ.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಈ ಕಾಲೇಜುಗಳಿಗೆ ಅನುದಾನವನ್ನು ಕೊಟ್ಟರೆ 19 ಕೋಟಿಯಾಗುತ್ತದೆ. ಇದು ಈಗಾಗಲೇ ಹಿಂದಿನ ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಆದಂತಹ ನಿರ್ಣಯವಾಗಿದೆ. ಮಾನ್ಯ ಸಚಿವರಿಗೆ ನನ್ನ ನೇರವಾದ ಪ್ರಶ್ನೆಯೇನೆಂದರೆ, ಈ ನಿರ್ಣಯದ ಪ್ರಕಾರ...

**ಸಭಾಪತಿಯವರು:–** ಕೊಡುತ್ತೀರೋ ಅಥವಾ ಇಲ್ಲವೋ?

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಇಲ್ಲ. ಅದರಲ್ಲೂ ನಿನ್ನೆ ದಿವಸ ಕೂಡ ಒಂದು ನಿರ್ಣಯ ತೆಗೆದುಕೊಂಡಿದ್ದಾರೆ. ಮುಂದಿನ ಸಚಿವ ಸಂಪುಟ ಇದನ್ನು ಒಯ್ಯಬೇಕೆಂದು.....

**ಸಭಾಪತಿಯವರು:–** ತಾವುಗಳು ಪ್ರಶ್ನೆಯನ್ನೇ ಕೇಳುವುದಿಲ್ಲ. ಆದುದರಿಂದ, ಮಾನ್ಯ ಸಚಿವರು ಉತ್ತರ ನೀಡುವುದಿಲ್ಲ.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಈ ನಿರ್ಣಯದ ಪ್ರಕಾರ... ಅಲ್ಲಾ ಸರ್, ನಾನು ಸ್ಪಷ್ಟವಾಗಿ ಹೇಳುತ್ತೇನೆ. ನಿರ್ಣಯದ ಪ್ರಕಾರ...

**ಸಭಾಪತಿಯವರು:–** ತಾವು ಭಾಷಣ ಮಾಡುತ್ತಿದ್ದೀರಷ್ಟೇ.

**(ಗೊಂದಲ)**

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಈ ನಿರ್ಣಯದ ಪ್ರಕಾರ ಸಚಿವ ಸಂಪುಟಕ್ಕೆ ಮಾನ್ಯ ಸಚಿವರು ಇದನ್ನು ಒಯ್ಯುತ್ತಾರೋ ಅಥವಾ ಈ ಯೋಜನಾ ಇಲಾಖೆಯಿಂದು ಏನು ನೇಮಿಸಿದ್ದಾರೆ, ಅದರ ಅಧ್ಯಯನ ವರದಿ ಬಂದ ನಂತರ ಮಾಡುತ್ತಾರೋ ಎನ್ನುವುದು ನನಗೆ ಸ್ಪಷ್ಟವಾಗಬೇಕು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಗೊಂದಲ)

**ಸಭಾಪತಿಯವರು:-** ಈಗ ತಾವು ತಮ್ಮ ಪ್ರಶ್ನೆಯನ್ನು ಕೇಳುತ್ತೀರೋ ಅಥವಾ ಇಲ್ಲವೋ? ಆಯಿತು. ಮಾನ್ಯ ಸಚಿವರು ಉತ್ತರ ನೀಡುತ್ತಾರೆ. ನಿಂತುಕೊಂಡರೆ, ನಿಂತೇ ಇದ್ದರೆ ಹೇಗೆ? ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಸಚಿವರೇ, ಮಾನ್ಯ ಸದಸ್ಯರ ಪ್ರಶ್ನೆಯೇನೆಂದರೆ, ಹಿಂದಿನ ಸಚಿವ ಸಂಪುಟ ಉಪ ಸಮಿತಿಯ ನಿರ್ಣಯದ ಪ್ರಕಾರ ಒಂದು ವರದಿಯಿದೆ... ಅದರ ಪ್ರಕಾರ ಕೊಡುತ್ತೀರೋ ಅಥವಾ ಇಲ್ಲವೋ ಅದನ್ನು ಹೇಳಿ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಅದು ಗೊತ್ತಿದೆ. ನಾನು ಅದಕ್ಕೆ ಉತ್ತರ ನೀಡುತ್ತೇನೆ. ಮಾನ್ಯ ಸದಸ್ಯರು ಹೇಳಿದರು, ಈ ಸಚಿವ ಸಂಪುಟದ ಉಪ ಸಮಿತಿಯ ಮುಂದೆ ತಂದು ಇದಕ್ಕೆ ಮಂಜೂರಾತಿ ಕೊಡುತ್ತಿರೋ ಅಥವಾ ಯೋಜನಾ ಇಲಾಖೆ ಅಧ್ಯಯನ ನಡೆಸಿದ ನಂತರ ಕೊಡುತ್ತೀರೋ? ತಮಗೂ ಗೊತ್ತಿದೆ. ಯೋಜನಾ ಇಲಾಖೆಯವರು, ಈ ವಿಷಯದ ಬಗ್ಗೆ ವಿವರವಾದಂತಹ ಒಂದು ವರದಿಯನ್ನು ಕೊಡಬೇಕಾಗುತ್ತದೆ. ಯಾವುದೇ ಒಂದು ಕಾಲೇಜಿಗೆ ಅನುದಾನವನ್ನು ಮಂಜೂರು ಮಾಡುವಂತಹ ಸಂದರ್ಭದಲ್ಲಿ, ತಮಗೆ ಗೊತ್ತಿದೆ. ಹೀಗಾಗಿ ಯೋಜನಾ ಇಲಾಖೆಯ ವರದಿಯನ್ನು ಪಡೆದು ಆದಷ್ಟು ಬೇಗನೆ ಸಚಿವ ಸಂಪುಟದ ಉಪ ಸಮಿತಿಗೆ ಈ ವಿಚಾರವನ್ನು ತಂದು ಅನುದಾನವನ್ನು ಕೊಡುವುದಕ್ಕೆ ಸಾಧ್ಯವಿದೆಯೇ ಅಥವಾ ಇಲ್ಲವೇ ಎಂಬುದನ್ನು ಖಂಡಿತವಾಗಿ ಸರ್ಕಾರ ಪರಿಶೀಲನೆ ಮಾಡುತ್ತದೆ ಎನ್ನುವಂತಹ ಮಾತನ್ನು ಹೇಳುತ್ತೇನೆ.

(ಗೊಂದಲ)

**Sri S.V. SANKANUR:-** Higher Education is totally neglected in our State.

**ಸಭಾಪತಿಯವರು:-** ಅದು ಬೇರೆ. ನಿಮ್ಮ ಪ್ರಶ್ನೆ ಅನುದಾನದ ಬಗ್ಗೆ. Don't talk about the Education Department.

**ಶ್ರೀ ಎಸ್.ವಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವುದೇನೆಂದರೆ, ಅನುದಾನ ಕೊಡುತ್ತಾರೋ ಅಥವಾ ಇಲ್ಲವೋ? ಎನ್ನುವುದರ ಬಗ್ಗೆ ಕೇಳುತ್ತಿದ್ದೇನಷ್ಟೇ. ಯಾವಾಗ ಕೊಡುತ್ತಾರೆ?

**ಸಭಾಪತಿಯವರು:-** ಆ ಬಗ್ಗೆ ಮಾನ್ಯ ಸಚಿವರು ಉತ್ತರ ನೀಡಿದ್ದಾರೆ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಅನುದಾನವನ್ನು ಕೊಡುವುದಿಲ್ಲವೆಂದು ನಾವು ಹೇಳಿರುವುದಿಲ್ಲ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಹಾಲಿಯಿರುವ ಸರ್ಕಾರಕ್ಕೆ ಬಾಕಿ ಒಂದು ವರ್ಷ ಅವಧಿ ಮಾತ್ರ ಇದ್ದು, ಆ ಇನ್ನೊಂದು ವರ್ಷದ ಅವಧಿಯೊಳಗಾಗಿ ಅನುದಾನವನ್ನು ಕೊಡುತ್ತಾರೆಯೇ ಅಥವಾ ಹೇಗೆ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವೀರಯ್ಯನವರೇ ನೋಡಿ, ಶಿಕ್ಷಕರ ವಿಷಯ ಬಂದರೆ ಎಷ್ಟು ಜನ ಸದಸ್ಯರು ಎದ್ದು ನಿಲ್ಲುತ್ತಾರೆ. ಅಲ್ಲಿ, ಇಲ್ಲಿ, ಎಲ್ಲಾ ಕಡೆ ಎದ್ದು ನಿಲ್ಲುತ್ತಾರೆ. ತಾವುಗಳು ಗಮನಿಸಿ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ನಾನು ಕೊನೆಯ ಮಾತನ್ನು ಹೇಳುತ್ತೇನೆ. ಈ ಕಾಲೇಜುಗಳು ಪ್ರಾರಂಭವಾಗಿ 30 ವರ್ಷಗಳಾಗಿವೆ.

**ಸಭಾಪತಿಯವರು:-** ಈ ರೀತಿ ಮಾತನಾಡಿದರೆ ನನ್ನ ಗತಿಯೇನು? ಹೇಳಿ. ಪ್ರಶ್ನೋತ್ತರ ಅವಧಿಯನ್ನು ನಾಳೆ ಸಂಜೆಯವರೆಗೂ ನಡೆಸಲೇ?

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಅದಕ್ಕಾಗಿಯೇ ಈ ವರ್ಷದೊಳಗಾಗಿ ಅನುದಾನವನ್ನು ಕೊಡುವುದಕ್ಕಾಗುತ್ತದೆಯೇ ಅಥವಾ ಇಲ್ಲವೇ ಎಂದು ನಾನು ಪ್ರಶ್ನಿಸುತ್ತಿದ್ದೇನೆ. ಇದು ವಿಳಂಬ ನೀತಿಯಾಗುತ್ತದೆ. ಯೋಜನಾ ಇಲಾಖೆಯ ಅಧ್ಯಯನ ವರದಿ ಬರಬೇಕು...

**ಸಭಾಪತಿಯವರು:-** ಮಾನ್ಯ ಎಸ್.ವ್ಹಿ. ಸಂಕನೂರನವರೇ, ತಮ್ಮ ಪ್ರಶ್ನೆಗೆ ಸಚಿವರು ಉತ್ತರ ಹೇಳಿದ್ದಾರೆ. ಆದ್ದರಿಂದ ನಾವು ಮುಂದಿನ ಪ್ರಶ್ನೆಗೆ ಹೋಗೋಣ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಇನ್ನು ಒಂದು ವರ್ಷದೊಳಗಾಗಿ ಅನುದಾನ ಕೊಡುತ್ತೇವೆ ಎಂದಾದರೂ ಸಚಿವರು ಉತ್ತರ ಹೇಳಲಿ.

**ಸಭಾಪತಿಯವರು:-** ಆಯಿತು. ತಮ್ಮ ಪ್ರಶ್ನೆಗೆ ಸಚಿವರು ಈಗಾಗಲೇ ಉತ್ತರ ನೀಡಿದ್ದಾರೆ. ಸಾಕು.

**ಪ್ರಶ್ನೆ ಸಂಖ್ಯೆ: 636**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಉತ್ತರ ಲಗತ್ತಿಸಿದೆ.

**ಸಭಾಪತಿಯವರು:–** ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರ 636ನೇ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರು ಹೇಳಿದ್ದಾರೆ. ಆದುದರಿಂದ, ಆ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳುತ್ತೇನೆ. ಹಾಗಾಗಿ, ಸದ್ಯಕ್ಕೆ ಆ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ. **(ಗೊಂದಲ)** ಇಲ್ಲ, ಇಲ್ಲಾ. ನನ್ನ ಬಳಿ ಹೆಚ್ಚು ಸಮಯಾವಕಾಶವಿಲ್ಲ. ನಾನು ಅವರಿಗೆ ಭಾಷಣ ಮಾಡುವುದಕ್ಕೆ ಬಿಡಲಿಲ್ಲ. ತಮಗೆ ಬಿಡಬೇಕೇ? ಬೇಡಿ. **(ಗೊಂದಲ)** ಮುಂದಿನ ಪ್ರಶ್ನೆ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರದ್ದು. ನಾನು ಮುಂದಿನ ವಾರ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ಮಾನ್ಯ ಸಚಿವರು ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ನಾನು ಏನು ಮಾಡುವುದಕ್ಕೆ ಆಗುತ್ತದೆ? ನಾನು ಅವರಿಗೆ ಹೇಳಿದ್ದೇನೆ. ನಿಮ್ಮ ಪ್ರಶ್ನೆ ಬಗ್ಗೆ ಬೇಡ. ಮಾನ್ಯ ಸಚಿವರು ಈಗ ಸದನದಲ್ಲಿ ಉಪಸ್ಥಿತರಿಲ್ಲ. ಮುಂದಿನ ವಾರ ಹಾಕಿಕೊಳ್ಳುವುದಕ್ಕೆ ಹೇಳಿದ್ದಾರೆ. ನಾನು ಹಾಕಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆಯಿತು. ಮುಂದಿನ ವಾರ ಬೇಡ. ಕನಿಷ್ಠ ಪಕ್ಷ ಸೋಮವಾರವಾದರೂ ನನ್ನ ಪ್ರಶ್ನೆ ಹಾಕಿಕೊಳ್ಳಿ.

**ಸಭಾಪತಿಯವರು:–** ನಾನು ತಮ್ಮ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳುತ್ತೇನೆ. ತಮ್ಮ ಪ್ರಶ್ನೆಗೆ ಉತ್ತರ ನೀಡಲು ಸಚಿವರು ಬೇಡವೇ? ಹಾಗಾದರೆ ಈಗಲೇ..

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅದು ಹಾಗಲ್ಲ. ದಯಮಾಡಿ, ಒಂದು ನಿಮಿಷ ನಾನು ಹೇಳುವುದನ್ನು ಕೇಳಿ.

**ಸಭಾಪತಿಯವರು:–** ಸಚಿವರು ನಿಮ್ಮ ಉಪ ಪ್ರಶ್ನೆಗಳಿಗೆ ಮೌಖಿಕವಾಗಿ ಉತ್ತರ ಕೊಡುವುದು ಬೇಡವೆಂದರೆ ಹೇಳಿ, ಈಗಲೇ ಉತ್ತರವನ್ನು ಮಂಡಿಸಲಾಗಿದೆಯೆಂದು ತೆಗೆದುಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮುಂದಿನ ವಾರ ಬೇಡ, ಸೋಮವಾರವೇ ಉತ್ತರ ಕೊಡಿಸಿ. ಮುಂದಿನ ವಾರ ಏನಾಗುತ್ತದೆಯೋ, ಯಾರಿಗೆ ಗೊತ್ತು?

**ಸಭಾಪತಿಯವರು:–** ಆಯಿತು, ನೋಡೋಣ. ಮುಂದಿನ ಪ್ರಶ್ನೆ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರದು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ: 663**
**(ಉತ್ತರ ಲಗತ್ತಿಸಿದೆ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳಿಗೆ ಎರಡು ಸಂಗತಿಗೆ ನಾನು ಅಭಿನಂದನೆಯನ್ನು ಹೇಳುತ್ತೇನೆ. ಒಂದು, ಅವರು ಗೌರವಧನ ಹೆಚ್ಚಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ಎನ್ನುವಂತಹ ಪ್ರಶ್ನೆಗೆ 'ಹೌದು' ಎಂದು ಒಪ್ಪಿಕೊಂಡಿದ್ದಾರೆ. ಎರಡನೆಯದು, ತಿಂಗಳು, ತಿಂಗಳು ಸಂಬಳ ಬಿಡುಗಡೆ ಆಗುತ್ತಿದೆಯೆನ್ನುವುದನ್ನು ಸಹ ಒಪ್ಪಿಕೊಂಡಿದ್ದಾರೆ. ನಂತರ ನೇರವಾದ ಪ್ರಶ್ನೆಗಳನ್ನೇ ನಾನು ಕೇಳುತ್ತೇನೆ. ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಮೊದಲನೆಯದಾಗಿ, ಅತಿಥಿ ಉಪನ್ಯಾಸಕರಿಗೆ ಸರ್ಕಾರ ಕೊಡುತ್ತಿರುವಂತಹ ಸಂಬಳ ಎಷ್ಟು? ಎಷ್ಟು ಕೊಡುತ್ತಿದ್ದಾರೆ ಎನ್ನುವಂತಹ ವಿವರ ಬೇಕು.

*(253)/17-3-2017/11-50/ಎಲ್‌ಎಂ/ಎಕೆ*

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:- ಮುಂದು.** ಎರಡನೆಯದಾಗಿ, ಅತಿಥಿ ಉಪನ್ಯಾಸಕರಿಗೆ ಸಂಬಳ ಎಷ್ಟು ಕೊಡಬೇಕು ಎನ್ನುವ ಬಗ್ಗೆ ಯುಜಿಸಿಯ ಮಾನದಂಡವಿದೆ. ಆ ಯುಜಿಸಿಯ ಮಾನದಂಡ ಏನು? ಅದರ ಪ್ರಕಾರ ಕೊಡುತ್ತಿಲ್ಲ, ಏಕೆ ಕೊಡುತ್ತಿಲ್ಲ? ಮೂರನೆಯ ಪ್ರಶ್ನೆ, ಅತಿಥಿ ಉಪನ್ಯಾಸಕರಿಗೆ 8 ಗಂಟೆಗಳಿಗಿಂತ ಹೆಚ್ಚಿನ ಸಮಯ ಕೆಲಸ ಮಾಡಬಾರದು ಎಂದು ಕಾನೂನು ಮಾಡಿದ್ದಾರೆ. ಹೀಗಾಗಿ ಅವರು ಬೇರೆ-ಬೇರೆ ಶಾಲಾ-ಕಾಲೇಜುಗಳಿಗೆ ಹೋಗಿ ಪಾಠ ಮಾಡುವಂತಹ ಅನಿವಾರ್ಯತೆ ಇದೆ. ಕೊಡುತ್ತಿರುವ ಸಂಬಳ ಕಡಿಮೆ, 8 ಗಂಟೆಗಿಂತ ಜಾಸ್ತಿ ಸಮಯ ಕೆಲಸ ತೆಗೆದುಕೊಂಡರೆ ಮುಂದೆ ಎಲ್ಲಿ ಖಾಯಂ ಮಾಡಿ ಎಂದು ಕೇಳುತ್ತಾರೋ ಎನ್ನುವ ಕಾರಣಕ್ಕಾಗಿ ಅವರಿಗೆ ಅವಕಾಶವಿದ್ದರೂ ಕೆಲಸ ಮಾಡಲು ಬಿಡುತ್ತಿಲ್ಲ. ಅವರಿಗೆ ಪೂರ್ತಿ ಅವಕಾಶ ಕೊಡಲು ತಮ್ಮಿಂದ ಏಕೆ ಸಾಧ್ಯವಿಲ್ಲ. ಸರ್ಕಾರ ಕನ್ನಡದಲ್ಲಿ ಕೊಟ್ಟಿರುವ ಉತ್ತರವನ್ನು ಓದುತ್ತೇನೆ, ನನಗೆ ಅದು ಅರ್ಥವಾಗಲಿಲ್ಲ. ಅದಕ್ಕೆ ಮಂತ್ರಿಗಳು ಉತ್ತರ ಕೊಡಬೇಕು. ಪ್ರತಿ ತಿಂಗಳು ಸಂಬಳ ಕೊಡಲು ಏನು ಸಮಸ್ಯೆ ಎಂದು ಕೇಳಿರುವುದಕ್ಕೆ, '2016-17ನೇ ಸಾಲಿನಲ್ಲಿ ಸರ್ಕಾರವು ಖಜಾನೆ-2ನ್ನು ಅನುಷ್ಠಾನಗೊಳಿಸಿದ್ದು, ಇದರನ್ವಯ ಪ್ರಾದೇಶಿಕ ಜಂಟಿ ನಿರ್ದೇಶಕರುಗಳು ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳನ್ನು ರೋಲ್ ಮ್ಯಾಪಿಂಗ್ ಮಾಡಿಸಿ, ತದನಂತರ ಪ್ರಾಂಶುಪಾಲರುಗಳು ಖಜಾನೆಯಿಂದ ಡಿಎಸ್‌ಪಿ ಕೀ ಗಳನ್ನು ಪಡೆದು ಅತಿಥಿ ಉಪನ್ಯಾಸಕರನ್ನು ರೆಸಿಪಿಯಂಟ್ ಮಾಡಿಸಿ ಗೌರವಧನ ಪಾವತಿಸಬೇಕಾಗಿರುತ್ತದೆ' ಎಂದು ಉತ್ತರ ಕೊಟ್ಟಿದ್ದಾರೆ. ಇವರ ಕನ್ನಡ ತುಂಬಾ ಚೆನ್ನಾಗಿದೆ. ಈ ಸಮಸ್ಯೆಗಳು administrative matters ಅಷ್ಟು ಬಹಳ ದೊಡ್ಡ ಸಮಸ್ಯೆಗಳೇನಲ್ಲ. ಪ್ರತಿ ತಿಂಗಳು ಏಕೆ ಸಂಬಳ ಕೊಡುವುದಿಲ್ಲ ಎನ್ನುವುದಕ್ಕೆ administrative procedure ನಲ್ಲಿರುವ lapses ಬಗ್ಗೆ ಹೇಳುತ್ತಾರೆ. ಮೊದಲ ಎರಡು ತಿಂಗಳು ತೊಂದರೆಯಾಗುತ್ತದೆ ಅದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಅದು ಆದಮೇಲೆ ತಿಂಗಳು-ತಿಂಗಳು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂಬಳ ಕೊಡಲು ಏನು ತೊಂದರೆ? ಅಕೌಂಟ್ ನಂಬರ್ ಕೊಡಬೇಕು, ಆಧಾರ್ ಕಾರ್ಡ್ ಸಂಖ್ಯೆ ಈ ರೀತಿ ಎಲ್ಲಾ ಮಾಹಿತಿಗಳನ್ನು ಬ್ಯಾಂಕ್‌ಗೆ ಕೊಡಬೇಕಾಗುವುದರಿಂದ ಮೊದಲ ಎರಡು ತಿಂಗಳು ತಡವಾಗುತ್ತದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಕೊಡುವ 8000-10,000 ರೂ.ಗಳನ್ನು ಕೂಡಾ ಪ್ರತಿ ತಿಂಗಳು ಕೊಡಲು ಇವರಿಗೆ ಏನು ತೊಂದರೆ? ಈ ರೀತಿ ಮಾಡಿದರೆ ಆ ಉಪನ್ಯಾಸಕರು ಹೇಗೆ ತಮ್ಮ ಕೆಲಸವನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕು ಎಂದು ಕೇಳುತ್ತೇನೆ. ಪ್ರತಿ ತಿಂಗಳು ಸಂಬಳವನ್ನು ಬಿಡುಗಡೆ ಮಾಡಲು ಏನು ಸಮಸ್ಯೆ ಎನ್ನುವುದಕ್ಕೆ ಇನ್ನೊಂದು ಕಾರಣ ತಾಂತ್ರಿಕ ಸಮಸ್ಯೆ ಎಂದು ಹೇಳಿದ್ದಾರೆ. ಆ ತಾಂತ್ರಿಕ ತೊಂದರೆಗಳು ಏನು ಎನ್ನುವುದನ್ನು ಕೂಡಾ ಮಾನ್ಯ ಸಚಿವರು ಸ್ಪಷ್ಟಪಡಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಗಳೇ, ಈಗ ನಮ್ಮ ರಾಜ್ಯದಲ್ಲಿ ಸುಮಾರು 13,500ಕ್ಕಿಂತ ಹೆಚ್ಚು ಗೌರವ ಉಪನ್ಯಾಸಕರು ಸರ್ಕಾರಿ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಎಷ್ಟು ಸಂಬಳವನ್ನು ಕೊಡುತ್ತೀರಿ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ, NET, SLET, PhD ಆಗಿರುವ ಗೌರವ ಉಪನ್ಯಾಸಕರಿಗೆ 11,500 ರೂ.ಗಳಷ್ಟು ಸಂಬಳವನ್ನು ಕೊಡುತ್ತೇವೆ. ಬರಿ Post Graduation ಮಾಡಿಕೊಂಡವರು ಅಂದರೆ ಎಂಎ, ಎಂಕಾಂ, ಎಂಎಸ್‌ಸಿ ಮಾಡಿಕೊಂಡವರಿಗೆ 9,500 ರೂ.ಗಳನ್ನು ಕೊಡುತ್ತೇವೆ. ಒಟ್ಟು 13,557 ಗೌರವ ಉಪನ್ಯಾಸಕರಿಗೆ ನಾವು ಈ ರೀತಿಯ ಸಂಬಳವನ್ನು ಕೊಡುತ್ತಿದ್ದೇವೆ. ಎರಡನೆಯದಾಗಿ, UGC Norms ಏನು ಎನ್ನುವುದನ್ನು ಕೇಳಿದ್ದಾರೆ. UGC Norms issued on February 2010:- *"The UGC has decided that the Guest/Part-time Teachers who possess the minimum qualification for the post of an Assistant Professor should be paid Rs.1,000/- per hour..."* ಯುಜಿಸಿ ಗೈಡಲೈನ್ಸ್ ಪ್ರಕಾರ ಒಬ್ಬ ಅಥಿತಿ ಉಪನ್ಯಾಸಕ ಒಂದು ಗಂಟೆ ಉಪನ್ಯಾಸ ಮಾಡಿದರೆ ಒಂದು ಸಾವಿರ ರೂ.ಗಳನ್ನು ಕೊಡಬೇಕು ಎಂದು ನಿಯಮ ಇದೆ. ಆದರೆ ನಾವು ಈಗ ಅವರಿಗೆ 8 ಗಂಟೆ ಮಾತ್ರ ಕೆಲಸವನ್ನು ಕೊಡುತ್ತಿದ್ದೇವೆ. ಹೀಗಾಗಿ ಯುಜಿಸಿ ನಾರ್ಮ್ಸ್ ಪ್ರಕಾರವೇ ನಾವು ಅವರಿಗೆ ವೇತನವನ್ನು ಕೊಡುತ್ತಿದ್ದೇವೆ. ಎರಡನೆಯದಾಗಿ, ತಿಂಗಳು-ತಿಂಗಳು ಅವರಿಗೆ ಸಂಬಳ ಕೊಡುವುದು ತಡವಾಗುತ್ತಿದೆ ಎಂದು ಹೇಳಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. 2016-17ನೇ ಸಾಲಿನಲ್ಲಿ ಖಜಾನೆ-2 ಎನ್ನುವ ಹೊಸ ಸಾಫ್ಟ್‌ವೇರನ್ನು develop ಮಾಡಿದ್ದಾರೆ. ಇದರಿಂದ ನೇರವಾಗಿ ಫಲಾನುಭವಿಗಳಿಗೆ ಹಣ ಅವರ ಖಾತೆಗೆ ಹೋಗುವಂತಹ ವ್ಯವಸ್ಥೆಯನ್ನು ಮಾಡಿದ್ದಾರೆ. ಈಗ ಯಾವುದೆ ಚೆಕ್ ವ್ಯವಹಾರವಿಲ್ಲ ನೇರವಾಗಿ ಹಣ ಅವರ ಖಾತೆಗೆ ಹೋಗುತ್ತದೆ. ಇದು ಈ ವರ್ಷ ಪ್ರಾರಂಭಿಕ ಹಂತದಲ್ಲಿರುವುದರಿಂದ ಅವರ ಅಕೌಂಟ್ ನಂಬರ್, ಬ್ಯಾಂಕ್ ಕೋಡ್ ನಂಬರ್, ಐಎಫ್‌ಎಸ್‌ಸಿ ಕೋಡ್ ನಂಬರ್, MICR ಕೋಡ್ ನಂಬರ್ ಎಲ್ಲಾ ಬೇಕಾಗಿರುವುದರಿಂದ, ಈ ಉಪನ್ಯಾಸಕರು ಈ ಎಲ್ಲಾ ವಿವರಗಳನ್ನು ಕೊಡಲು ತಡ ಮಾಡಿದ್ದರಿಂದ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸ್ವಲ್ಪ ವಿಳಂಬವಾಗಿದೆ ಇದನ್ನು ನಾನು ಒಪ್ಪುತ್ತೇನೆ. It is a new system. ಆದ್ದರಿಂದ 2017–18ನೇ ಶೈಕ್ಷಣಿಕ ವರ್ಷದಲ್ಲಿ ಮೊದಲ ಎರಡು ತಿಂಗಳು ತಡವಾಗಿದೆ. ಅದನ್ನು ಮಾನ್ಯ ಸದಸ್ಯರು ಒಪ್ಪಿಕೊಂಡಿದ್ದಾರೆ. ಮುಂದಿನ ತಿಂಗಳಿಂದ ತಡಮಾಡದೆ ನೇರವಾಗಿ ಅವರ ಖಾತೆಗೆ ಹಣ ಹೋಗುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆ.

**ಶ್ರೀ ಐವನ್ ಡಿ'ಸೋಜಾ:–** ಗೌರವ ಉಪನ್ಯಾಸಕರ ವೇತನವನ್ನು ಹೆಚ್ಚು ಮಾಡಬೇಕು ಎನ್ನುವ ಪ್ರಸ್ತಾವನೆ ಇದೆ. ಅದನ್ನು ಸಹ ಗಮನಕ್ಕೆ ತೆಗೆದುಕೊಳ್ಳಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಗಳೇ, ವಿಶ್ವವಿದ್ಯಾಲಯಗಳಲ್ಲಿಯ ಅತಿಥಿ ಉಪನ್ಯಾಸಕರುಗಳಿಗೆ 22,000 ರೂ.ಗಳ ಸಂಬಳವನ್ನು ಕೊಡುತ್ತೀರಿ. ನನ್ನ ಪ್ರಶ್ನೆ ಎಂದರೆ, 8ಗಂಟೆ ಕೆಲಸ ಮಾಡಬೇಕು ಎಂದು ಶರತ್ತು ಹಾಕಿ 8000 ರಿಂದ 10,000 ರೂ.ಗಳಷ್ಟು ಸಂಬಳ ಕೊಟ್ಟರೆ ಅವರು ಜೀವನ ಮಾಡಲು ಸಾಧ್ಯವೆ ಇಲ್ಲ. 8 ಗಂಟೆಗಳ work load ಏಕೆ ಹಾಕಿದ್ದೀರಿ? ಅವರು 25 ರಿಂದ 30 ಕಿ.ಮೀ ದೂರ ಇರುವ ಕಾಲೇಜುಗಳಿಗೆ ಹೋಗಿ ಪಾಠ ಮಾಡುತ್ತಾರೆ. ಅವರಿಗೆ ಪೂರ್ತಿ work load ಕೊಟ್ಟರೆ ತಾವು ಹೇಳಿದ ಹಾಗೆ ಒಂದು ಗಂಟೆಗೆ 1000 ರೂ.ಗಳಂತೆ ಹೆಚ್ಚಿನ ಸಂಬಳವನ್ನು ತೆಗೆದುಕೊಳ್ಳಲು ಸಾಧ್ಯವಿದೆ. 8ಗಂಟೆ ಕಾಲ ಮಾತ್ರ ಕೆಲಸ ಮಾಡಬೇಕೆಂದು ಇಲಾಖೆಯಲ್ಲಿ ಏಕೆ ನಿಯಮ ಮಾಡಿಕೊಂಡಿದ್ದೀರಿ? University ನಲ್ಲಿ, University ಮಾನದಂಡ ಪ್ರಕಾರ 22,000 ರೂ.ಗಳ ಸಂಬಳವನ್ನು ಕೊಡುತ್ತೀರಿ. ಇಲ್ಲಿ ಏಕೆ ಕೊಡುವುದಿಲ್ಲ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಗಣೇಶ್‌ರವರು ಪ್ರಶ್ನೆಯನ್ನು ಸರಿಯಾಗಿ ಕೇಳುತ್ತಿಲ್ಲ. ಒಂದು ಗಂಟೆಗೆ ಒಂದು ಸಾವಿರ ರೂ.ಗಳು, ವಾರಕ್ಕೆ 8ಗಂಟೆಗಳು, ನಾಲ್ಕು ವಾರಕ್ಕೆ 32 ಗಂಟೆಗಳು ಹೀಗಾಗಿ 32,000 ರೂ.ಗಳ ಸಂಬಳವನ್ನು ಕೊಡುತ್ತೇವೆ ಎಂದು ಸರ್ಕಾರ ಹೇಳಿದ್ದರೆ ನಾವು ಒಪ್ಪಿಕೊಳ್ಳೋಣ. ಸರ್ಕಾರ ಹೇಳಿರುವ ಪ್ರಕಾರವೇ ಕೊಡಲಿ, ಒಂದು ಗಂಟೆಗೆ ಒಂದು ಸಾವಿರ ರೂ.ಗಳು.

**ಶ್ರೀ ಐವನ್ ಡಿ'ಸೋಜಾ:–** ಅತಿಥಿ ಉಪನ್ಯಾಸಕರ ಸಂಬಳವನ್ನು ಹೆಚ್ಚು ಮಾಡುವ ಬಗ್ಗೆ ಪ್ರಸ್ತಾವನೆ ಇದೆ. ಅದನ್ನು ಸರ್ಕಾರ ಪರಿಶೀಲನೆ ಮಾಡಬೇಕು. ಈಗ ಕೊಡುತ್ತಿರುವ ಸಂಬಳದಲ್ಲಿ ಅವರು ಜೀವನ ಮಾಡಲು ಸಾಧ್ಯವಾಗುವುದಿಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಮಂತ್ರಿಗಳು ಉತ್ತರ ಕೊಡಲು ಬಿಡಿ. You have raised a pertinent point and let him answer. ಮಾನ್ಯ ಶ್ರೀಕಂಠೇಗೌಡರು ವಿಷಯವನ್ನು ಎತ್ತಿದ್ದಾರೆ. ಅದಕ್ಕೆ ಮಂತ್ರಿಗಳು ಏನು ಉತ್ತರ ಕೊಡುತ್ತಾರೆ ಕೇಳಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಒಂದು ಗಂಟೆಗೆ ಒಂದು ಸಾವಿರ ರೂ.ಗಳು ಎಂದರೆ, 8 ಗಂಟೆಗೆ 11,500 ರೂ.ಗಳು ಹೇಗಾಗುತ್ತದೆ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಸರ್ಕಾರ ಗಂಟೆಗೆ ಒಂದು ಸಾವಿರ ರೂ.ಗಳಂತೆ ಸಂಬಳವನ್ನು ಕೊಡುತ್ತಿಲ್ಲ.

**ಸಭಾಪತಿಯವರು:-** ಮಂತ್ರಿಗಳು ಏನು ಉತ್ತರ ಹೇಳುತ್ತಾರೆ ಎನ್ನುವುದನ್ನು ಮೊದಲು ಕೇಳಿ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಗಳೇ, ನಾನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಯುಜಿಸಿ ನಾರ್ಮ್ಸ್‌ಗಿಂತ ಹೆಚ್ಚಿನ ಸಂಬಳವನ್ನು ಈಗ ನಾವು ಕೊಡುತ್ತಿದ್ದೇವೆ. ಈಗ ಇರುವ 13,500 ಅತಿಥಿ ಉಪನ್ಯಾಸಕರಿಗೆ work load sufficient ಆಗಿದೆ. ಅದನ್ನು ಹೆಚ್ಚು ಮಾಡಬೇಕು ಎಂದರೆ, ಉಪನ್ಯಾಸಕರನ್ನು ಕಡಿಮೆ ಮಾಡಬೇಕಾಗುತ್ತದೆ. ಏಕೆಂದರೆ work load ಇಲ್ಲ, work load ಆಧಾರದ ಮೇಲೆ ಇದು ಆಗುತ್ತದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಅವರು ಗೌರವ ಉಪನ್ಯಾಸಕರಿಗೆ ಗಂಟೆ ಪ್ರಕಾರ ಸಂಬಳವನ್ನು ಕೊಡುತ್ತಿಲ್ಲ. ಅವರು ಕೊಡುತ್ತಿರುವುದು lump sum ಆಗಿ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಯುಜಿಸಿ ನಾರ್ಮ್ಸ್ ಪ್ರಕಾರ ಒಂದು ತಿಂಗಳಿಗೆ ಒಂದು ಗಂಟೆ ಆಧಾರದ ಮೇಲೆ ಒಟ್ಟು ಎಂಟು ಗಂಟೆ ಅಂದರೆ 8000 ರೂ.ಗಳ ಸಂಬಳವನ್ನು ಕೊಡಬೇಕಾಗುತ್ತದೆ. ಆದರೆ ಸರ್ಕಾರ ಇನ್ನೂ ಹೆಚ್ಚಿಗೆ 11,500 ರೂ.ಗಳಷ್ಟು ಸಂಬಳವನ್ನು ಕೊಡುತ್ತಿದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಇದು ಈಗ ಅವರಿಗೆ ಕೊಡುತ್ತಿರುವ lump sum ಸಂಬಳ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೇ, ನಾನು ಯುಜಿಸಿ ಗೈಡ್‌ಲೈನ್ಸ್ ಓದಿದ್ದೇನೆ. ಇದು ಬಹಳ ಕಷ್ಟದ ಕೆಲಸ. ನಮ್ಮ ರಾಜ್ಯದಲ್ಲಿ ಮಾನ್ಯ ಸಭಾಪತಿಗಳು ಉನ್ನತ ಶಿಕ್ಷಣ ಸಚಿವರಾಗಿ ಕೆಲಸ ಮಾಡಿದ್ದಾರೆ. ಅವರಿಗೆ ಎಲ್ಲ ವಿಚಾರ ಗೊತ್ತಿದೆ. ನಮ್ಮ ರಾಜ್ಯದಲ್ಲಿ 412 ಸರ್ಕಾರಿ ಕಾಲೇಜುಗಳಿದ್ದು, ಒಟ್ಟು 7000 ಉಪನ್ಯಾಸಕರ ಹುದ್ದೆಗಳಿವೆ. ಈಗಾಗಲೇ 2160 ಹುದ್ದೆಗಳಿಗೆ KEA ಯಿಂದ exam ಮಾಡಿ, ಅವರಿಗೆ ಪೋಸ್ಟಿಂಗ್ ಕೊಡುತ್ತಿದ್ದು, ಎಲ್ಲ ದಾಖಲೆಗಳನ್ನು ಪರಿಶೀಲನೆ ಮಾಡಲಾಗುತ್ತಿದೆ. ಹೀಗಾಗಿ 7000 ಹುದ್ದೆಗಳಲ್ಲಿ 6500 ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಿದಂತಾಗುತ್ತದೆ. ಇನ್ನು 500 ಹುದ್ದೆಗಳೇನು ಖಾಲಿ ಉಳಿಯುತ್ತವೆ, ಅವುಗಳನ್ನು ಸಹ ಭರ್ತಿ ಮಾಡಿಕೊಳ್ಳಲು ಈ ವರ್ಷವೇ ಅನುಮತಿಯನ್ನು ಕೊಡುತ್ತಿದ್ದೇವೆ. ಹೀಗಾಗಿ 100 percent recruitment ಆಗುತ್ತದೆ. ಹೀಗಿದ್ದರೂ ಸಹ ನಾವು ಹೆಚ್ಚುವರಿ ಉಪನ್ಯಾಸಕರನ್ನು ಮುಂದುವರೆಸಿಕೊಂಡು ಹೋಗುತ್ತಿದ್ದೇವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು ಕೊಟ್ಟಿರುವ ಮಾಹಿತಿ ಸರಿ ಇಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯರೇ, ಅತಿಥಿ ಉಪನ್ಯಾಸಕರ ಸಂಬಳವನ್ನು High School ನಲ್ಲಿ enhance ಮಾಡಿದ್ದಾರೆ, PU ನಲ್ಲಿಯು enhance ಮಾಡಿದ್ದಾರೆ. ದಯಮಾಡಿ 13,500 ರೂ.ಗಳು ಇರುವುದನ್ನು 15,000 ರೂ.ಗಳಷ್ಟಾದರೂ ಮಾಡಿ. ಕನಿಷ್ಠ 25,000 ರೂ.ಗಳಷ್ಟು ಸಂಬಳವನ್ನು ಕೊಡಿ ಎಂದು ಯುಜಿಸಿ ಹೇಳುತ್ತದೆ. ಅಷ್ಟು ಕೊಡದಿದ್ದರೂ 13,500 ರೂ.ಗಳು ಇರುವುದನ್ನು 15,000 ರೂ.ಗಳಾಗಿ ಮಾಡಲು ಸರ್ಕಾರಕ್ಕೆ ಎನು ತೊಂದರೆ?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಅವರು ಕೊಟ್ಟಿರುವ ಮಾಹಿತಿ ಸರಿ ಇಲ್ಲ.

**ಸಭಾಪತಿಯವರು:–** ಮಾನ್ಯ ಸಚಿವರೇ ತಾವು ಸದನದ mood ಅನ್ನು ಅರ್ಥ ಮಾಡಿಕೊಂಡಿದ್ದೀರಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಸರ್ಕಾರ ಅವರ ಸಂಬಳವನ್ನಾದರೂ ಹೆಚ್ಚಿಗೆ ಮಾಡಬೇಕು.

***(254) YL-BNS/17.03.2017/12.00***

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಪ್ರಶ್ನೆ ಅದಲ್ಲ. ಒಂದು ಮಾತು ಸ್ಪಷ್ಟವಾಗಿದೆ. ಏಕೆಂದರೆ heart burning issue ಇದೆ. ಏಕೆಂದರೆ Government Lecturers ಕೊಡುವಂತಹ ಸಂಬಳಕ್ಕೂ ಇವರಿಗೆ ಕೊಡುವ ಸಂಬಳಕ್ಕೂ ಬಹಳ ವ್ಯತ್ಯಾಸವಿದೆ. ಆದರೆ, ನಾನು ಮಂತ್ರಿಗಳನ್ನು ಕೇಳುವುದೇನೆಂದರೆ ಸುಪ್ರೀಂ ಕೋರ್ಟ್‌ನ ತೀರ್ಪಿನ ಪ್ರಕಾರ, 'Equal pay for equal work' ಎಂದು ಇದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಈಗ ಅದರ ಬಗ್ಗೆ ಹೋದರೆ ಚರ್ಚೆ ಕಷ್ಟವಾಗುತ್ತದೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, Article 141 ರ ಪ್ರಕಾರ it is binding. ದಯಮಾಡಿ ಇದರ ಹಿನ್ನೆಲೆಯಲ್ಲಿ ಈ heart burning issue ಇರತಕ್ಕಂಥದ್ದು.... ಉದಾಹರಣೆಗೆ ಹೇಳುವುದಾದರೆ, ಪಾವಗಡದಲ್ಲಿ regular lecturers ಗೆ ರೂ.75,000 ದಿಂದ ರೂ.80,000 ಸಂಬಳ ಬರುತ್ತದೆ. ಆದರೆ ಅತಿಥಿ ಉಪನ್ಯಾಸಕರು ರೂ.10,000 ಸಂಬಳ ತೆಗೆದುಕೊಂಡು ಎಲ್ಲ ವಿಷಯವನ್ನು ನಾವೇ ಬೋಧನೆ ಮಾಡಬೇಕೆಂದು ಹೇಳುತ್ತಾರೆ. ಇದಕ್ಕೆ ನಾವು ಏನು ಮಾಡಬೇಕೆಂದು ಹೇಳುತ್ತಾರೆ. ದಯವಿಟ್ಟು ಸರ್ಕಾರ ಇದನ್ನು ಅತ್ಯಂತ ಮಾನವೀಯತೆಯ ನೆಲೆಗಟ್ಟಿನಲ್ಲಿ ಚಿಂತನೆ ಮಾಡುವುದು ಸೂಕ್ತ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, ನಾನು ಕೇಳಿರುವುದು ಎರಡು ಸರಳವಾದ ಪ್ರಶ್ನೆಗಳು.

**ಸಭಾಪತಿಯವರು:–** ಈಗಾಗಲೇ ಈ ಪ್ರಶ್ನೆಗೆ 20 ನಿಮಿಷವಾಗಿದೆ. ಒಂದೇ ಪ್ರಶ್ನೆಗೆ 20 ನಿಮಿಷವಾದರೆ ಹೇಗೆ?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, ತಿಂಗಳು, ತಿಂಗಳು ಸಂಬಳ ಕೊಡುತ್ತೀರಾ ಎಂದು ಕೇಳಿದ್ದಕ್ಕೆ ಕೊಡುತ್ತೇವೆಂದು ಹೇಳಿದ್ದಾರೆ. ಹಾಗೂ ಕಡಿಮೆ ಸಂಬಳ ಕೊಡುತ್ತಿರುವುದಾಗಿ ಒಪ್ಪಿಕೊಂಡಿದ್ದಾರೆ.

**ಸಭಾಪತಿಯವರು:–** ಸಚಿವರೆ ಸಂಬಳವನ್ನು ಜಾಸ್ತಿ ಮಾಡುವುದಕ್ಕೂ ಪ್ರಯತ್ನ ಮಾಡುತ್ತೀರಾ ಎನ್ನುವಂತಹ ಪ್ರಶ್ನೆಗೆ ಅಷ್ಟೇ ಉತ್ತರವನ್ನು ಹೇಳಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, ಪ್ರಯತ್ನ ಮಾಡುವುದಷ್ಟೇ ಅಲ್ಲ.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, ಹೆಚ್ಚುವರಿ ಸಂಬಳ ಮಾಡುವುದು ಕಷ್ಟದಾಯಕ ಕೆಲಸ. ಏಕೆಂದರೆ ನಮ್ಮ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಳ್ಳಬೇಕಾಗುತ್ತದೆ. ಈಗಾಗಲೇ ಶಿಕ್ಷಣ ಇಲಾಖೆಗೆ ಈ ವರ್ಷದ ಬಜೆಟ್‌ನಲ್ಲಿ ಇಪ್ಪತ್ತೈದು ಸಾವಿರ ಕೋಟಿಯನ್ನು ಕೊಟ್ಟಿದ್ದಾರೆ. ಅದು ತಮಗೂ ಗೊತ್ತಿದೆ. ಎಷ್ಟು ಸಂಬಳ ಕೊಡಿಸುತ್ತೇವೆಯೋ ಅದರ ಮೇಲೆ ಹೋಗುತ್ತದೆ. ಈಗಾಗಲೇ ಪ್ರಾಥಮಿಕ ಮತ್ತು ಉನ್ನತ ಶಿಕ್ಷಣ ಇಲಾಖೆಯಿಂದ 90% ಸಂಬಳ ಹೋಗುತ್ತಿದೆ. ಆದ್ದರಿಂದ ಹೆಚ್ಚುವರಿ ಸಂಬಳ ಮಾಡುವುದು ಸ್ವಲ್ಪ ಕಷ್ಟದ ಕೆಲಸ. ಆದಾಗ್ಯೂ ಕೂಡ ನಾವು University Grants Commission (UGC) Guidelines ಗಿಂತ ಹೆಚ್ಚುವರಿಯಾಗಿ ಹಣವನ್ನು ಕೊಡುತ್ತಿದ್ದೇವೆ. ಮಾನ್ಯ ಉಗ್ರಪ್ಪನವರು ಆರ್ಟಿಕಲ್ 141 ಪ್ರಕಾರ ಏನು ಹೇಳಿದ್ದಾರೆಯೋ ಅದೇ ರೀತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮದು ಒಂದು Section ಇದೆ. ಮಾನ್ಯ ಉಗ್ರಪ್ಪನವರದು Article ಇರುವಂತಹದ್ದು, we have our own Section.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಅದು ಈಗ ಬರುವುದಿಲ್ಲ.

**ಸಭಾಪತಿಯವರು:-** ಅದೆಲ್ಲಾ ಚರ್ಚೆ ಮಾಡುವುದು ಬೇಡ. ಸಾಕು.

**(ಗೊಂದಲ)**

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ನಮ್ಮ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಸಂಬಳವನ್ನು ಹೆಚ್ಚು ಮಾಡುವ ಬಗ್ಗೆ ಸರ್ಕಾರವು ಗಂಭೀರವಾಗಿ ಪರಿಶೀಲನೆ ಮಾಡುತ್ತದೆ. ಸದಸ್ಯರ ಸಲಹೆ ಉತ್ತಮವಾಗಿದೆ. ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಪರಿಶೀಲನೆ ಮಾಡುತ್ತೇವೆ.

**ಸಭಾಪತಿಯವರು:-** ಧನ್ಯವಾದಗಳು.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 703 (ಉತ್ತರ ಲಗತ್ತಿಸಿದೆ)**

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವಂತಹ ಪ್ರಶ್ನೆ 'ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಓ) ಹುದ್ದೆಯನ್ನು Group 'B', Gazetted ಹುದ್ದೆಗೆ ಉನ್ನತೀಕರಿಸುವ ವಿಚಾರ ಸರ್ಕಾರದ ಮುಂದಿದೆಯೇ' ಎನ್ನುವುದು. 'ಸರ್ಕಾರದ ಪರಿಶೀಲನೆಯಲ್ಲಿದೆ' ಎನ್ನುವಂತಹ ಉತ್ತರವನ್ನು ಸಚಿವರು ಕೊಟ್ಟಿದ್ದಾರೆ. ಆದರೆ, ಇವತ್ತಿನ ಪರಿಸ್ಥಿತಿಯಲ್ಲಿ ಇವರು ಇದನ್ನು ಸಣ್ಣ ವಿಚಾರವಾಗಿ ಪರಿಗಣಿಸಿ ಉತ್ತರವನ್ನು ಕೊಟ್ಟಿದ್ದಾರೆ. ಎಷ್ಟು ಸಮಸ್ಯೆಗಳಿವೆ ಎನ್ನುವುದರ ಬಗ್ಗೆ ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ದಯವಿಟ್ಟು ಸಭಾಪತಿಯವರು ಅರ್ಧದಲ್ಲಿಯೇ ನಿಲ್ಲಿಸಬಾರದು ಎಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ನೀವು ಪ್ರಶ್ನೆ ಕೇಳಬೇಕಷ್ಟೇ? ಇಲಾಖೆ ವಿಶ್ಲೇಷಣೆಗೆ ಇದು ಸಮಯವಲ್ಲ. ನೇರವಾಗಿ ಪ್ರಶ್ನೆ ಕೇಳಿ.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೆ, ಪ್ರಶ್ನೆಯನ್ನೆ ಕೇಳುತ್ತಿದ್ದೇನೆ. ಸರ್ಕಾರಿ ನೌಕರರು ಈ ಒಂದು ಇಲಾಖೆಯಲ್ಲಿ ಪರೀಕ್ಷೆಯನ್ನು ಬರೆಯದೇ ಇರುವಂತವರಿಗೆ ಬಡ್ತಿಯನ್ನು ನೀಡಿರುವಂತಹದ್ದಾಗಿದೆ ಹಾಗೂ ಜೇಷ್ಠತೆಯಿಲ್ಲದೇ 261 ಜನಕ್ಕೆ ಸಚಿವರು ಬಡ್ತಿಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ತನಿಖೆಯಾಗಬೇಕೆಂದು ನಾನು ಒತ್ತಾಯಿಸುತ್ತೇನೆ. ಏಕೆಂದರೆ ಬಡ್ತಿಯನ್ನು ಏತಕ್ಕೋಸ್ಕರ ಕೊಟ್ಟಿದ್ದಾರೆ, ಏನು ಎನ್ನುವಂತಹದ್ದು ಯಾರಿಗೂ ಗೊತ್ತಾಗದೇ ಇರುವಂತಹ ಪರಿಸ್ಥಿತಿಯಿದಾಗಿದೆ. ಎರಡನೆಯದಾಗಿ ಸರ್ಕಾರಿ ನೌಕರರಿಗೆ ಬಡ್ತಿಯಿಲ್ಲವೆಂದು ಸಚಿವರು ಹೇಳುತ್ತಿದ್ದಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Inter se, Karnataka Civil Service Rules ನಿಯಮಗಳನ್ವಯ ಇವರ ವಿರುದ್ಧ ಯಾವ ಕ್ರಮವನ್ನೂ ನೀವು ಮಾಡಿಲ್ಲ. ಇದು ಒಂದು ವಿಚಾರ.

ನಾನು ಮೊದಲಿಗೆ ಪ್ರಶ್ನೆಗಳನ್ನು ಕೇಳುತ್ತೇನೆ. ರೋಸ್ಟರ್ ನಿರ್ವಹಣೆ ಮಾಡದೇ ಇರುವಂತವರಿಗೆ ಬಡ್ತಿಯನ್ನು ಕೊಟ್ಟಿದ್ದಾರೆ. ಮತ್ತೆ, ವಾಟರ್‌ಮ್ಯಾನ್ ಮತ್ತು ಬಿಲ್ ಕಲೆಕ್ಟರ್, ಹಾಗೆಯೇ Executive Director (E.D.) ಮತ್ತು Deputy Secretary (D.S.) ಗಳಾಗಿ promotions ಪಡೆದಿದ್ದಾರೆ. ಹಾಗೆಯೇ ದಾಖಲೆಯನ್ನು ತಿದ್ದುಪಡಿ ಮಾಡಿ ದಿನಗೂಲಿ ನೌಕರರಿಗೆ promotion ಕೊಟ್ಟು Executive Officer (E.O.) ಗಳಾಗಿ ಕೆಲಸ ಮಾಡಿಸುತ್ತಿದ್ದಾರೆ. ಇದರೊಳಗೆ ಏನಾಗಿದೆಯೆಂದರೆ ಶ್ರೀ ರಮೇಶ್ ಕುಮಾರ್ ಸಮಿತಿಯವರು ಒಂದು ಸಮ್ಮತಿಯನ್ನು ಕೊಟ್ಟಿದ್ದಾರೆ. ಏನೆಂದರೆ ಪಿ.ಡಿ.ಓ., ಎಸ್.ಡಿ.ಎ., ಕಾರ್ಯದರ್ಶಿ 'ಗ್ರೂಪ್ ಸಿ' ಗೆ ಹಣಕಾಸಿನ ವ್ಯವಹಾರ ಮಾಡುವುದಕ್ಕೆ ಬರುವುದಿಲ್ಲವೆನ್ನುವಂತಹ ಮಾಹಿತಿಯನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರಾದ ಶ್ರೀ ಹೆಚ್.ಕೆ.ಪಾಟೀಲ್‌ರವರು ಒಳ್ಳೆಯವರಿದ್ದಾರೆಂದು ಎಲ್ಲರೂ ಮಾತನಾಡುತ್ತಾರೆ. ಇದರೊಳಗೆ ಯಾವುದೇ ಅವ್ಯವಹಾರ ನಡೆಸುವುದಕ್ಕೆ ಮಾನ್ಯ ಸಚಿವರು ಅವಕಾಶ ಕೊಡುವುದಿಲ್ಲ ಎನ್ನುವಂತಹ ಮಾತನ್ನು ಹೇಳುತ್ತಾರೆ. ಆದರೆ, ಇದರೊಳಗೆ ಸಂಪೂರ್ಣವಾಗಿ ಮೇಲ್ನೋಟಕ್ಕೆ ಎಲ್ಲವೂ ಅವ್ಯವಹಾರ ನಡೆದಿದೆ. ಕಾನೂನಿನ ರೀತ್ಯಾ ಏನು ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತೋ ಅದನ್ನು ಮಾನ್ಯ ಸಚಿವರು ತೆಗೆದುಕೊಂಡಿಲ್ಲ. ಇವೆಲ್ಲವೂ ಸಚಿವರ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಆದರೆ, ಆ ನಿಟ್ಟಿನಲ್ಲಿ ಈ ರೀತಿಯ ಬಡ್ತಿಗಳನ್ನು ಕೊಡುವಂತಹ ವ್ಯವಸ್ಥೆಯಾಗಿದೆ. ಆದರೆ ಸಚಿವರು ಕೊಟ್ಟಿರುವ ಉತ್ತರ ನೋಡಿದರೆ 'ಪರಿಶೀಲನೆಯಲ್ಲಿದೆ' ಎನ್ನುವಂತಹ ಮಾಹಿತಿಯನ್ನು ಕೊಟ್ಟಿದ್ದಾರೆ. ಈಗ ಸದನದಲ್ಲಿ ಮಾನ್ಯ ಗೃಹ ಸಚಿವರು ಇಲ್ಲ. ಅವರು ಸದನದಲ್ಲಿ ಇದ್ದಿದ್ದರೆ ಗೊತ್ತಾಗುತ್ತಿತ್ತು. ದಲಿತ ಹೆಣ್ಣು ಮಗಳ ಮೇಲೆ; ಏಕೆಂದರೆ ಡಾ: ಜಿ.ಪರಮೇಶ್ವರ್‌ರವರು ಕೂಡ ಒಬ್ಬ ದಲಿತರು ಎಂದು ಹೇಳಿಕೊಂಡು . . .

**ಸಭಾಪತಿಯವರು:-** ಇಲ್ಲಿ ಇರುವ ವಿಷಯ promotion ಗೆ ಸಂಬಂಧಪಟ್ಟಿರುವಂಥದ್ದು ಅದನ್ನು ಬಿಟ್ಟು ಬೇರೆ ಮಾತನಾಡುತ್ತಿದ್ದೀರಿ.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ನಾನು ಪ್ರಮೋಶನ್‌ಗೆ ಸಂಬಂಧಪಟ್ಟಿರುವಂಥದ್ದರ ಬಗ್ಗೆ ಹೇಳುವುದಕ್ಕೆ ಹೋಗುತ್ತಿರುವುದು.

**ಸಭಾಪತಿಯವರು:-** ನೀವು ಹೇಳುತ್ತಿರುವುದು promotion ಗೆ ಸಂಬಂಧಪಟ್ಟಿರುವುದೇ?

**ಶ್ರೀ ಎಂ.ಕೆ.ಪ್ರಾಣೇಶ್:-** ಈ ಪ್ರಶ್ನೆಯೊಳಗೆ ಬರುವಂತಹ ವಿಚಾರವನ್ನೇ ಹೇಳುತ್ತಿರುವಂಥದ್ದು. ಕಳೆದ ವರ್ಷ ಎಂ.ಎಸ್.ಬಿಲ್ಡಿಂಗ್‌ನಲ್ಲಿರುವಂತಹ ಆರ್‌ಡಿಪಿಆರ್ ಇಲಾಖೆಯಲ್ಲಿ ಒಬ್ಬ ಹೆಣ್ಣು ಮಗಳ ಮೇಲೆ ಅತ್ಯಾಚಾರ ನಡೆದಿದೆ.



ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದರ ಬಗ್ಗೆ ಮಾನ್ಯ ಪ್ರಧಾನ ಕಾರ್ಯದರ್ಶಿಯವರು ಈ ರೀತಿಯಾಗಿ ನಡೆದಿದೆ ಎಂದು ವರದಿಯನ್ನು ಕೂಡ ಕೊಟ್ಟಿರುತ್ತಾರೆ. ಇದರ ಬಗ್ಗೆ ಇದುವರೆಗೂ ಆರ್‌ಡಿಪಿಆರ್ ಇಲಾಖೆಯವರು ಕ್ರಮವನ್ನು ತೆಗೆದುಕೊಂಡಿಲ್ಲ.

**ಸಭಾಪತಿಯವರು:-** ಪ್ರಮೋಶನ್ ಕೊಡುವ ಬಗ್ಗೆ ಮಾತ್ರ ಮಾತನಾಡಿ. ಪ್ರಶ್ನೋತ್ತರ ವೇಳೆಯಲ್ಲಿ ಇಡೀ ಇಲಾಖೆ ಬಗ್ಗೆ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ.

**ಶ್ರೀ ಎಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಂ.ಕೆ.ಪ್ರಾಣೇಶ್‌ರವರು ಹೇಳುತ್ತಿರುವುದನ್ನು ನೋಡಿದರೆ, ನಾವು ಯಾರನ್ನೋ ಅಮಾನತ್ತುಗೊಳಿಸಿರಬೇಕು; ಅವನು ಏನು ಹೇಳಿದ್ದಾನೆ ಅದನ್ನು ಇವರು ಇಲ್ಲಿ ತಂದು ಹೇಳುತ್ತಿದ್ದಾರೆ. ಇವತ್ತಿನ ದಿವಸ ಮಾನ್ಯ ಸದಸ್ಯರು ಏನು ಒಂದು ಪ್ರಶ್ನೆಯನ್ನು ಕೇಳಿದ್ದಾರೆಂದರೆ, ಪಿ.ಡಿ.ಓ.ಗಳನ್ನು Group 'B' Gazetted ಹುದ್ದೆಗೆ ಉನ್ನತೀಕರಿಸುವುದಕ್ಕೆ ಸರ್ಕಾರದ ಗಮನದಲ್ಲಿದೆಯೇ ಎನ್ನುವುದು. ಅದಕ್ಕೆ ನಾವು ಪರಿಶೀಲನೆ ಮಾಡುತ್ತೇವೆಂದು ಲಿಖಿತ ಉತ್ತರದಲ್ಲಿ ತಿಳಿಸಿದ್ದೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:-** ದಯಮಾಡಿ ಕುಳಿತುಕೊಳ್ಳಿ. ನಾನು ಅವಕಾಶ ಕೊಡುವುದಿಲ್ಲ. ಇದಕ್ಕೆ ನನ್ನ ಹತ್ತಿರ ಸಮಯ ಇರುವುದಿಲ್ಲ. ಈಗ ಸಮಯ 12 ಗಂಟೆ 15 ನಿಮಿಷ ಆಗಿದೆ. ತಾವು ದಯವಿಟ್ಟು ಕುಳಿತುಕೊಳ್ಳಿ. ಶಿಕ್ಷಣದ ವಿಷಯ ಬಂದರೆ ಶಿಕ್ಷಕರ ಕ್ಷೇತ್ರ ಪ್ರತಿನಿಧಿಗಳು, ಗ್ರಾಮೀಣಾಭಿವೃದ್ಧಿ ವಿಷಯ ಬಂದಾಗ ಸ್ಥಳೀಯ ಸಂಸ್ಥೆಯ ಪ್ರತಿನಿಧಿಗಳು ಈ ರೀತಿಯಾಗಿ ಎಲ್ಲರೂ ಪ್ರತಿಯೊಂದು ವಿಷಯಕ್ಕೂ ಮಾತನಾಡಬೇಕೆಂದು ಎದ್ದು ನಿಂತರೆ ನನ್ನ ಗತಿ ಏನು? ಈ ರೀತಿಯಾದರೆ ನಾನು ಸದನವನ್ನು ನಡೆಸುವುದಕ್ಕಾಗುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಉಪ ಪ್ರಶ್ನೆಯನ್ನು ಕೇಳುತ್ತೇನೆ.

**ಸಭಾಪತಿಯವರು:-** ದಯವಿಟ್ಟು ಬೇಡ. ನಿಮ್ಮ ಪ್ರಶ್ನೆ ಬಂದಾಗ ಕೇಳಿ. ಶ್ರೀ ಎಂ.ಕೆ.ಪ್ರಾಣೇಶ್‌ರವರ ಪ್ರಶ್ನೆಗೆ ಮಾತ್ರ ಉತ್ತರವನ್ನು ಕೊಡಿ.

**ಶ್ರೀ ಎಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ಕೆ.ಪ್ರಾಣೇಶ್‌ರವರು ಕೇಳುವ ವಿಚಾರವೂ ಯಾವುದಕ್ಕೂ ಸಂಬಂಧಪಡುವುದಿಲ್ಲ. ಆದರೆ, ಪ್ರಸ್ತಾಪ ಮಾಡಿದ್ದಾರೆ. ಒಂದು ವೇಳೆ ಅವರು ಹೇಳಿರುವಂತಹ ಆಪಾದನೆಗಳು ನಮ್ಮ ಇಲಾಖೆಯ ಮೇಲಿದ್ದರೆ ಅದು ನನ್ನ ಗಮನಕ್ಕೆ ಬರದೇ ಆಗಿರುತ್ತದೆ.

**ಸಭಾಪತಿಯವರು:-** ಮಾನ್ಯ ಎಂ.ಕೆ.ಪ್ರಾಣೇಶ್‌ರವರೇ, ಪ್ರಮೋಶನ್‌ಗೂ ನೀವು ಹೇಳುತ್ತಿರುವ ಅತ್ಯಾಚಾರದ ವಿಷಯಕ್ಕೂ ಏನು ಸಂಬಂಧ?

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಂಬಂಧಪಡದೇ ಇರುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆನ್ನುವ ಮಾತನ್ನು ಹೇಳಿದ್ದಾರೆ. ನಾನು ಪ್ರಸ್ತಾಪ ಮಾಡಿರುವುದು ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ವಿದ್ಯಾರ್ಹತೆ ಇಲ್ಲದವರಿಗೆ ಬಡ್ತಿ ಭಾಗ್ಯ. ಪಿ.ಡಿ.ಓ. ಹುದ್ದೆಯಲ್ಲಿರುವವರಿಗೆ Group 'B' ದರ್ಜೆಗೆ ಉನ್ನತೀಕರಿಸುವ ಅನುಷ್ಠಾನಾಧಿಕಾರಿಗಳ ಮೇಲಿನ ನಿಯಂತ್ರಣಕ್ಕೆ ಈ ಕ್ರಮವೆಂದು ಹೇಳಿದ್ದಾರೆ. ಪಿ.ಡಿ.ಓ. ಹುದ್ದೆಯವರಿಗೆ Group 'B' ವೇತನ ಶ್ರೇಣಿ 2000 ದಿಂದ 7000 ರವರೆಗೆ . . .

**ಶ್ರೀ ಎಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸದಸ್ಯರು ಈ ರೀತಿ ಹೇಳಿದರೆ ನಾನು ಏನು ಹೇಳಬೇಕು.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಇದು ಸಚಿವರೆ ಹೇಳಿರುವಂತಹದು.

**ಸಭಾಪತಿಯವರು:-** ಗ್ರಾಮೀಣಾಭಿವೃದ್ಧಿ ಇಲಾಖೆ ಬಗ್ಗೆ ಒಂದು ಚರ್ಚೆ, ಅದನ್ನು ಮಾಡೋಣ. ಇಲ್ಲವೆಂದರೆ ನಾನು ಮುಂದಿನ ಪ್ರಶ್ನೆಗೆ ಹೋಗುತ್ತೇನೆ. ಕೊನೆಗೂ ಸದಸ್ಯರು ಪ್ರಶ್ನೆ ಏನೆಂಬುದನ್ನು ಹೇಳಲೇ ಇಲ್ಲ. ಸದಸ್ಯರು ಕೇಳಿರುವ ಪ್ರಶ್ನೆಗೂ ನಡೆದಿದೆ ಎನ್ನಲಾದ ಅತ್ಯಾಚಾರಕ್ಕೂ ಯಾವುದೇ ಸಂಬಂಧವಿಲ್ಲ. How could it be brought together?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸಚಿವರು ಇದನ್ನು ಗಮನಿಸಬೇಕು.

**ಸಭಾಪತಿಯವರು:-** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ನೀವು ಪ್ರಶ್ನೆಯನ್ನು ಕೇಳುವುದು ಬೇಡ. ಸದಸ್ಯರಾದ ಮಾನ್ಯ ಎಂ.ಕೆ.ಪ್ರಾಣೇಶ್‌ರವರು ಕೇಳಿರುವ ಪ್ರಶ್ನೆಗೆ ಸಚಿವರು ಉತ್ತರ ಹೇಳುತ್ತಾರೆ. ಮಾನ್ಯ ಸಚಿವರೆ ದಯವಿಟ್ಟು ತಾವು ಕುಳಿತುಕೊಳ್ಳಿ.

**ಶ್ರೀ ಎಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸದಸ್ಯರು ಕೇಳಿರುವಂತ ಪ್ರಶ್ನೆಗೆ ನಾನು ಉತ್ತರ ಹೇಳುವುದು ಬೇಡವೇ?

**ಸಭಾಪತಿಯವರು:-** ಬೇಡ ತಾವು ಕುಳಿತುಕೊಳ್ಳಿ. ನಾನು ಮುಂದಿನ ಪ್ರಶ್ನೆಗೆ ಹೋಗುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅವರು ಉತ್ತರವನ್ನಾದರೂ ಕೊಡಬೇಕಲ್ಲವೇ?

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆ ಏನಿದೆಯೋ ಅದನ್ನೇ ಕೇಳುತ್ತಿರುವುದು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಮಾನ್ಯ ಎಂ.ಕೆ.ಪ್ರಾಣೇಶ್‌ರವರೇ, ನೀವು ಯಾವುದೋ ಅತ್ಯಾಚಾರ ಬಗ್ಗೆ ಮಾತನಾಡುತ್ತಿದ್ದೀರಿ. ಅತ್ಯಾಚಾರಕ್ಕೂ ಸಚಿವರಿಗೂ ಯಾವುದೇ ಸಂಬಂಧವಿಲ್ಲ. ನೀವು ಆ ಪ್ರಶ್ನೆಯನ್ನು ಕೇಳುವುದು ಬೇಡ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ಕೆ.ಪ್ರಾಣೇಶ್‌ರವರು ಪಿ.ಡಿ.ಓ. ಹುದ್ದೆಯಲ್ಲಿರುವವರನ್ನು Group 'B' ಹುದ್ದೆಗೆ ಉನ್ನತೀಕರಿಸುವ ಬಗ್ಗೆ ಸರ್ಕಾರ ಯಾವ ಯೋಜನೆಯನ್ನು ಮಾಡಿದೆ. ಅದನ್ನು ಯಾವಾಗ ಜಾರಿ ಮಾಡುತ್ತಾರೆಂಬುದನ್ನು ಕೇಳುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಚಿವರು ಸವಿಸ್ತಾರವಾಗಿ ಉತ್ತರವನ್ನು ನೀಡಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸಚಿವರು ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ಕೊಡಬೇಕು.

(ಗೊಂದಲ)

**ಸಭಾಪತಿಯವರು:–** ಅವರು ಈಗ ನೀಡಿರುವ ಉತ್ತರವಷ್ಟೇ ಎಂದು ಹೇಳುತ್ತಿದ್ದಾರೆ. ಇಲಾಖೆ ಬಗ್ಗೆ ಭಾಷಣ ಮಾಡುವುದಕ್ಕೆ ನಾನು ಒಪ್ಪುವುದಿಲ್ಲ. ಸಚಿವರು ಉತ್ತರವನ್ನು ಹೇಳಲಿ. ದಯವಿಟ್ಟು ವಿರೋಧ ಪಕ್ಷದ ಸದಸ್ಯರೆಲ್ಲರೂ ಕುಳಿತುಕೊಳ್ಳಿ. ಈಗ ಸಚಿವರು ಉತ್ತರವನ್ನು ಹೇಳುತ್ತಾರೆ.

(ಗೊಂದಲ)

**(255) 17.03.2017 12.10 ಬಿಎಸ್‌ಡಿ–ಬಿಎನ್‌ಎಸ್**

**ಶ್ರೀ ಹೆಚ್.ಕೆ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಾಣೇಶ್‌ರವರು ಯಾವುದೋ ಪತ್ರಿಕೆಯಲ್ಲಿ ಬಂದಿರುವುದನ್ನು ಸದನದಲ್ಲಿ ಓದಿ ಹೇಳುತ್ತಾರೆ, ಅವರ ಹತ್ತಿರ ಏನಾದರೂ ಮಾಹಿತಿಗಳು ಇದ್ದರೆ ನನಗೆ ಪತ್ರ ಮುಖೇನ ಕಳುಹಿಸಲಿ. ಅವರು ಹೆಚ್ಚು–ಕಡಿಮೆಯಾಗಿದೆ ಎಂದೇನು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ, ಅದರ ಬಗ್ಗೆ ತಕ್ಷಣ ವಿಚಾರಣೆ ಮಾಡುತ್ತೇನೆ. ಅದನ್ನು ಬಿಟ್ಟು ಅವರು ಕೇಳಿರುವ ಪ್ರಶ್ನೆಗೆ ಕೊಟ್ಟಿರುವ ಉತ್ತರವನ್ನು ನೋಡದೇ ಬೇರೊಂದು ವಿಷಯದ ಬಗ್ಗೆ ಪ್ರಸ್ತಾಪಿಸುವುದು ಸರಿಯಲ್ಲ. ಅವರು ಕೇಳುತ್ತಿರುವ ಪ್ರಶ್ನೆಗಳು ಸಮಂಜಸ ಎಂದು ಎಲ್ಲರಿಗೂ ಅನಿಸಬೇಕು, ಕೇವಲ ಮಾನ್ಯ ಸದಸ್ಯರಿಗೆ ಒಬ್ಬರಿಗೆ ಅನಿಸಿದರೆ ಸಾಲದು. ಮಾನ್ಯ ಸಭಾಪತಿಯವರಿಗೂ ಸಮಂಜಸ ಎಂದು ಅನಿಸಬೇಕು. ಅವರನ್ನು ಗ್ರೂಪ್–ಬಿ ಗೆ ಉನ್ನತೀಕರಿಸುತ್ತೀರಾ? ಉನ್ನತೀಕರಿಸುವುದಾದರೆ ಯಾವಾಗ ಉನ್ನತೀಕರಿಸುತ್ತಾರೆ ಎಂದು ಪ್ರಶ್ನೆಗಳನ್ನು ಕೇಳಿದ್ದು, ಅವುಗಳಿಗೆ ನಾವು ಉತ್ತರಗಳನ್ನು ಕೊಟ್ಟಿದ್ದೇವೆ. ಆ ಉತ್ತರಗಳನ್ನು ಅವರು ಏಕೆ ಗಮನಿಸಿಲ್ಲವೋ, ನನಗೆ ಗೊತ್ತಿಲ್ಲ. ಆದರೆ ನಮ್ಮ ಶ್ರೀನಿವಾಸ ಪೂಜಾರಿಯವರು ಬಹಳ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅನುಭವಸ್ಥರಾಗಿದ್ದು, ಈ ಮೂರು ಪ್ರಶ್ನೆಗಳ ಉತ್ತರವನ್ನು ಓದಿದ ಮೇಲೆ ಇನ್ನೂ ಉತ್ತರ ಬೇಕಾಗುತ್ತದೆ ಎಂದು ಅವರಿಗೆ ಅನಿಸುತ್ತದೆಯೇ ಎಂಬುದನ್ನು ಹೇಳಬೇಕು.

**ಸಭಾಪತಿಯವರು:–** ಮಾನ್ಯ ಘೋಟ್ನೇಕರ್ ರವರು ಪ್ರಶ್ನೆ ಕೇಳಿ.

**ಶ್ರೀ ಎಂ.ಕೆ. ಪ್ರಾಣೇಶ್:–** ಇದನ್ನು ಮುಚ್ಚಿಹಾಕುವ ಪ್ರಯತ್ನ ನಡೆಯುತ್ತಿದೆ, ಉತ್ತರ ಕೊಡುತ್ತಿಲ್ಲ.

ಸಭಾಪತಿಯವರು:– ಉತ್ತರ ಕೊಟ್ಟಿದ್ದಾರೆ.

**(ಗೊಂದಲ)**

**ಶ್ರೀ ಕೋಟಾ ಶ್ರೀನಿವಾಸ ಪೂಜಾರಿ:–** ಅವರಿಗೆ ಬಡ್ತಿ ನೀಡುವ ಬಗ್ಗೆ ಪರಿಶೀಲನೆ ಮಾಡುವ ಬಗ್ಗೆ ಸಚಿವರು ಹೇಳಿದ್ದು, ಯಾವಾಗ ಬಡ್ತಿ ಕೊಡುತ್ತಾರೆ ಎಂದು ತಿಳಿಸಬೇಕೆಂದು ಕೇಳುತ್ತಿದ್ದೇನೆ.

**ಪ್ರಶ್ನೆ ಸಂಖ್ಯೆ 660 (ಉತ್ತರ ಲಗತ್ತಿಸಿದೆ)**

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೇ, ಕಾರವಾರ ಜಿಲ್ಲೆಯ ಕೆಲವೊಂದು ತಾಲ್ಲೂಕು ಕೇಂದ್ರಗಳಲ್ಲಿ ಬಿಸಿಯೂಟಕ್ಕೆ ಬಳಸುವ ಕಾಳು ಮತ್ತು ಅಕ್ಕಿ ಪದಾರ್ಥಗಳು ಹಾಡು ಹಗಲೇ ದರೋಡೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ 'ಇಲ್ಲ ' ಎಂದು ಉತ್ತರ ಹೇಳಿದ್ದಾರೆ. ಅದೇ ಪ್ರಕಾರ ದಿನಾಂಕ 22–2–2017ರಂದು ಹಳಿಯಾಳ ದಾಂಡೇಲಿ ಮಧ್ಯೆ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಅಕ್ಷರ ದಾಸೋಹ ಅಕ್ಕಿ ಹಾಗೂ ಬೇಳೆ ಕಾಳುಗಳನ್ನು ಮಾರ್ಗ ಮಧ್ಯದಲ್ಲಿ ಇಳಿಸುವಾಗ ಅದನ್ನು ಸ್ಥಳೀಯ ಜನತೆ ಹಿಡಿದು ಸಂಬಂಧಿಸಿದ ತಹಶೀಲ್ದಾರರಿಗೆ ತಿಳಿಸಿ ಅವರು ತನಿಖೆ ಮಾಡಿ ಪಂಚನಾಮೆ ಮಾಡಿರುವುದು ನಿಜವಲ್ಲವೇ ಎಂಬ ಪ್ರಶ್ನೆಗೆ ' ಅಕ್ಷರ ದಾಸೋಹ ಯೋಜನೆಯ ತೊಗರಿಬೇಳೆಯು ಶ್ರೀ ಗವಿ ಸಿದ್ದೇಶ್ವರ ಟ್ರೇಡಿಂಗ್ ಕಂಪನಿ ಗದಗ ರವರು ಶಿರಸಿ ಶೈಕ್ಷಣಿಕ ಜಿಲ್ಲೆಯ ಹಳಿಯಾಳ ಹಾಗೂ ಜೋಯ್ಡಾ 2 ತಾಲ್ಲೂಕುಗಳಿಗೆ ಬೇಳೆಗಳನ್ನು ಸರಬರಾಜು ಮಾಡುವಾಗ ವಾಹನ ಹಾಳಾದ ಕಾರಣ ಬೇರೆ ವಾಹನದಲ್ಲಿ ಜೊಯ್ಡಾಕ್ಕೆ ಸಾಗಿಸಲಾಗಿದೆ ಅಷ್ಟೇ' ಎಂದು ಉತ್ತರವನ್ನು ಕೊಟ್ಟಿದ್ದಾರೆ. ಸರ್ಕಾರದ ಇಂತಹ ಮಹತ್ವಾಕಾಂಕ್ಷಿ ಯೋಜನೆಯಲ್ಲಿ ಹಾಡುಹಗಲೇ ಕಳ್ಳತನ ನಡೆಯುತ್ತಿದೆ. ಗವಿ ಸಿದ್ದೇಶ್ವರ ಕಂಪನಿ ಹಳಿಯಾಳದಿಂದ ಜೊಯ್ಡಾಕ್ಕೆ ಹೋಗುವ ತೊಗರಿಬೇಳೆಯಾಗಿದ್ದು, ಸುಮಾರು 400 ಕಿಲೋ ಹೊತ್ತಿರುವ ವಾಹನದಲ್ಲಿ ಮೊದಲು ಹಳಿಯಾಳಕ್ಕೆ 320 ಕಿಲೋ delivery ಮಾಡಬೇಕಾಗಿತ್ತು. ಆದರೆ ಇವರು ಹಳಿಯಾಳಕ್ಕಿಂತ ಮುಂದೆ ನಿರ್ಜನ ಪ್ರದೇಶಕ್ಕೆ ಸಾಗಿಸಿದ್ದಾರೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**MR. CHAIRMAN**:- What is your question? ನಿಮ್ಮ ಪ್ರಶ್ನೆ ಏನು?

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:-** ತಪ್ಪು ಉತ್ತರವನ್ನು ಕೊಟ್ಟಿದ್ದಾರೆ.

**ಸಭಾಪತಿಯವರು:-** ಪ್ರಶ್ನೆ ಕೇಳಿ ಎಂದರೆ ಇಲಾಖೆ ಬಗ್ಗೆ ಚರ್ಚೆ ಮಾಡಬಾರದು. ಮಾನ್ಯ ಸಚಿವರೇ, ಅವರ ಪ್ರಶ್ನೆ ತಮಗೆ ಅರ್ಥವಾಗಿದೆಯಲ್ಲವೇ? ತಾವು ಉತ್ತರ ಹೇಳಿ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದು, ಮಧ್ಯಾಹ್ನದ ಬಿಸಿಯೂಟದ ಯೋಜನೆಯನ್ನು ನಾವು ಜಾರಿಗೆ ತಂದಿದ್ದು, ಅದರಂತೆ ಪ್ರತಿಯೊಂದು ಮಗುವಿಗೂ 100 ಗ್ರಾಂ ಅಕ್ಕಿ ಮತ್ತು ಸುಮಾರು 10 ರಿಂದ 12 ಗ್ರಾಂ ಬೇಳೆ ಪದಾರ್ಥಗಳನ್ನು ಇಂತಹ ಮಾನದಂಡ ಹಾಕಿ ಕೊಡುತ್ತೇವೆ. ಪ್ರತಿಯೊಂದು ಶಾಲೆಗೆ ಒಂದು ತಿಂಗಳಿಗೆ ಆಗುವಷ್ಟು ಕಾಳುಗಳನ್ನು ಕೊಡುತ್ತೇವೆ. ರಾಜ್ಯದ ಬೇರೆ ಬೇರೆ ಕಡೆಯಿಂದ ಬಂದಿರುವ ಕೆಲವು ಶಿಕ್ಷಕರು ಮತ್ತು School Development and Monitoring Committee (SDMC) ನವರ ಸಹಭಾಗಿತ್ವದಲ್ಲಿ ಆಗಿರುವ ಅಕ್ರಮಗಳು ನಮ್ಮ ಗಮನಕ್ಕೆ ಬಂದಿದೆ. ಈ ವಿಚಾರದಲ್ಲಿ ಒಂದು ಪ್ರಕರಣದ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದು, ನಾನು ಅದರ ಮಾಹಿತಿಯನ್ನು ತರಿಸಿಕೊಂಡಿದ್ದೇನೆ. ಕಾಳನ್ನು ಸಾಗಾಣೆ ಮಾಡುವಾಗ ವಾಹನ ಹಾಳಾದ ಸಂದರ್ಭದಲ್ಲಿ ಈ ರೀತಿ ಆಗಿದೆ ಎಂದು ಪೊಲೀಸ್ ಮತ್ತು ತಹಶೀಲ್ದಾರರು ತನಿಖೆ ಮಾಡಿದ್ದಾರೆ. ಸ್ಪಷ್ಟವಾಗಿ ಇಂತಹ ಪ್ರಕರಣಗಳು ಇದ್ದರೆ ನನ್ನ ಗಮನಕ್ಕೆ ತಂದರೆ ಅದರ ಬಗ್ಗೆ ಗಮನಹರಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರವನ್ನು ಕೊಟ್ಟಿಲ್ಲ. ಇದೊಂದು ಗಂಭೀರವಾದ ಪ್ರಕರಣವಾಗಿದ್ದು, ಹಳಿಯಾಳಕ್ಕೆ 320 ಕಿಲೋ ಕೊಟ್ಟ ನಂತರ ಜೊಯ್ಡಾಕ್ಕೆ 120 ಕಿಲೋ ಕೊಡಬೇಕಾಗಿತ್ತು. ಹಳಿಯಾಳದಿಂದ ಜೋಯ್ಡಾಕ್ಕೆ 60 ಕಿ.ಮೀ ಆಗುತ್ತದೆ. ಮೊದಲು ಹಳಿಯಾಳಕ್ಕೆ delivery ಕೊಡುವುದನ್ನು ಬಿಟ್ಟು ಎಲ್ಲಾ 400 ಕಿ.ಲೋ ಪದಾರ್ಥಗಳನ್ನು ಹಳಿಯಾಳ ಮತ್ತು ಜೊಯ್ಡಾ ನಡುವೆ ಖಾಲಿ ಮಾಡುತ್ತಿದ್ದಾರೆ. ಇದರ ತನಿಖೆಯನ್ನು ಸರಿಯಾಗಿ ಮಾಡಿಲ್ಲ ಮತ್ತು ಇದರಲ್ಲಿ ಎಲ್ಲರೂ ಶಾಮೀಲಾಗಿದ್ದಾರೆ. ಅಲ್ಲಿ ಅದೇ ಸಮಯದಲ್ಲಿ ಒಬ್ಬ ಪತ್ರಕರ್ತ ಫೋಟೋ ತೆಗೆದಿದ್ದು, ಎಲ್ಲವೂ ಪತ್ರಿಕೆಗಳಲ್ಲಿ ಬಂದಿದೆ. ನಾನು ಹೇಳುವುದೇನೆಂದರೆ ಮೊದಲು 400 ಚೀಲಗಳನ್ನು ಜೊಯ್ಡಾಕ್ಕೆ ತೆಗೆದುಕೊಂಡು ಹೋಗಿ ಪುನಃ ಹಳಿಯಾಳಕ್ಕೆ ಬರುವುದು ಒಳ್ಳೆಯದೋ ಅಥವಾ 320 ಚೀಲಗಳನ್ನು ಹಳಿಯಾಳದಲ್ಲಿ ಇಳಿಸಿ, 80 ಚೀಲಗಳನ್ನು ಜೊಯ್ಡಾಕ್ಕೆ ಕೊಡುವುದು ಒಳ್ಳೆಯದೋ? ಇದನ್ನು ಹಿಡಿದರೂ ಸರಿಯಾಗಿ ತನಿಖೆಯಾಗಿಲ್ಲ, ಇದು ಅನ್ನಭಾಗ್ಯದ ಬದಲು ಕಳ್ಳರ ಭಾಗ್ಯವಾಗಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ನಿಮ್ಮ ಪ್ರಶ್ನೆಯನ್ನೇ ಹೇಳಿಲ್ಲ. You are explaining what has happened. What is your question?

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:-** ಇದು ಸರಿಯಾಗಿ ತನಿಖೆಯಾಗಿಲ್ಲ,

**ಸಭಾಪತಿಯವರು:-** ಮಾನ್ಯ ಸದಸ್ಯರು ತನಿಖೆಯಾಗಿಲ್ಲ ಮತ್ತು ತಪ್ಪು ಉತ್ತರ ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:-** ಇದರಲ್ಲಿ ಎಲ್ಲರೂ ಶಾಮೀಲಾಗಿದ್ದಾರೆ. ಇದು ಬಿಸಿಯಾಗಿರುವಾಗಲೇ ಮಾಡಬೇಕು.

**ಸಭಾಪತಿಯವರು:-** ಆಯಿತು, ಮಾನ್ಯ ಸಚಿವರಿಗೆ ಮಾತನಾಡಲು ಬಿಡಿ, ಉತ್ತರ ಬೇಡವೇ? You have made a statement. ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಇದನ್ನು ದಯಮಾಡಿ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

**ಸಭಾಪತಿಯವರು:-** ನೋಟೀಸ್ ಕೊಟ್ಟರೆ ಖಂಡಿತ ತೆಗೆದುಕೊಳ್ಳುತ್ತೇನೆ, ನಾನಾಗಿಯೇ ಮಾಡುವುದಕ್ಕೆ ಬರುವುದಿಲ್ಲ. ನೋಟೀಸ್ ಕೊಡಬೇಕು.

**(ಗೊಂದಲ)**

**ಶ್ರೀ ವಿ.ಎಸ್. ಉಗ್ರಪ್ಪ:-** ಕೆಲವು ಶಾಲೆಗಳಲ್ಲಿ ಈ ರೀತಿ ಆಗಿದೆ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ಬಹುಶಃ ಸಾಗಣೆ ಮಾಡುವ ವ್ಯಕ್ತಿಯ ಉದ್ದೇಶ ಏನಾಗಿತ್ತು ಎಂದು ಗೊತ್ತಿಲ್ಲ. ಆದರೆ ವಾಹನ ಹಾಳಾದ ಸಂದರ್ಭದಲ್ಲಿ ತಹಶೀಲ್ದಾರ್ ಮತ್ತು ಪೊಲೀಸರು ಸ್ಥಳಕ್ಕೆ ಭೇಟಿ ಮಾಡಿದ ಸಂದರ್ಭದಲ್ಲಿ ಹಿಡಿದು, ಆ ಪದಾರ್ಥ ಎಲ್ಲಿಗೆ ಸಾಗಿಸಬೇಕೋ, ಆ ಸ್ಥಳಕ್ಕೆ ಸಾಗಿಸಲಾಗಿದೆ. ಆದರೆ ಯಾವುದೇ ಕಳ್ಳಸಾಗಾಣಿಕೆ ಆಗಿಲ್ಲ. ಆದರೂ ಮತ್ತೊಮ್ಮೆ ವಿಚಾರಣೆ ಮಾಡಬೇಕಾದರೂ ನಾನು ಮಾಡುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:–** ಮೊದಲು 320 ಚೀಲ ತೊಗರಿಬೇಳೆಯನ್ನು ಹಳಿಯಾಳದಲ್ಲಿ ಇಳಿಸದೇ ಮುಂದೆ ಹೋಗಿ ಖಾಲಿ ಮಾಡುತ್ತಾರೆ ಎಂದರೆ ಹೇಗೆ? ಪತ್ರಕರ್ತನೊಬ್ಬ ಫೋಟೋ ಹೊಡೆದಿದ್ದಾನೆ. ಒಂದು ಗಾಡಿಯಿಂದ ಬೇರೆ ಗಾಡಿಗೆ unload ಮಾಡುತ್ತಿದ್ದಾರೆ. ಆದರೆ ಗಾಡಿ ಕೆಟ್ಟಿಲ್ಲ.

**ಸಭಾಪತಿಯವರು:–** ಅವರು ವಾಹನ ಕೆಟ್ಟಿದೆ ಎಂದು ಹೇಳುತ್ತಿದ್ದಾರೆ, ನಾನೇನು ಮಾಡಲಿ?

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:–** ಅಲ್ಲಿ ಖಾಲಿ ಮಾಡುವಾಗ ಜೊಯ್ಡಾದ ಅಧಿಕಾರಿ ಏಕೆ ಬರಬೇಕು? ಅಲ್ಲಿ ಜೊಯ್ಡಾದ ಅಧಿಕಾರಿ ಸಹ ಹಾಜರಿದ್ದಾನೆ.

**ಸಭಾಪತಿಯವರು:–** ಅವರು ಇನ್ನೊಮ್ಮೆ ವಿಚಾರಣೆ ಮಾಡುವುದಾಗಿ ತಿಳಿಸಿದ್ದಾರೆ.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:–** ಅಲ್ಲಿ ಸಾಂಬಾರ್‌ನಲ್ಲಿ ತೊಗರಿಬೇಳೆಯೇ ಇರುವುದಿಲ್ಲ.

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೇ, ಹಳಿಯಾಳದ ತಹಶೀಲ್ದಾರರಿಂದ ಮಾಹಿತಿ ಮತ್ತು ಅಧಿಕೃತವಾಗಿ ಅವರಿಂದ ಪತ್ರ ತರಿಸಿಕೊಂಡು ಉತ್ತರವನ್ನು ಕೊಟ್ಟಿದ್ದೇನೆ.

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:–** ಮಾನ್ಯ ಸಭಾಪತಿಯವರೇ, ಇದಕ್ಕೆ ಏನು ಮಾಡಬೇಕೆಂದು ಹೇಳಲಿಲ್ಲ. ಭಾಷಣ ಮಾಡಿದರೆ ಆಗುವುದಿಲ್ಲ. ಸಸ್ಪೆಂಡ್ ಮಾಡಬೇಕೆಂದರೆ ಆಗುತ್ತದೆಯೇ?

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ:–** ಇದಕ್ಕೆ ಸರ್ಕಾರವು ಏನಾದರೂ ಸೂಕ್ತ ವ್ಯವಸ್ಥೆ ಮಾಡಬೇಕು.

**ಶ್ರೀ ಎಸ್. ರವಿ:–** ಹಳಿಯಾಳ ತಹಶೀಲ್ದಾರರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು.

**ಸಭಾಪತಿಯವರು:–** ತಹಶೀಲ್ದಾರರನ್ನು ಸಸ್ಪೆಂಡ್ ಮಾಡಬೇಕೆಂದು ಹೇಳುತ್ತಿದ್ದಾರೆ, ಸಸ್ಪೆಂಡ್ ಮಾಡುವಂತಿದ್ದರೆ ಹೇಳಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:-** ಈ ಕೆಲಸ ಯಾರು ಮಾಡಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ಆ ವ್ಯಕ್ತಿಯ ಉದ್ದೇಶ ಏನಾಗಿತ್ತೋ, ಗೊತ್ತಿಲ್ಲ. ಆದರೆ ವಾಹನ ಹಾಳಾದ ಸಂದರ್ಭದಲ್ಲಿ ಹಾಗೂ ಹಳಿಯಾಳದ ತಹಶೀಲ್ದಾರರು ಮತ್ತು ಪೊಲೀಸರು ಮಧ್ಯೆ ಪ್ರವೇಶ ಮಾಡಿದ ಸಂದರ್ಭದಲ್ಲಿ ಬೇರೆ ಗಾಡಿಗೆ ಆತ ಹಾಕುತ್ತಿದ್ದು, ಅದನ್ನು ಎಲ್ಲಿಗೆ ಸಾಗಿಸಬೇಕೋ ಆ ಕೆಲಸವನ್ನು ನಾವು ಮಾಡಿದ್ದೇವೆ. ಮುಂದುವರೆದು ಇಂತಹವುಗಳು habitual ಆಗಿದ್ದ ಸಂದರ್ಭದಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ನಾನು ಮತ್ತೊಮ್ಮೆ ಪರಿಶೀಲನೆ ಮಾಡಿಸುತ್ತೇನೆ.

**ಪ್ರಶ್ನೆ ಸಂಖ್ಯೆ 718(ಉತ್ತರ ಲಗತ್ತಿಸಿದೆ)**

**ಶ್ರೀ ಭಾನುಪ್ರಕಾಶ್:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಕೊಟ್ಟಿದ್ದು, 2016-17ರಲ್ಲಿ ಹಳ್ಳಿ ಸಂತೆ ಮಾಡುವುದಕ್ಕೆ ರೂ.12.5 ಕೋಟಿಗಳ ಅನುದಾನ ನಿಗದಿ ಮಾಡಿದ್ದಾರೆ. ಮಾನ್ಯ ಸಚಿವರ ನೇತೃತ್ವದಲ್ಲಿ ಇಲಾಖೆ ಹೊಸ ಯೋಜನೆಯನ್ನು ವಿನೂತನವಾಗಿ ಮಾಡಿರುವುದಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಹಳ್ಳಿಗಳಲ್ಲಿ ಸಂತೆ ನಡೆಯುವ ಜಾಗಗಳ ಬಗ್ಗೆ ಎಲ್ಲರಿಗೂ ಗೊತ್ತು. ಬೆಳಿಗ್ಗೆ ಏಳರಿಂದ ಹತ್ತನ್ನೆರಡು ಗಂಟೆವರೆಗೆ ನಡೆಯುತ್ತದೆ, ಕೆಲವು ಕಡೆ ಸಂಜೆ ನಡೆಯುತ್ತದೆ. ಸಂತೆಯನ್ನು ಯಾವ ಜಾಗ ಸಿಗುತ್ತದೋ, ಆ ಜಾಗದಲ್ಲಿ ಮಾಡುತ್ತಾರೆ. ಆದರೆ ಕೆಲವು ಕಡೆ ಪಟ್ಟಣಗಳು ಬೆಳೆದಿದ್ದು, ಅಲ್ಲಿ ರಸ್ತೆಗಳ ಮೇಲೆ ಇಟ್ಟುಕೊಂಡು ಸಂತೆ ಮಾಡುವ ಪರಿಪಾಠ ಇದ್ದು, ಇದಕ್ಕೊಂದು ಪರಿಹಾರ ಸೂಚಿಸಬೇಕು ಎಂಬ ಕಾರಣದಿಂದ ಈ ಯೋಜನೆ ಮಾಡಿದ್ದಾರೆ ಎಂದು ನನಗೆ ಅನಿಸುತ್ತದೆ. ಕೆಲವು ಕಡೆ ಸಂತೆಗಳಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಶೌಚಾಲಯಗಳಿಗೆ ರೂ.27 ಲಕ್ಷ ಬಿಡುಗಡೆ ಮಾಡುವುದಕ್ಕೆ ಆದೇಶ ಮಾಡಿದ್ದು, Karnataka Rural Infrastructure Development Limited (KRIDL) ಗೆ order ಕೊಟ್ಟಿದ್ದಾರೆ ಆದರೆ ಇನ್ನೂ ಕೆಲಸ ಪ್ರಾರಂಭ ಆಗಿಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

*(256) 17-03-2017 SK-GR 12.20*

**ಶ್ರೀ ಭಾನುಪ್ರಕಾಶ್:-** ಮುಂದು. ಕಾರಣ ಹೇಳುವುದಾದರೆ, ಕೇಂದ್ರದಲ್ಲಿ ಪ್ಲಾನ್ ಮಾಡುತ್ತಿರುವುದಾಗಿದ್ದು, ಬಹುಶಃ ಇವರು ಪ್ಲಾನ್ ಕಳುಹಿಸಿಕೊಟ್ಟ ಮೇಲೆ ಅದು ಆಗುವುದು. ನನ್ನ ಪ್ರಶ್ನೆ ಏನೆಂದರೆ ಸಂತೆಬೆನ್ನೂರು ತಮಗೆ

ಗೊತ್ತಿರುವ ಹಾಗೆ ಇದು ಬಹಳ ದೊಡ್ಡ ಸಂತೆ. ಅದಕ್ಕೂ ಸುಮಾರು 27 ಲಕ್ಷ ರೂಪಾಯಿಗಳು ಮತ್ತು ಇನ್ನೊಂದು ಅಣ್ಣೀಗೆರೆ ಚಿಕ್ಕ ಕ್ಷೇತ್ರ ಅದಕ್ಕೂ ಸುಮಾರು 27 ಲಕ್ಷ ರೂಪಾಯಿಗಳ ಅನುದಾನವನ್ನು ನಿಗದಿಪಡಿಸಲಾಗಿದೆ. ಸಾರಾಸಗಟಾಗಿ ಸುಮಾರು 27 ಲಕ್ಷ ರೂಪಾಯಿಗಳು ಹಣವನ್ನು ನಿಗದಿಪಡಿಸಿರುವುದದರಿಂದ ಈ ಯೋಜನೆ ಸಫಲವಾಗುತ್ತದೆಯೇ ಎನ್ನುವುದು ಮೊದಲನೆಯ ಪ್ರಶ್ನೆಯಾಗಿದೆ. ಎರಡನೆಯದಾಗಿ, ಇದನ್ನು ಆಮೇಲೆ ನಿರ್ವಹಣೆ ಮಾಡುವವರು ಯಾರು? ಇದನ್ನು ಗ್ರಾಮ ಪಂಚಾಯ್ತಿಗೆ ಕೊಡುತ್ತೀರಾ? ಗ್ರಾಮ ಪಂಚಾಯ್ತಿ ನಿರ್ವಹಣೆ ಮಾಡುತ್ತದೆಯೆ? ಶೌಚಾಲಯಗಳನ್ನು ಮತ್ತು ಪ್ರಾಂಗಣವನ್ನು ಕ್ಲೀನ್ ಮಾಡಿಸಿ ಇಡಬೇಕಲ್ಲಾ, ಅದನ್ನೆಲ್ಲಾ ಮಾಡುವುದಕ್ಕೆ ಶುಲ್ಕ ವಿಧಿಸುವವರು ಯಾರು? ಎ.ಪಿ.ಎಂ.ಸಿ., ಅಥವಾ ಗ್ರಾಮ ಪಂಚಾಯ್ತಿಯವರಿಗೆ ಕೊಡುತ್ತೀರೋ? ಈ ಪ್ರಶ್ನೆಗಳಿಗೆ ಸಚಿವರಿಂದ ಉತ್ತರ ಬಂದ ಮೇಲೆ ನನ್ನದೊಂದು ಸಲಹೆ ಕೊಡುವುದು ಇದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಪ್ರಶ್ನೆ ನೇರವಾಗಿದೆ. ದೊಡ್ಡದಕ್ಕೂ ಅಷ್ಟೇ ಮತ್ತು ಸಣ್ಣದಕ್ಕೂ ಅಷ್ಟೇ ಕೊಡುತ್ತಿದ್ದೀರಾ?

**ಶ್ರೀ ಎಚ್.ಕೆ. ಪಾಟೀಲ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರು ಒಂದು ಉಪಯುಕ್ತ ಸಲಹೆಯನ್ನು ಕೊಟ್ಟಿದ್ದಾರೆ. ಈಗ ಏನು ದೊಡ್ಡ ಗ್ರಾಮಗಳಲ್ಲಿ ಸಂತೆ ನಡೆಯುತ್ತವೆ. ಅವುಗಳಿಗೆ ಹೆಚ್ಚಿನ ಅನುದಾನವನ್ನು ಕೊಡಬೇಕಾಗಿತ್ತು. ಎಲ್ಲಾ ಗ್ರಾಮಗಳನ್ನು ಒಂದೇ ರೀತಿಯಾಗಿ ನೋಡಿದ್ದೀರಿ ಎನ್ನುವ ಮಾತನ್ನು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಈ ವರ್ಷ ಬಜೆಟ್‌ನಲ್ಲಿರುವ ಹಣವನ್ನು ನಾವು ಗಮನದಲ್ಲಿಟ್ಟುಕೊಂಡು ಎರಡು category ಯನ್ನು ಮಾಡುತ್ತೇವೆ. 8 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಗ್ರಾಮಕ್ಕೆ ಸ್ವಲ್ಪ ಹೆಚ್ಚಿನ ಅನುದಾನವನ್ನು ನಿಗದಿಪಡಿಸಿ, ಅದನ್ನು 'ಎ' ಗ್ರೇಡ್ ಸಂತೆ ಎಂದು ಹಾಗೂ ಸಣ್ಣ ಗ್ರಾಮವನ್ನು ಆಯ್ಕೆ ಮಾಡಿದ್ದೇವೆಂದರೆ ಅದಕ್ಕೆ ಹಲವಾರು ಕಾರಣಕ್ಕಾಗಿ ಇರಬಹುದು. ಅಲ್ಲಿ ಅಂತಹ ಸಂತೆಗಳನ್ನು 'ಬಿ' ಗ್ರೇಡ್ ಸಂತೆ ಪ್ರದೇಶ ಎಂದು ಮಾಡಿ, ಸ್ವಲ್ಪ 'ಎ' ಗ್ರೇಡ್ ಸಂತೆಗೆ ಹೆಚ್ಚು ಅನುದಾನವನ್ನು ಕೊಡುತ್ತೇವೆ. ದೊಡ್ಡ ಸಂತೆಯಾಗುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದೊಂದು ಹೊಸ ಪ್ರಯತ್ನ. ಬಹಳಷ್ಟು ಕಡೆ ಮಾಡಬೇಕಾಗುತ್ತದೆ. ಆದರೆ ಬಜೆಟ್‌ನ ಲಭ್ಯತೆಯನ್ನು ನೋಡಿಕೊಂಡು ಎಷ್ಟು ಗ್ರಾಮಗಳಿಗೆ ಸಾಧ್ಯವೋ ಅಷ್ಟು ಗ್ರಾಮಗಳಿಗೆ ಈ ಸಂತೆಗಳನ್ನು ನಾವು ನಿರ್ಮಾಣ ಮಾಡುತ್ತೇವೆ. ಈ ಸಂತೆ ಪ್ರದೇಶದಲ್ಲಿ ಯಾವ ಮೂಲಭೂತ ಸೌಕರ್ಯಗಳಿರಬೇಕು ಎನ್ನುವ ಅಪೇಕ್ಷೆಯನ್ನು ಇದರಲ್ಲಿ ನಾವು ಕಾಣಿಸಿದ್ದೇವೋ, ಇವೆಲ್ಲಾ ಅಗತ್ಯವಿದೆ. ಆ ಕಾರಣಕ್ಕಾಗಿ ನಾವು ಸುಮಾರು 45 ಲಕ್ಷ ರೂಪಾಯಿಗಳವರೆಗೆ ಅನುದಾನವನ್ನು ಕೊಡುವುದಕ್ಕೆ ನಿರ್ಣಯ ಮಾಡುತ್ತೇವೆ. ಅದನ್ನು ಗ್ರಾಮ ಪಂಚಾಯ್ತಿಯವರು ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಭಾನುಪ್ರಕಾಶ:-** ಸನ್ಮಾನ್ಯ ಸಭಾಪತಿಯವರೇ, ಆ ಸಂತೆಗಳನ್ನು 'ಎ' ಮತ್ತು 'ಬಿ' ಎಂದು ವಿಂಗಡಣೆ ಮಾಡುತ್ತೇವೆಂದು ತಾವು ಹೇಳಿದ್ದೀರಿ. ಇದರಲ್ಲಿ ನನ್ನದು ಒಂದು ವಿನಂತಿ ಏನೆಂದರೆ, ಪಂಚಾಯ್ತಿಯಲ್ಲಿ ಅನುದಾನ ಬಹಳ ಕಡಿಮೆ ಇರುತ್ತದೆ. ಆ ಏರಿಯಾದ ಜಿಲ್ಲಾ ಪಂಚಾಯತ್ ಸದಸ್ಯ, ತಾಲ್ಲೂಕು ಪಂಚಾಯತ್ ಸದಸ್ಯ ಮತ್ತು ಗ್ರಾಮ ಪಂಚಾಯತ್ ಅಧ್ಯಕ್ಷರು ಹಾಗೂ ಎ.ಪಿ.ಎಂ.ಸಿ., ಯ ಸದಸ್ಯರು ಈ ನಾಲ್ಕು ಜನರು ಸೇರಿ ಒಂದು ಸಮಿತಿ ಮಾಡಿದರೆ ಒಂದು co-ordination ಬರಬಹುದು. ಇದಕ್ಕೆ ಶುಲ್ಕ ನಿಗದಿ ಮಾಡುವುದು, ಅದನ್ನು ಕ್ಲೀನ್ ಮಾಡಿಸುವುದು. ಅವರದೇ ಆದ ಅನುದಾನದಲ್ಲಿ ಅದನ್ನು improve ಮಾಡುವುದು. ಏಕೆಂದರೆ ನೀವು ಕೊಡುವಂತಹ ಅನುದಾನ ಸಾಕಾಗುವುದಿಲ್ಲ. ಸರ್ಕಾರ ಸಂತೆಗಳ ಕಟ್ಟಡವನ್ನು ನಿರ್ಮಾಣ ಮಾಡಿಕೊಡುತ್ತದೆ, Maintenance ಗೆ ಅನುದಾನವನ್ನು ಕೊಡುವುದಿಲ್ಲ. ಹಾಗಾಗಿ maintenance ನ್ನು ಆ ಸಂತೆಯ ವ್ಯಾಪ್ತಿಗೆ ಬರುವಂತಹ ಏರಿಯಾದ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಎ.ಪಿ.ಎಂ.ಸಿ., ಯ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚನೆ ಮಾಡಿದರೆ, ಅವರಿಗೆ ಒಂದು responsibility ಇರುತ್ತದೆ. ಅಲ್ಲದೆ, ಜಿಲ್ಲಾ ಪಂಚಾಯತ್‌ನಲ್ಲಿ ಗ್ರಾಮ ಪಂಚಾಯ್ತಿಗಿಂತ ಸ್ವಲ್ಪ ಜಾಸ್ತಿ ಹಣ ಇರುತ್ತದೆ. ಈ ಒಂದು ಸಮಿತಿಯನ್ನು ರಚನೆ ಮಾಡಬಹುದೇ ಎನ್ನುವ ಸಲಹೆಯನ್ನು ತಾವು ಪರಿಶೀಲಿಸಬೇಕು. ಎರಡನೆಯದಾಗಿ, ಈ ಸೈಟ್‌ಗಳ ಅಳತೆಯನ್ನು ಮಾಡಿ, ನೀವು ಪ್ಲಾನ್‌ನ್ನು ಇಲ್ಲಿ ಮಾಡಿಸುತ್ತಿದ್ದೀರಿ. ನಾನು ತಿಳಿದುಕೊಂಡಿರುವ ಹಾಗೆ ಇಲ್ಲಿಯೇ ಹೆಡ್ ಆಫೀಸ್‌ನಲ್ಲಿ ಮಾಡುತ್ತಿದ್ದಾರೆ. ಆದರೆ ದಯಮಾಡಿ, ಆ ಸೈಟ್‌ಗೆ ತಕ್ಕಂತೆ ಪ್ಲಾನ್‌ನ್ನು ಮಾಡುವುದಕ್ಕೆ ಕೆಳಗಿನ ಹಂತದಲ್ಲಿ ತಾವು ಅಧಿಕಾರ ಕೊಟ್ಟರೆ ಹೆಚ್ಚಿನದಾಗಿ ಒಳ್ಳೆಯದಾಗುವುದು ಎನ್ನುವುದು ನನ್ನ ಸಲಹೆಯಿದೆ. ಮಾನ್ಯ ಸಚಿವರು ಅದನ್ನು ಪರಿಶೀಲಿಸಬೇಕು.

**ಶ್ರೀ ಎಚ್.ಕೆ. ಪಾಟೀಲ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಈ ಎರಡು ಸಲಹೆಗಳನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

**ಸಭಾಪತಿಯವರು:-** ಧನ್ಯವಾದಗಳು.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಚುಕ್ಕೆ ಗುರುತಿನ ಪ್ರಶ್ನೆ 687(ಉತ್ತರ ಲಗತ್ತಿಸಿದೆ)**

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ):-** ಸನ್ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಬೆಂಗಳೂರು ಸೇರಿದಂತೆ ಪ್ರಮುಖ ನಗರಗಳಲ್ಲಿ ಖಾಸಗಿಯವರು ನರ್ಸರಿ ಮತ್ತು Play Home ಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಎಂಬ ಮಾತನ್ನು ಕೇಳಿದ್ದೇನೆ. ಅವರು 'ಹೌದು' ಎಂದು ಉತ್ತರ ಕೊಟ್ಟಿದ್ದಾರೆ. ಹಾಗಿದ್ದಂತಹ

ಸಂದರ್ಭದಲ್ಲಿ ಈ Play Home ಗಳನ್ನು ನಡೆಸಲು ಸರ್ಕಾರದ ಶಿಕ್ಷಣ ಇಲಾಖೆಯ ಅನುಮತಿ ಪಡೆಯಬೇಕಾಗಿದೆ ಎಂಬುದನ್ನು ತಿಳಿಸುವುದರ ಜೊತೆಗೆ ಮತ್ತು ಅನುಸರಿಸಬೇಕಾದ ಮಾನದಂಡಗಳ ಬಗ್ಗೆ ಸಹ ಮಾನ್ಯ ಸಚಿವರು ಸ್ಪಷ್ಟವಾದ ಉತ್ತರವನ್ನು ವಿವರವಾಗಿ ಕೊಟ್ಟಿದ್ದಾರೆ. ನನಗೆ ಬಂದಿರುವ ಅನುಮಾನವೇನೆಂದರೆ ನನ್ನ ನಾಲ್ಕನೆಯ ಪ್ರಶ್ನೆಗೆ ಇಲಾಖೆಯಿಂದ ಪೂರ್ವಾನುಮತಿ ಪಡೆದು ಎಲ್ಲಾ ಕನಿಷ್ಠ ಮೂಲಭೂತ ಸೌಲಭ್ಯಗಳನ್ನು ಸರ್ಕಾರದ ನಿಯಮಾವಳಿಗಳ ಪ್ರಕಾರ ಹೊಂದಿದ್ದಲ್ಲಿ ಮತ್ತು ನಿಯಮಾನುಸಾರ ಶಾಲೆ ನಡೆಯುತ್ತಿದ್ದಲ್ಲಿ ದೂರಿನ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದೆಂದು ಮಾನ್ಯ ಸಚಿವರು ಕೊಟ್ಟಿರುವ ಉತ್ತರವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಯಾವುದೇ ದೂರು ಇಲ್ಲದೇ, ಯಾವುದೋ ಒಂದು ಸಣ್ಣ ಪತ್ರಿಕೆಯಲ್ಲಿ ಬಂದಂತಹ ವರದಿಯ ಆಧಾರದ ಮೇಲೆ ಏಕಾಏಕಿ ಸ್ಪಷ್ಟವಾಗಿ ಎಲ್ಲಾ ಮೂಲಭೂತ ಸೌಕರ್ಯಗಳಿದ್ದು, ಇಡೀ ಆ ಏರಿಯಾದಲ್ಲಿಯೇ ಇದು ಅತ್ಯುತ್ತಮ ಶಾಲೆ ಮತ್ತು ಇಡೀ 'ರಾಜ್ಯದ ನಂ.1 ಶಾಲೆ' ಎಂದು ಕಳೆದ ಹಲವಾರು ವರ್ಷಗಳಿಂದ ಶಾಲೆಯನ್ನು ನಡೆಸಿಕೊಂಡು ಬಂದಂತಹ ಸಂದರ್ಭದಲ್ಲಿ ಶಿಕ್ಷಣ ಇಲಾಖೆಯವರಿಂದ ಏಕಾಏಕಿ 'ಈ ಶಾಲೆಯನ್ನು ನಾಳೆಯಿಂದ ಮುಚ್ಚಿಸಬೇಕು' ಎಂದು ನೋಟಿಸ್ ಬರುತ್ತದೆ. ತಕ್ಷಣವೇ ಈ ರೀತಿ ಕ್ರಮ ತೆಗೆದುಕೊಂಡಿರುವುದರ ಬಗ್ಗೆ ನನಗೆ ಕಾರಣ ಬೇಕಾಗುತ್ತದೆ. ಇದರ ಬಗ್ಗೆ ಸ್ಪಷ್ಟನೆ ನೀಡಬೇಕೆಂದು ನಾನು ವಿನಂತಿಸುತ್ತೇನೆ.

**ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು ಔಕಾಫ್ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ಶಿಕ್ಷಣ ಕಾಯಿದೆ 1983 ರ ಪ್ರಕಾರ ಅಂದಿನಿಂದ ಇಲ್ಲಿಯವರೆಗೆ 1995 ರ ನಂತರ ಕಾಯಿದೆ ಮಾಡಿದ ಮೇಲೆ 1996 ರಿಂದಲೂ ಪೂರ್ವ ಪ್ರಾಥಮಿಕ ಶಾಲೆಗಳಿಗೆ ನಮ್ಮದೇ ಆದಂತಹ ಸುತ್ತೋಲೆಗಳನ್ನು ಹೊರಡಿಸುತ್ತಾ ಬಂದಿದ್ದೇವೆ. 2006ರಲ್ಲಿ ಇದನ್ನು ಕಡ್ಡಾಯಗೊಳಿಸದೆ, ಬೇಕಾದರೆ ನೀವು ನೊಂದಾವಣಿ ಮಾಡಿಕೊಳ್ಳಬಹುದು, ಇಲ್ಲ ಎಂದರೆ ಇಲ್ಲ ಎಂದು ಮಾಡಿಕೊಂಡು ಬಂದಿದ್ದೇವೆ. ಇತ್ತೀಚಿನ ದಿನಗಳಲ್ಲಿ ನಮ್ಮ ಸಂವಿಧಾನಬದ್ಧವಾಗಿ 6 ರಿಂದ 14ನೇ ವಯಸ್ಸಿನ ಮಕ್ಕಳಿಗೆ ಶಿಕ್ಷಣ ಕೊಡುವುದನ್ನು ಕಡ್ಡಾಯವಾಗಿರುವಂತಹ ವ್ಯವಸ್ಥೆಗೆ ನಮ್ಮ ಶಿಕ್ಷಣ ಇಲಾಖೆ ಮಾಡುತ್ತಾ ಬಂದಿದೆ. ಖಾಸಗಿ ಸಂಸ್ಥೆಗಳು ಪೂರ್ವ ಪ್ರಾಥಮಿಕ ಶಾಲೆಗಳನ್ನು ಮಾಡುತ್ತಾ ಬಂದಿದೆ. ಇವತ್ತು ಸಮಾಜದುದ್ದಕ್ಕೂ ಆರು ತಿಂಗಳಿನ ಮಗುವಿನಿಂದ ಆರು ವರ್ಷದ ಮಗುವಿನವರೆಗೂ Play Home ಹೆಸರಿನಲ್ಲಿ ಮತ್ತು ನಾನಾ ಹೆಸರುಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭ ಮಾಡಿದ್ದಾರೆ. ದಿನಾಂಕ 27–02–2017 ರಂದು ನೋಂದಣಿಯನ್ನು ಕಡ್ಡಾಯ ಮಾಡಿ 'ಯಾವುದೇ ರೀತಿಯ ಶಾಲೆ ಅಥವಾ ಶಾಲೆಯ ರೂಪದಲ್ಲಿ ಮಕ್ಕಳನ್ನು ಪೋಷಣೆ ಮಾಡುವಂತಹ ಸಂಸ್ಥೆಗಳು ಯಾವುದಾದರೂ ಇದ್ದರು ಕೂಡ ಇದು ನಮ್ಮಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು' ಎನ್ನುವುದನ್ನು ಹೇಳಿದ್ದೇನೆ. ಮಾನ್ಯ ಸದಸ್ಯರು ಕೇಳಿರುವುದೇನೆಂದರೆ ಇತ್ತೀಚಿಗೆ ಬೆಳ್ಳಂದೂರಿನಲ್ಲಿ ನಡೆದಂತಹ ಒಂದು ಶಾಲೆಯ ವಿಚಾರ. ಆ ಶಾಲೆಯಲ್ಲಿ 3 ವರ್ಷದ ಮಗುವಿನ ಮೇಲೆ ಲೈಂಗಿಕ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ದೌರ್ಜನ್ಯವಾಗಿದೆ ಎಂದು ಬಂದಂತಹ ದೂರಿನನ್ವಯ ಈಗಾಗಲೇ ತನಿಖೆಯ ಹಂತದಲ್ಲಿದೆ. ಅದನ್ನು ನಮ್ಮ ಕಾನೂನಿನ ಅನ್ವಯ ನೋಟಿಸನ್ನು ನೀಡುವುದು ಮತ್ತು ಕಾರಣ ಕೇಳುವುದು ಇಲಾಖೆಯ ಕರ್ತವ್ಯ. ಈಗ ನಾನು ಮಾನ್ಯ ಸದಸ್ಯರ ಜೊತೆಗೆ ಮುಕ್ತವಾಗಿ ಚರ್ಚೆ ಮಾಡಿದ್ದೇನೆ. ಇಲ್ಲ ಎಲ್ಲವೂ 'negative' ಆಗಿ ಬಂದಿದೆ ಎಂದು ತಿಳಿದು ಬಂದಿರುವುದು ಸಂತೋಷದ ವಿಚಾರವಾಗಿದೆ. 'Negative' ಆಗಿ ಬಂದಂತಹ ಸಂದರ್ಭದಲ್ಲಿ ನಾವು ಅದನ್ನು ಯಾವುದೇ ರೀತಿಯ ಅನುಮಾನವಿಲ್ಲದೇ ಕಾನೂನಿನ ರೀತಿಯಲ್ಲಿ ಏನು ಆದೇಶ ಬರುತ್ತದೆ ಅದರನ್ವಯ ನಾವು ಪಾಲಿಸುತ್ತೇವೆ.

ಮುಂದುವರೆದು, ಇನ್ನು ಮುಂದೆ ರಾಜ್ಯದಲ್ಲಿರುವಂತಹ ಎಲ್ಲಾ ಶಾಲೆಗಳಲ್ಲಿ ಯಾವುದೇ ರೀತಿಯ child rights protection ಮಾಡಬೇಕಾಗಿದೆ. ಅದಕ್ಕೆ ಪ್ರತ್ಯೇಕವಾಗಿ ನಾನು ಈ ಅಧಿವೇಶನದಲ್ಲಿ ಒಂದು ವಿಧೇಯಕವನ್ನು ಸಹ ತರುವುದಕ್ಕೆ ಮುಂದಾಗಿದ್ದೇನೆ. ಇದರಿಂದ ಮಕ್ಕಳ ಜೊತೆಗೆ ಯಾವುದೇ ರೀತಿಯ ದೌರ್ಜನ್ಯಗಳು ಮತ್ತು ಚೆಲ್ಲಾಟಗಳಾಗಬಾರದೆಂಬುದನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ನಾವು ಕೆಲವು ನಿಯಮಗಳನ್ನು ರೂಪಿಸಿದ್ದೇವೆ. ಮಾನ್ಯ ಸದಸ್ಯರಿಗೆ ಎಲ್ಲಾ ವಿವರಗಳು ಗೊತ್ತಿದೆ. ಯಾವುದೇ ಅಪಾದನೆಯಲ್ಲ, ಆಪಾದನೆ ಮಾಡಿದ ತಕ್ಷಣ ಆರೋಪಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ತನಿಖೆ ಹಂತದಲ್ಲಿದ್ದು, ವಿವರವಾಗಿ ತನಿಖಾ ವರದಿ ಬಂದ ಮೇಲೆ ನಾವು ಸ್ಪಷ್ಟವಾದ ಉತ್ತರವನ್ನು ಕೊಡುತ್ತೇವೆ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ):-** ಸನ್ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಮಾನ್ಯ ಮಂತ್ರಿಯವರು ಕೊಟ್ಟಿರುವ ಉತ್ತರ ಸಮರ್ಪಕವಾಗಿದೆ. ದುರುದ್ದೇಶದಿಂದ ಯಾವುದೋ ಅತ್ಯುತ್ತಮವಾಗಿರುವಂತಹ ಮತ್ತು ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿರುವ ಮತ್ತು ಇಡೀ 'ರಾಜ್ಯದಲ್ಲೇ ನಂ.1 ಶಾಲೆ' ಎಂದು ಹಲವಾರು ವರ್ಷಗಳಿಂದ ಬಂದಿರುವ ಶಾಲೆಗಳಿಗೆ ಏಕಾಏಕಿ ಈ ರೀತಿಯ ದುರುದ್ದೇಶದಿಂದ 'ಈ ಶಾಲೆಯನ್ನು ಮುಚ್ಚಿಸಬೇಕು'. ಬೇರೆಯವರು ದುರದ್ದೇಶವನ್ನು ಕೊಟ್ಟಿರುವಂತಹ ಸಂದರ್ಭದಲ್ಲಿ ಅದರ ಸತ್ಯಾಸತ್ಯತೆಯನ್ನು ಉಳಿಸಬೇಕು.

**ಸಭಾಪತಿಯವರು:-** ಮಾನ್ಯ ಲಕ್ಷ್ಮೀನಾರಾಯಣರವರೇ, ಮಾನ್ಯ ಸಚಿವರು ಈಗಾಗಲೇ ತನಿಖಾ ವರದಿಯಲ್ಲಿ 'negative' ಆಗಿ ಬಂದಿದೆ. ಅದನ್ನು ನಾನು ಮುಗಿಸುತ್ತೇನೆಂದು ಹೇಳಿದ್ದಾರೆ. ಮತ್ತೇಕೆ ಚರ್ಚೆ? ಅದನ್ನು ಬಿಟ್ಟು ಬಿಡಿ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ):-** ಸನ್ಮಾನ್ಯ ಸಭಾಪತಿಯವರೇ, ಸತ್ಯಾಸತ್ಯತೆಯನ್ನು ಉಳಿಸಲಿ ಎಂದು ಹೇಳುತ್ತಿದ್ದೇನೆ ಅಷ್ಟೇ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು :–** ಆಯಿತು, ಅದನ್ನು ಮಾಡುತ್ತಾರೆ.

**ಚುಕ್ಕೆ ಗುರುತಿನ ಪ್ರಶ್ನೆ: 638 (ಉತ್ತರ ಲಗತ್ತಿಸಿದೆ)**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ತಮ್ಮ ಸ್ಥಳೀಯ ಸಂಸ್ಥೆಯ ಜನ ಪ್ರತಿನಿಧಿಗಳಿಗೆ ಗೌರವಧನವನ್ನು ಹೆಚ್ಚು ಮಾಡಿರುವ ಬಗ್ಗೆ ಮಾನ್ಯ ಸಚಿವರಿಗೆ ಕೃತಜ್ಞತೆಯನ್ನು ಸಲ್ಲಿಸಲು ಬಯಸುತ್ತೇನೆ. ಗ್ರಾಮ ಪಂಚಾಯಿತಿಗಳ ಘನ ತ್ಯಾಜ್ಯ ವಿಲೇವಾರಿ ಮಾಡುವಂತಹ ಹಿನ್ನೆಲೆಯಲ್ಲಿ ಸುಮಾರು 6022 ಗ್ರಾಮ ಪಂಚಾಯಿತಿಗಳ ಪೈಕಿ ಒಟ್ಟು 405 ಗ್ರಾಮ ಪಂಚಾಯಿತಿಗಳಿಗೆ ಮಾತ್ರ ಅನುಮೋದನೆ ಸಿಕ್ಕಿದೆ.

*257/17.03.2017/12.30/hv.gr*

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:– ಮುಂದು.** ಅನುಮೋದನೆ ಸಿಕ್ಕಿರುವ ಘಟಕಗಳ ಪೈಕಿ ಕೇವಲ 63 ಘಟಕಗಳು ಮಾತ್ರ ನಿರ್ಮಾಣವಾಗಿವೆ. ಈ ರೀತಿಯಾದರೆ, ತ್ಯಾಜ್ಯ ವಿಲೇವಾರಿ ಘಟಕಗಳ ನಿರ್ಮಾಣ ಕಾರ್ಯವನ್ನು ಎಷ್ಟು ವರ್ಷಗಳಲ್ಲಿ ಪೂರ್ಣಗೊಳಿಸಲಾಗುತ್ತದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಎರಡನೆಯದಾಗಿ, ಘನ ತ್ಯಾಜ್ಯ ವಿಲೇವಾರಿ ಮಾಡುವಂತಹ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಸ್ಥಳವನ್ನು ಗುರುತಿಸುವಂತಹ ಕೆಲಸವಾಗಬೇಕಾಗಿದೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿದ್ದಾರೆ. ಪಂಚಾಯಿತಿಗಳಲ್ಲಿ ಘನ ಮತ್ತು ದ್ರವ ತ್ಯಾಜ್ಯಗಳನ್ನು ವಿಲೇವಾರಿ ಮಾಡುವುದಕ್ಕಾಗಿ ಜಾಗವನ್ನು ಕಾಯ್ದಿರಿಸುವುದರೊಂದಿಗೆ ಎಲ್ಲಿ ಸಾಧ್ಯವಿದೆ ಅಲ್ಲಿ ಬಹುಗ್ರಾಮ ಘನ ತ್ಯಾಜ್ಯ ವಿಲೇವಾರಿ ಘಟಕಗಳನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳುತ್ತದೆ ಎನ್ನುವುದರ ಬಗ್ಗೆ ಸರ್ಕಾರ ಬೆಳಕು ಚೆಲ್ಲಬೇಕಾಗಿದೆ.

**ಶ್ರೀ ಹೆಚ್.ಕೆ.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಘನ ತ್ಯಾಜ್ಯವನ್ನು ವಿಲೇವಾರಿ ಮಾಡುವುದಕ್ಕಾಗಿ ಸರ್ಕಾರ ಮೀಸಲಾಗಿಟ್ಟಿರುವ ಹಣ ಮತ್ತು ಪ್ರತಿ ವರ್ಷ ಕಡಿಮೆ ಸಂಖ್ಯೆಯಲ್ಲಿ ಏನು ಗ್ರಾಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಅದು ಸಾಕಾಗುತ್ತಿಲ್ಲ; ಕಡಿಮೆ ಪ್ರಮಾಣದ್ದಾಗಿದೆ ಎನ್ನುವುದು ನಮ್ಮ ಭಾವನೆಯೂ ಆಗಿದೆ. ಆದರೆ, ಸದ್ಯದ ಆರ್ಥಿಕ ಹಂಚಿಕೆಯ ವ್ಯವಸ್ಥೆಯಲ್ಲಿ ಇದು ಅನಿವಾರ್ಯವಾಗಿದೆ. ಮೀಸಲಾಗಿಡುವ ಹಣದ ಪ್ರಮಾಣ ಮತ್ತು ತೆಗೆದುಕೊಳ್ಳಲಾಗುವ ಗ್ರಾಮಗಳ ಸಂಖ್ಯೆಯನ್ನು ಹೆಚ್ಚುಗೊಳಿಸಬೇಕೆಂದು ನಮ್ಮ ಇಲಾಖೆ ಯಾವ ಯಾವ ಸಂದರ್ಭಗಳಲ್ಲಿ ಅವಕಾಶಗಳು ದೊರೆತಿದೆಯೋ ಆ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಾ ಬಂದಿದೆ. ಶೌಚಾಲಯಗಳ ನಿರ್ಮಾಣದ ವಿಚಾರದಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಹೆಚ್ಚಿನ ಗಮನ ಕೊಟ್ಟು ಕೆಲಸ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುತ್ತಿವೆ. ರಾಜ್ಯ ಸರ್ಕಾರ ಶೌಚಾಲಯ ನಿರ್ಮಾಣದ ಕಾರ್ಯವನ್ನು ಸಮರೋಪಾದಿಯಲ್ಲಿ ನಿರ್ವಹಿಸುತ್ತಿದೆ. ರಾಜ್ಯ ಸರ್ಕಾರದ ವಿನಂತಿಗಳಿಗೆ ಹೇಗೆ ಕೇಂದ್ರ ಸರ್ಕಾರ ಸ್ಪಂದಿಸುತ್ತಿದೆಯೋ, ಅದೇ ರೀತಿಯಲ್ಲಿ ಘನ ತ್ಯಾಜ್ಯ ವಿಲೇವಾರಿಗಾಗಿ ಕೇಂದ್ರ ಸರ್ಕಾರ ಬಹು ದೊಡ್ಡ ಯೋಜನೆಯನ್ನು ಜಾರಿಗೆ ತರಬೇಕಾಗಿದೆ. ಆಗ ಮಾತ್ರ 'ಸ್ವಚ್ಛ ಭಾರತ' – 'ನಿರ್ಮಲ ಭಾರತ' ಎಂದು ಏನು ಮಾತನಾಡುತ್ತೇವೆ ಅದಕ್ಕೆ ಅರ್ಥ ಬರುತ್ತದೆ. ಉತ್ತಮ ರೀತಿಯಲ್ಲಿ ಕೆಲಸವಾಗುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ರಾಜ್ಯ ಸರ್ಕಾರದ ವತಿಯಿಂದ ಈ ಕಾರ್ಯಕ್ಕೆ ಎಷ್ಟು ಮಹತ್ವ ನೀಡಬೇಕು, ಅದನ್ನು ನೀಡುವುದಕ್ಕೆ ಪ್ರಯತ್ನಿಸುತ್ತೇವೆ. ಮಾನ್ಯ ಸದಸ್ಯರಾದ ಕೆ.ಪ್ರತಾಪಚಂದ್ರ ಶೆಟ್ಟಿಯವರು ಬಹಳ ಉತ್ತಮವಾದ ಸಲಹೆಯನ್ನು ನೀಡಿದ್ದಾರೆ. ಅದರ ಬಗ್ಗೆ ನಾವು ಚಿಂತನೆ ಮಾಡುತ್ತಿದ್ದೇವೆ. ಗ್ರಾಮಗಳಲ್ಲಿ ಘನ ತ್ಯಾಜ್ಯ ವಿಲೇವಾರಿಗಾಗಿ ಜಾಗವನ್ನು ಗುರುತಿಸುವಂತಹ ಕೆಲಸವಾಗಬೇಕಾಗಿದ್ದು, ಆ ಕೆಲಸ ಇವತ್ತೇ ಆಗಬೇಕಾಗಿದೆ; ಇವತ್ತಲ್ಲದಿದ್ದರೆ ನಾಳೆಯಾದರೂ ಆಗಲೇಬೇಕಾಗುತ್ತದೆ. ಮುಂದಿನ ವರ್ಷ ಇಲ್ಲವೆಂದರೆ, ಮತ್ತೊಂದು ವರ್ಷಕ್ಕೆ ಆ ಜಾಗ ಬೇಕಾಗುತ್ತದೆ. ಹೇಗೆ ನಾವು ಸ್ಮಶಾನಕ್ಕಾಗಿ ಜಾಗವನ್ನು ಕಾಯ್ದಿರಿಸುತ್ತೇವೆಯೋ ಅದೇ ರೀತಿಯಲ್ಲಿ ಘನ ತ್ಯಾಜ್ಯ ವಿಲೇವಾರಿಗಾಗಿ ಜಾಗವನ್ನು ಗುರುತಿಸಬೇಕೆನ್ನುವ ಸಲಹೆಯನ್ನು ಮಾನ್ಯ ಸದಸ್ಯರು ನೀಡಿದ್ದಾರೆ. ಮುಂದಿನ 6 ತಿಂಗಳೊಳಗಾಗಿ ಎಲ್ಲ ಪಂಚಾಯಿತಿಗಳು ಘನ ತ್ಯಾಜ್ಯ ವಿಲೇವಾರಿಗಾಗಿ ಜಾಗವನ್ನು ಗುರುತಿಸಬೇಕು ಮತ್ತು ಅದರ ಮಾಹಿತಿಯನ್ನು ಕೇಂದ್ರ ಕಛೇರಿಗೆ ಕಳುಹಿಸಬೇಕು ಹಾಗೂ ಗ್ರಾಮ ಪಂಚಾಯಿತಿಯಲ್ಲಿ ಆ ಬಗ್ಗೆ ಠರಾವನ್ನು ಮಾಡಬೇಕೆನ್ನುವ ಒಂದು ಸುತ್ತೋಲೆಯನ್ನು ಬಹು ಬೇಗ ಕಳುಹಿಸಿಕೊಡಲಾಗುತ್ತದೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಸುಮಾರು 20 ಲಕ್ಷ ರೂಪಾಯಿಗಳ ಅನುದಾನವನ್ನು ಘನ ತ್ಯಾಜ್ಯ ಮತ್ತು ದ್ರವ ತ್ಯಾಜ್ಯ ನಿರ್ವಹಣೆಗಾಗಿ ಸರ್ಕಾರ ನೀಡಿದೆ. ಈ ಘಟಕಗಳ ನಿರ್ಮಾಣಕ್ಕೆ ಅಷ್ಟು ಹಣ ಸಾಕಾಗುತ್ತದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ರಾಜ್ಯ ಮತ್ತು ರಾಷ್ಟ್ರ ಹೆದ್ದಾರಿಗಳಲ್ಲಿ ಆ ಪಂಚಾಯಿತಿಯವರು ತಮ್ಮ ಘನ ತ್ಯಾಜ್ಯವನ್ನು ಈ ಪಂಚಾಯಿತಿಗೆ ತಂದು ಹಾಕಿ ಹೋಗುತ್ತಾರೆ. ಈ ಪಂಚಾಯಿತಿಯವರು ಆ ಪಂಚಾಯಿತಿಗೆ ತೆಗೆದುಕೊಂಡು ಹೋಗಿ ಹಾಕುತ್ತಾರೆ. ಇದನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯವಾಗದೇ ಇರುವ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಘನ ತ್ಯಾಜ್ಯಗಳನ್ನು ರಸ್ತೆ ಬದಿಯಲ್ಲಿ ನೋಡಿದಾಗ ಇದನ್ನು ನಿಯಂತ್ರಣ ಮಾಡುವುದಕ್ಕೆ ಏನಾದರೂ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆಂದು ಅನಿಸುತ್ತದೆ. ಮಾನ್ಯ ಸಚಿವರು ಆದ್ಯತೆಯ ಮೇಲೆ ಈ ಕೆಲಸವನ್ನು ಮಾಡಬೇಕಾಗುತ್ತದೆ. ಅವರು ಈಗಾಗಲೇ ಆ ಕಾರ್ಯವನ್ನು ಮಾಡಲಾಗುತ್ತೆಂದು ಒಪ್ಪಿಕೊಂಡಿದ್ದಾರೆ, ಆ ಕೆಲಸವನ್ನು ಮಾಡುತ್ತಾರೆ ಎನ್ನುವ ವಿಶ್ವಾಸ ನನಗಿದೆ. ಆದಷ್ಟು ಶೀಘ್ರವಾಗಿ ಇದರ ಬಗ್ಗೆ ಕಾರ್ಯಕ್ರಮಗಳನ್ನು ರೂಪಿಸಬೇಕೆನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಹೆಚ್.ಕೆ.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಘನ ತ್ಯಾಜ್ಯವನ್ನು ಒಂದು ಪಂಚಾಯಿತಿಯಿಂದ ಮತ್ತೊಂದು ಪಂಚಾಯಿತಿಗೆ ತೆಗೆದುಕೊಂಡು ಬಂದು ಹಾಕುತ್ತಾರೆ ಎನ್ನುವುದು ನಿಜವಾದ ಸಂಗತಿಯಾಗಿದೆ. ಬೆಂಗಳೂರಿನ ಕಸ ಯಾವುದಾದರೊಂದು ಹಳ್ಳಿಗೆ ಹೋಗಿ ಬಿದ್ದರೆ, ಅಲ್ಲಿ ಅನಾರೋಗ್ಯಕರವಾದ ವಾತಾವರಣ ನಿರ್ಮಾಣವಾಗುವುದನ್ನು ನಾವೆಲ್ಲರೂ ಗಮನಿಸಿದ್ದೇವೆ. ಇದರ ಬಗ್ಗೆ ಬಹಳಷ್ಟು ಚಿಂತನೆ ಮಾಡುತ್ತಿದ್ದೇವೆ ಆದರೆ, ಅದರಿಂದ ಏನೂ ಪ್ರಯೋಜನವಾಗುತ್ತಿಲ್ಲ. ಘನ ತ್ಯಾಜ್ಯವನ್ನು ಎಲ್ಲಿಯವರೆಗೆ ಇಂಧನವನ್ನಾಗಿ ಪರಿವರ್ತನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೆ ಈ ಸಮಸ್ಯೆ ಮುಂದುವರೆಯುತ್ತಿರುತ್ತದೆ. ಆದ್ದರಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನಾವು cluster of villages ಅಥವಾ cluster of Panchayats ಗಳನ್ನು ತೆಗೆದುಕೊಂಡು ಅಲ್ಲಿ ಈ ಘನ ತ್ಯಾಜ್ಯವನ್ನು ಇಂಧನವನ್ನಾಗಿ ಪರಿವರ್ತನೆ ಮಾಡುವುದಕ್ಕಾಗಿ ಘಟಕಗಳನ್ನು ಸ್ಥಾಪನೆ ಮಾಡಬೇಕೆನ್ನುವ ಚಿಂತನೆಯನ್ನು ಮಾಡುತ್ತಿದ್ದೇವೆ. ಅದಕ್ಕಾಗಿ ನಾವು ಒಂದು ಪ್ರಸ್ತಾವನೆಯನ್ನು ಸಹ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುವವರಿದ್ದೇವೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:709 (ಉತ್ತರ ಲಗತ್ತಿಸಿದೆ)**

**ಶ್ರೀ ಅಮರನಾಥ ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಹೈದ್ರಾಬಾದ್–ಕರ್ನಾಟಕದ ಆರು ಜಿಲ್ಲೆಗಳು ಮತ್ತು ಹರಪನಹಳ್ಳಿಯಲ್ಲಿ ಅಂದರೆ, ನಾನು ಪ್ರತಿನಿಧಿಸುತ್ತಿರುವ ಈಶಾನ್ಯ ಪದವೀಧರರ ಕ್ಷೇತ್ರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಖಾಯಂ ಪ್ರಿನ್ಸಿಪಾಲ್, ಬೋಧಕ ಮತ್ತು ಬೋಧಕೇತರ ಹುದ್ದೆಗಳ ಬಗ್ಗೆ ಹಾಗೂ ಅಲ್ಲಿನ ಮೂಲಸೌಲಭ್ಯಗಳ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಮಾನ್ಯ ಸಚಿವರು ಬಹಳ ಮುಕ್ತವಾಗಿರುವ ಉತ್ತರವನ್ನು ಕೊಟ್ಟಿದ್ದಾರೆ. ಹೈದ್ರಾಬಾದ್–ಕರ್ನಾಟಕದ ಆರು ಜಿಲ್ಲೆಗಳು ಮತ್ತು ಹರಪನಹಳ್ಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಯಾರೂ ಖಾಯಂ ಪ್ರಿನ್ಸಿಪಾಲ್ ಇಲ್ಲ ಎನ್ನುವ ಮಾತನ್ನು ಉನ್ನತ ಶಿಕ್ಷಣ ಸಚಿವರು ಒಪ್ಪಿಕೊಂಡಿದ್ದಾರೆ. ಬೋಧಕ ಮತ್ತು ಬೋಧಕೇತರ ಹುದ್ದೆಗಳ ಬಗ್ಗೆ ಹೇಳಬೇಕಾದರೆ, 1200 ಹುದ್ದೆಗಳು ಮಂಜೂರಾಗಿವೆ ಆದರೆ, ಅಲ್ಲಿ ಕೇವಲ 451 ಜನ ಮಾತ್ರ. ಅಂದರೆ, ಶೇಕಡಾ 37ರಷ್ಟು ಹುದ್ದೆಗಳಲ್ಲಿ ಮಾತ್ರ ಕಾರ್ಯನಿರ್ವಹಣೆ ಮಾಡಲಾಗುತ್ತಿದೆ. ಇನ್ನುಳಿದ ಶೇಕಡಾ 67ರಷ್ಟು ಬೋಧಕ ಹುದ್ದೆಗಳು ಖಾಲಿ ಇರುವುದನ್ನು ನಾವು ಕಾಣುತ್ತಿದ್ದೇವೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಸಭಾಪತಿಯವರು:–** ಮಾನ್ಯ ಅಮರನಾಥ್ ಪಾಟೀಲ್‌ರವರೇ, ಬಹಳ ಚೆನ್ನಾಗಿ ತಮ್ಮ ಮಾತುಗಳನ್ನು ಪ್ರಾರಂಭ ಮಾಡಿದ್ದೀರಿ. ವಿಷಯದ ವಿಸ್ತಾರಕ್ಕೆ ಹೋಗದೇ ಏನಾಗಬೇಕು ಎನ್ನುವುದಕ್ಕೆ ಮಾತ್ರ ಸೀಮಿತವಾಗಿ ಪ್ರಶ್ನೆ ಕೇಳಿ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

**ಶ್ರೀ ಅಮರನಾಥ ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿರುವ ಮೂಲಸೌಲಭ್ಯಗಳ ಬಗ್ಗೆ ಸರ್ಕಾರ ಅಂದಾಜು ಪಟ್ಟಿಯನ್ನು ತಯಾರು ಮಾಡಿದೆಯೇ ಎನ್ನುವ ಪ್ರಶ್ನೆಯನ್ನು ಕೇಳಿದ್ದೆ. ಆದರೆ, ಅಂದಾಜು ಪಟ್ಟಿಯನ್ನು ಸರ್ಕಾರ ನೀಡಿಲ್ಲ. ಅದರರ್ಥ ಬಹುಶಃ ಅಂದಾಜು ಪಟ್ಟಿಯನ್ನು ತಯಾರು ಮಾಡಿಲ್ಲ. ಅದನ್ನು ಅವರು ಒಪ್ಪಿಕೊಂಡಿದ್ದಾರೆ. ಮಾನ್ಯ ಉನ್ನತ ಶಿಕ್ಷಣ ಸಚಿವರ ಜಿಲ್ಲೆಯಾದ ಕೊಪ್ಪಳದ ಯಲಬುರ್ಗಾ ಕ್ಷೇತ್ರದಲ್ಲಿ ಸುಮಾರು 936 ವಿದ್ಯಾರ್ಥಿಗಳಿಗೆ ಕೇವಲ 05 ಜನ ಶಿಕ್ಷಕರಿದ್ದಾರೆ. ಅತಿಥಿ ಉಪನ್ಯಾಸಕರು 71 ಜನರಿದ್ದಾರೆ. ಅಲ್ಲಿ ಕೊಠಡಿಗಳ ಕೊರತೆ, ಪ್ರಯೋಗಾಲಯಗಳ ಕೊರತೆ ಮತ್ತು ಗ್ರಂಥಾಲಯಗಳ ಕೊರತೆಯನ್ನು ಕಾಣಬಹುದಾಗಿದೆ. ವಿಶೇಷವಾಗಿ ಕೊಪ್ಪಳ ಜಿಲ್ಲೆಯ ಮಹಿಳಾ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಶೌಚಾಲಯಗಳ ಕೊರತೆ ಇದೆ. ಶೌಚಾಲಯಗಳ ಕೊರತೆ ಇದ್ದಾಗ ಯಾವ ರೀತಿಯ ಅನಾಹುತಗಳಾಗಬಹುದು ಎನ್ನುವುದನ್ನು ನಾನು ಬಿಡಿಸಿ ಹೇಳಬೇಕಾಗಿಲ್ಲ. ನಮ್ಮ ಆರು ಜಿಲ್ಲೆ ಮತ್ತು ಹರಪನಹಳ್ಳಿಯಲ್ಲಿ ಸುಮಾರು 2016 ಅತಿಥಿ ಉಪನ್ಯಾಸಕರು ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಕಳೆದ ಅಧಿವೇಶನದಲ್ಲಿ ನಿಯಮ 330ರಡಿಯಲ್ಲಿ ಅತಿಥಿ ಉಪನ್ಯಾಸಕರ ಬಗ್ಗೆ ನಾವು ಪ್ರಸ್ತಾಪ ಮಾಡಿದ್ದೆವು. ಆ ಸಂದರ್ಭದಲ್ಲಿ ಅವರ ಸೇವಾ ಭದ್ರತೆ, ಬಾಕಿ ವೇತನ ಬಿಡುಗಡೆ, ವೇತನ ಹೆಚ್ಚಳ, ಪ್ರತಿ ತಿಂಗಳು ನಿಯಮಿತವಾದ ವೇತನ ಕೊಡುವುದಕ್ಕೆ ಒಂದು ಸಭೆಯನ್ನು ಕರೆಯಲಾಗುತ್ತದೆ ಎನ್ನುವ ಭರವಸೆಯನ್ನು ಆ ಸಂದರ್ಭದಲ್ಲಿ ನೀಡಿದ್ದರು. ಇಲ್ಲಿಯವರೆಗೆ ಸಭೆಯನ್ನು ಕರೆಯುವುದಕ್ಕೆ ದಿನಾಂಕವನ್ನು ನಿಗದಿ ಮಾಡಿಲ್ಲ. ಆದ್ದರಿಂದ ದಿನಾಂಕವನ್ನು ನಿಗದಿ ಮಾಡಬೇಕೆನ್ನುವುದು ನನ್ನ ಒತ್ತಾಯವಾಗಿದೆ.

ಸನ್ಮಾನ್ಯ ಸಭಾಪತಿಯವರೇ, 2160 ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಕೆಲವು ಗೊಂದಲಗಳನ್ನು ಕಾಣುತ್ತಿದ್ದೇವೆ. ಆ ಗೊಂದಲವನ್ನು ನಿವಾರಣೆ ಮಾಡಿ ಯಾವಾಗ ನೇಮಕಾತಿ ಮಾಡಿಕೊಳ್ಳಲಾಗುತ್ತದೆ ಎನ್ನುವುದನ್ನು ತಿಳಿಸಬೇಕಾಗಿದೆ. ಬೋಧಕೇತರ ಹುದ್ದೆಗಳಲ್ಲಿ ಬಹಳ ದೊಡ್ಡ ಪ್ರಮಾಣದ ಹುದ್ದೆಗಳು ಖಾಲಿ ಇವೆ. ಸಾಕಷ್ಟು ಸಂಖ್ಯೆಯಲ್ಲಿ ವಾಚ್‌ಮನ್‌ಗಳ ಮತ್ತು ಕಸ ಗುಡಿಸುವವರ ಕೊರತೆ ಇದೆ ಎನ್ನುವ ಮಾಹಿತಿಯನ್ನು ನಾನು ಎಲ್ಲ ಕಾಲೇಜುಗಳಿಂದ ಪಡೆದುಕೊಂಡಿದ್ದೇನೆ. ಉನ್ನತ ಶಿಕ್ಷಣವನ್ನು ಕೊಡುವಂತಹ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಒಳ್ಳೆಯ ವಾತಾವರಣವನ್ನು ನಾವು ಕಾಣುತ್ತಿಲ್ಲ. ಅಂತಹ ವಾತಾವರಣ ನಿರ್ಮಾಣವಾಗಬೇಕಾಗಿದೆ. ಬೋಧಕೇತರ ಹುದ್ದೆಗಳು

ಎಂದರೆ, ಗ್ರೂಪ್ 'ಡಿ' ನೌಕರರನ್ನು, ವಾಚ್‌ಮನ್‌ಗಳನ್ನು ಮತ್ತು ಕಸ ಗುಡಿಸುವವರನ್ನು ಆ ಕಾಲೇಜುಗಳಿಗೆ ಕೊಡಬೇಕಾಗಿದೆ. ಮೂಲಭೂತ ಸೌಲಭ್ಯಗಳನ್ನು ಒದಗಿಸುವುದರಲ್ಲಿ ಶೌಚಾಲಯ, ಗ್ರಂಥಾಲಯ ಮತ್ತು ಪ್ರಯೋಗಾಲಯಗಳನ್ನು ಒದಗಿಸಿಕೊಡಬೇಕಾಗಿದೆ. ಕಂಪ್ಯೂಟರ್ ಲ್ಯಾಬ್‌ಗಳಲ್ಲಿ ಹಳೆಯ ಕಂಪ್ಯೂಟರ್‌ಗಳಿವೆ. ಅವುಗಳನ್ನು ಬದಲಾವಣೆ ಮಾಡಿ ಲೇಟೆಸ್ಟ್ ಮಾಡಲ್‌ಗಳನ್ನು ಕೊಡಬೇಕಾಗಿದೆ. ಪೀಠೋಪಕರಣಗಳ ಕೊರತೆ ಬಹಳ ದೊಡ್ಡ ಪ್ರಮಾಣದಲ್ಲಿ ಕಂಡುಬರುತ್ತಿದೆ. ಇವುಗಳನ್ನೆಲ್ಲ ಒದಗಿಸಿಕೊಡುವ ನಿಟ್ಟಿನಲ್ಲಿ ಮಾನ್ಯ ಸಚಿವರು ಉತ್ತರವನ್ನು ನೀಡಬೇಕೆನ್ನುವುದು ನನ್ನ ವಿನಂತಿಯಾಗಿದೆ.

(258) 17.03.2017 ಟಿಸಿಹೆಚ್/ಎಂಡಿ 12.40

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದಂತಹ ಶ್ರೀ ಅಮರನಾಥ ಪಾಟೀಲರು ಏನು ಪ್ರಶ್ನೆಯನ್ನು ಕೇಳಿದ್ದರು, ಅದನ್ನು ನಾವು ಪ್ರಾಮಾಣಿಕವಾಗಿ ಒಪ್ಪಿಕೊಂಡಿದ್ದೇವೆ. ಹೈದರಾಬಾದ್ ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳು, ದಾವಣಗೆರೆ ಜಿಲ್ಲೆಗೆ ಸಂಬಂಧಿಸಿದಂತಹ ಹರಪನಹಳ್ಳಿ, ಅದು ಹಳೆಯ ಬಳ್ಳಾರಿ ಜಿಲ್ಲೆಗೆ ಸೇರಿರುವಂಥದ್ದು. ಆ ಪ್ರದೇಶದಲ್ಲಿ ಒಟ್ಟು 73 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿವೆ. ಈ 73 ಕಾಲೇಜುಗಳಲ್ಲಿ ಪ್ರಾಂಶುಪಾಲರ ಹುದ್ದೆ ಖಾಲಿ ಇವೆ ಎನ್ನುವುದನ್ನು ನಾನು ಹೇಳಿದ್ದೇನೆ. ಆದರೆ, ಹುದ್ದೆಯನ್ನು ಮಂಜೂರು ಮಾಡಿದ್ದೇವೆ. ನಿಮ್ಮ ಪ್ರಶ್ನೆಗೆ ನಾನು ಉತ್ತರವನ್ನು ತಿರುಚಬಹುದಾಗಿತ್ತು. ಆದರೆ ನಾನು ಆ ರೀತಿ ಮಾಡಲಿಲ್ಲ. ನೀವು ಹುದ್ದೆ ಮಂಜೂರಾಗಿದೆಯೇ ಎಂದು ಪ್ರಶ್ನೆ ಕೇಳಿದ್ದೀರಿ. ಅದಕ್ಕೆ ನಾವು ಪ್ರಾಮಾಣಿಕವಾಗಿ ಉತ್ತರವನ್ನು ಕೊಟ್ಟಿದ್ದೇವೆ. ನಾವು ತಮ್ಮ ಪ್ರಶ್ನೆ ಅರ್ಥ ಮಾಡಿಕೊಂಡು ಉತ್ತರವನ್ನು ಕೊಟ್ಟಿದ್ದೇವೆಂದು ಹೇಳಿದೆ. 73 ಕಾಲೇಜುಗಳಲ್ಲಿ ಪ್ರಾಂಶುಪಾಲರ ಹುದ್ದೆಗಳು ಖಾಲಿ ಇವೆ. ಎಲ್ಲಾ 73 ಕಾಲೇಜುಗಳಲ್ಲಿ ಈಗ ಅಲ್ಲೆಲ್ಲಾ ಪ್ರಭಾರ ಪ್ರಾಂಶುಪಾಲರು ಇದ್ದಾರೆ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಬಹಳ ಗಂಭೀರವಾದುದು. ಕರ್ನಾಟಕದಲ್ಲಿ ಒಟ್ಟು 412 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಇವೆ. ಬಹುತೇಕ ಇನ್ನೊಂದು ವಾರದೊಳಗಾಗಿ 370 ಪ್ರಾಂಶುಪಾಲರ ಹುದ್ದೆಗಳು ಖಾಲಿಯಾಗುತ್ತವೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಮತ್ತೆ ಹೊಸದಾಗಿ ಆ ಹುದ್ದೆಗಳು ಖಾಲಿ ಆಗುತ್ತವೆಯೇ?

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೇ, Out of 412 colleges 370 ಪ್ರಾಂಶುಪಾಲರ ಹುದ್ದೆಗಳು ಖಾಲಿಯಾಗುತ್ತಿವೆ. ಹೀಗಾಗಿ, ಈ ಹುದ್ದೆಗಳನ್ನು ತುಂಬಿಕೊಳ್ಳಬೇಕೆಂದು ನಾನು ಉನ್ನತ ಶಿಕ್ಷಣ ಮಂತ್ರಿ ಆದ ನಂತರ, ಇದನ್ನು ಯಾವ ರೀತಿ ಮಾಡಬೇಕೆಂದು ಇಲಾಖೆ ಅಧಿಕಾರಿಗಳ ಮಟ್ಟದಲ್ಲಿ ಒಂದು ಸಭೆಯನ್ನು ನಡೆಸಿದ್ದೇನೆ. ತಮಗೂ ಗೊತ್ತಿದೆ. ನಾವು UGC Norms ಪ್ರಕಾರವೇ ಇವರನ್ನು ನಾವು ನೇಮಕಾತಿಯನ್ನು ಮಾಡಬೇಕಾಗುತ್ತದೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅಲ್ಲಿ ಪ್ರಾಧ್ಯಾಪಕರಾಗಿ ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸಿದವರು ನಾವು ಬಹಳ ವರ್ಷಗಳಿಂದ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ್ದೇವೆ. ನಮಗೆ ಪ್ರಮೋಷನ್ ಕೊಡಿ ಎನ್ನುವಂತಹ ಮಾತನ್ನು ಕೇಳುತ್ತಿದ್ದಾರೆ. ಅದಕ್ಕೆ UGC Norms ಪ್ರಕಾರ ಅವರನ್ನು ನೇಮಕಾತಿ ಮಾಡಿ, roster and seniority maintain ಮಾಡಿ, ಯಾವ ರೀತಿ ಅವರನ್ನು ತುಂಬುವುದಕ್ಕೆ ಸಾಧ್ಯ ಎನ್ನುವುದಕ್ಕೆ ಒಂದು Special Recruitment Rules ಅನ್ನು ಮಾಡಬೇಕಾಗಿದೆ. ಈಗಾಗಲೇ ಆ ಸಂಬಂಧಪಟ್ಟ ಕಡತವನ್ನು ಡಿ.ಪಿ.ಎ.ಆರ್.ಗೆ ಕಳುಹಿಸಿಕೊಟ್ಟಿದ್ದೇವೆ. ಅದು ಕಾನೂನು ಇಲಾಖೆಗೆ ಹೋಗಬೇಕು. ನಂತರ ಅದು ಆರ್ಥಿಕ ಇಲಾಖೆಗೆ ಹೋಗಿ ಬರಬೇಕು. ಈಗಾಗಲೇ ಅದು ಪರಿಶೀಲನೆ ಹಂತದಲ್ಲಿದೆ. ಅದನ್ನು ಮುಂದಿನ ಶೈಕ್ಷಣಿಕ ವರ್ಷ ಪ್ರಾರಂಭವಾಗುವುದರ ಒಳಗಾಗಿ, ಈ ಖಾಲಿ ಇರುವಂತಹ ಎಲ್ಲಾ ಪ್ರಾಂಶುಪಾಲರ ಹುದ್ದೆಗಳನ್ನು ತುಂಬಬೇಕೆಂದು ನಾವು ಗಂಭೀರವಾಗಿ ಯೋಚನೆ ಮಾಡುತ್ತಿದ್ದೇವೆ. ನಾವು ಅದನ್ನು ಮಾಡಲೇಬೇಕು. ಏಕೆಂದರೆ, 412 ಕಾಲೇಜುಗಳಲ್ಲಿ 370 ಪ್ರಾಂಶುಪಾಲರ ಹುದ್ದೆಗಿಂತ ಹೆಚ್ಚು ಖಾಲಿಯಾಗುತ್ತವೆ. ಇನ್ನೂ ಎರಡನೇ ಪ್ರಶ್ನೆ, ಮಾನ್ಯ ಸದಸ್ಯರು ಸ್ವಲ್ಪ confusion ಮಾಡಿಕೊಂಡು ನಂತರ ಅದನ್ನು ಸರಿ ಮಾಡಿಕೊಂಡರು. ಈಗ ತಾವು ಹೇಳಿದ್ದಿರಿ, ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಒಟ್ಟು ಉಪನ್ಯಾಸಕರಿಗೆ ಸಂಬಂಧಿಸಿದಂತೆ sanctioned post is 1127. ಅದರಲ್ಲಿ ಈಗಾಗಲೇ 676 ಉಪನ್ಯಾಸಕರು ಕೆಲಸ ಮಾಡುತ್ತಿದ್ದಾರೆ. ಖಾಲಿ ಇರುವಂತಹ ಹುದ್ದೆ 451 ಆಗಿರುತ್ತದೆ. ಈ 451 ಉಪನ್ಯಾಸಕರನ್ನು ನಾವು ಈ ಶೈಕ್ಷಣಿಕ ವರ್ಷ ಪ್ರಾರಂಭವಾಗುತ್ತದೆಯಲ್ಲ ಅಷ್ಟರೊಳಗೆ ನಾವು ಅವರಿಗೆ ಪೋಸ್ಟಿಂಗ್ ಕೊಡುತ್ತೇವೆ. ಏಕೆಂದರೆ, ತಮಗೆಲ್ಲಾ ಗೊತ್ತಿರುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖಾಂತರ ಈಗಾಗಲೇ ಪರೀಕ್ಷೆಗಳನ್ನು ನಡೆಸಿ, ನಮ್ಮ ಸರ್ಕಾರ 2160 ಪ್ರಾಧ್ಯಾಪಕರನ್ನು ನೇಮಕ ಮಾಡಿ, ಆಯ್ಕೆ ಪಟ್ಟಿಯನ್ನು ಪ್ರಕಟಣೆ ಮಾಡಿದ್ದೇವೆ. ಈಗ ಸಿಂಧುತ್ವ ಪ್ರಮಾಣ ಪತ್ರ, ಜಾತಿ ಪ್ರಮಾಣ ಪತ್ರ ಹಾಗೂ ಆದಾಯ ಪ್ರಮಾಣ ಪತ್ರಗಳ ಪರಿಶೀಲನೆಯಲ್ಲಿದೆ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಅದರಲ್ಲಿ ಗೊಂದಲಗಳಿವೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. Let me complete. ಅವು ಪರಿಶೀಲನೆ ಹಂತದಲ್ಲಿವೆ. ಆ ಪ್ರಕ್ರಿಯೆಯನ್ನು ಈ ತಿಂಗಳೊಳಗಾಗಿ ಮುಗಿಸಿ, ನಾವು ಈ ಶೈಕ್ಷಣಿಕ ವರ್ಷ ಪ್ರಾರಂಭವಾಗುವುದರಲ್ಲೇ ಅವರಿಗೆ ಪೋಸ್ಟಿಂಗ್ ಅನ್ನು ಸಹ ಎಲ್ಲೆಲ್ಲಿ ಖಾಲಿ ಹುದ್ದೆಗಳಿವೆ ಅಲ್ಲಿಗೆ ಕೊಡುತ್ತೇವೆ. ಅದರಲ್ಲಿ ವಿಶೇಷ ಆದ್ಯತೆ ಮುಖಾಂತರ ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಏನು 451 ಹುದ್ದೆಗಳು ಖಾಲಿ ಇವೆ, ಅಲ್ಲಿ ಅವರಿಗೆ ಪೋಸ್ಟಿಂಗ್ ಅನ್ನು ಕೊಡುತ್ತೇವೆ. ಇನ್ನೂ ಅವರ 3ನೇ ಪ್ರಶ್ನೆಯಲ್ಲಿ ಈ ಪೀಠೋಪಕರಣ, ಕಟ್ಟಡದ ಸಮಸ್ಯೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಗ್ಗೆ ಏನು ಕೇಳಿದ್ದಾರೆ, ಈಗಾಗಲೇ ಪೀಠೋಪಕರಣ ಮತ್ತು ಕಟ್ಟಡದ ಬಗ್ಗೆಯೂ ಸಹ ಸಂಪೂರ್ಣ ಮಾಹಿತಿಯನ್ನು ನಾವು ಕೊಟ್ಟಿದ್ದೇವೆ.

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಅಂದಾಜು ಪಟ್ಟಿಯನ್ನು ಕೊಡುವಂತೆ ಕೇಳಿದ್ದೆನು. ಆ ಅಂದಾಜು ಪಟ್ಟಿಯನ್ನು ಕೊಟ್ಟಿಲ್ಲ.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೇ, ಉತ್ತರದಲ್ಲಿ ಕೊಟ್ಟಿದ್ದೇವೆ. ತಾವು ಅನುಬಂಧ–4 ಅನ್ನು ನೋಡಿ. Estimated cost ಇದೆ. What is the estimated cost?

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಯವರೇ, ಇಲ್ಲಿ ಇಲ್ಲ ಸರ್. ಬರೀ ಪೀಠೋಪಕರಣ, ಪಠ್ಯ ಪುಸ್ತಕವನ್ನು release ಮಾಡಿರುವುದು ಇದೆ.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೇ ಕೊಟ್ಟಿದ್ದೇನೆ. Released ಅಲ್ಲ, estimated cost ಇದೆ. ಎಷ್ಟು release ಆಗಿದೆ. ಇನ್ನು ಎಷ್ಟು ಆಗಬೇಕೆಂದು ಇದೆ.

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಯವರೇ, ಸರ್, ಇಲ್ಲಿ ಬಂದಿಲ್ಲ.

**ಸಭಾಪತಿಯವರು:–** ಮಾನ್ಯ ಸದಸ್ಯರಿಗೆ ಇನ್ನೊಂದು ಸಲ ಅದನ್ನು ಕಳುಹಿಸಿ ಕೊಡಿ.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೇ ಆಯಿತು, ಅದನ್ನು ನಿಮಗೆ ಇನ್ನೊಂದು ಸಲ ಕಳುಹಿಸಿಕೊಡುತ್ತೇನೆ.

**ಸಭಾಪತಿಯವರು:–** ಈಗ ಅವರದ್ದು ಇನ್ನೊಂದು ಪ್ರಮುಖ ಪ್ರಶ್ನೆ ಇತ್ತು. ಒಂದು ಸಭೆಯನ್ನು ಕರೆಯುತ್ತೇವೆ. ಆ ಸಭೆಯಲ್ಲಿ ನನ್ನನ್ನು ಕರೆಯುತ್ತೇವೆಂದು ಹೇಳಿದ್ದಿರಿ, ಅದನ್ನು ಮಾಡಿಲ್ಲವೆಂದು, ಅವರು ಹೇಳುತ್ತಿದ್ದಾರೆ. ಅದನ್ನು ಯಾವಾಗ ಮಾಡುತ್ತೀರಿ ಹೇಳಿ?

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಈ ವಿಷಯ ಬಹಳ ಪ್ರಮುಖವಾದುದು. ಈಗ ಏನು ನಮ್ಮ ರಾಜ್ಯದಲ್ಲಿ 412 ಕಾಲೇಜುಗಳಿವೆ. ಇದಕ್ಕೆ ಬೋಧನಾ ಕೊಠಡಿಗಳು, Laboratory and Library ಬೇಕು ಎಂಬುದನ್ನು ನಾನು ಖಂಡಿತವಾಗಿ ಒಪ್ಪುತ್ತೇನೆ. ಇವೆಲ್ಲವನ್ನೂ ಮಾಡುವುದಕ್ಕೆ ಈಗಾಗಲೇ ನಾವು ಒಂದು ಪ್ರತ್ಯೇಕವಾಗಿ ಸರ್ವೇ ಮಾಡಿಸಿ, ಕಡೆಯ ಪಕ್ಷ ವಿಶ್ವಬ್ಯಾಂಕ್ ಅಥವಾ ಬಾಹ್ಯ ಆರ್ಥಿಕ ನೆರವನ್ನು ತೆಗೆದುಕೊಂಡು ಇವುಗಳಿಗೆ ಮೂಲಭೂತ ಸೌಕರ್ಯಗಳನ್ನು ಕೊಡಬೇಕೆಂದು ಪ್ರಾರಂಭ ಮಾಡಿದೆವು. ಈಗಾಗಲೇ ತಾವು ಮುಖ್ಯಮಂತ್ರಿಗಳ ಬಜೆಟ್ ಭಾಷಣವನ್ನು ಓದಿದ್ದೀರಿ. ಆ ಬಜೆಟ್ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ಗಮನ ಹರಿಸಿದ್ದಾರೆ ಮತ್ತು ಮುಂದಿನ ದಿನಗಳಲ್ಲಿ ಇದರ ಬಗ್ಗೆ ಒಂದು ಸಂಪೂರ್ಣ ಅಧ್ಯಯನ ಮಾಡಿ, ಬಾಹ್ಯ ನೆರವಿನಿಂದ ಈ ಮೂಲಭೂತ ಸೌಕರ್ಯವನ್ನು ಒದಗಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಂದು ಈ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಅದರ ಬಗ್ಗೆ ಖಂಡಿತ ಕ್ರಮ ತೆಗೆದುಕೊಂಡು ಮುಂದಿನ ದಿನಮಾನಗಳಲ್ಲಿ ಈ ಪೀಠೋಪಕರಣ, Laboratory and Library ಏನೆಲ್ಲಾ ಮೂಲ ಭೂತ ಸೌಕರ್ಯಗಳನ್ನು ನಾವು ಕಾಲೇಜು ಕಟ್ಟಡಗಳಿಗೆ ಕೊಡಬೇಕು, ಅದರ ಬಗ್ಗೆ ಸರ್ಕಾರ ಗಂಭೀರವಾಗಿ ಕ್ರಮ ತೆಗೆದುಕೊಳ್ಳುತ್ತದೆ ಎನ್ನುವಂತಹ ಮಾತನ್ನು ಹೇಳುತ್ತೇನೆ.

**ಸಭಾಪತಿಯವರು:-** ಧನ್ಯವಾದಗಳು. ಅವರನ್ನು ಸಭೆಗೆ ಕರೆಯುತ್ತೇನೆಂದು ಹೇಳಿದ್ದೀರಿ. ಅದಕ್ಕೆ ಯಾವುದಾದರೊಂದು ದಿನಾಂಕವನ್ನು ಹೇಳಿ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಅವರು ಕೇಳುತ್ತಿರುವಂತಹ ಪ್ರಶ್ನೆ ಅತಿಥಿ ಉಪನ್ಯಾಸಕರನ್ನು ಖಾಯಂ ಮಾಡುವುದಕ್ಕೆ, ಈ ಅತಿಥಿ ಉಪನ್ಯಾಸಕರನ್ನು ಖಾಯಂ ಮಾಡುವ ಪ್ರಶ್ನೆ ಬರುವುದಿಲ್ಲ. ಇದು ತಮಗೆ ಗೊತ್ತಿದೆ. **(ಗೊಂದಲ)** One minute let me complete. ಏಕೆಂದರೆ, ಅತಿಥಿ ಉಪನ್ಯಾಸಕರ ಹುದ್ದೆಯು, ಯಾವ ಹುದ್ದೆ ಮಂಜೂರಾಗಿದೆ ಅದಕ್ಕೆ ಅದು ಪರ್ಯಾಯವಾಗಿ ಅಲ್ಲ. It is an extra post and not a created post. ತಮಗೆ ಗೊತ್ತಿದೆ, ಅದು created post ಆಗದೇ ಇರುವುದರಿಂದ, ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ದೇಶದ ಈ ..

.

**ಸಭಾಪತಿಯವರು:-** ಅವೆಲ್ಲಾ ಬೇಡ. ನಿಮ್ಮ ಪ್ರಶ್ನೆಯನ್ನು ಕೇಳಿ. Don't explain.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಕೊಪ್ಪಳ ಜಿಲ್ಲೆಯ GER (Gross Enrolment Ratio) ಶೇಕಡಾ 11ರಷ್ಟು ಇದೆ ಮತ್ತು ಯಾದಗಿರಿ ಜಿಲ್ಲೆಯದ್ದು ಶೇಕಡಾ 4ರಷ್ಟು ಇದೆ. ಅವರು ಅಲ್ಲಿ ಅತ್ಯಂತ ಕೆಳಮಟ್ಟದಲ್ಲಿ Gross Enrolment Ratio ಇದೆ. ಈ ಮಟ್ಟದಲ್ಲಿ ಅವರು ಹಾರಿಕೆ ಉತ್ತರವನ್ನು ಕೊಟ್ಟರೆ, ಇವರು ಏನು ಇವರ ಅವಧಿಯಲ್ಲಿ ಇದನ್ನು ಮಾಡುತ್ತಾರೋ ಅಥವಾ ಇವರು ಮುಂದಿನ ಚಾನ್ಸ್, 2018ರಲ್ಲಿ ನಮಗೆ ಇದನ್ನು ಮಾಡಲು ಕೊಡುತ್ತಾರೋ ಎಂಬುದನ್ನು ನಾನು ಕೇಳುತ್ತೇನೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ನಾನು ಹಾರಿಕೆ ಉತ್ತರವನ್ನು ಕೊಡಲಿಲ್ಲವಲ್ಲ. ನಾನು ಸ್ಪಷ್ಟವಾದ ಉತ್ತರವನ್ನು ಕೊಟ್ಟೆ. ಪ್ರಾಂಶುಪಾಲರ ಹುದ್ದೆಯನ್ನು ತಿದ್ದುಪಡಿ ಮಾಡಲು ನಿಯಮಾವಳಿಗಳನ್ನು ತರುತ್ತಿದ್ದೇವೆ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಮೂಲಭೂತ ಸೌಕರ್ಯಗಳ ಬಗ್ಗೆ...

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ನಾವು ಈಗಾಗಲೇ 412 ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯಗಳಿಗೆ ಬೇಕಾದಂತಹ ಬೋಧಕ ಕೊಠಡಿ, Library, Laboratory ಇತರೆ ಸೌಕರ್ಯಗಳು ಏನೇನು ಬೇಕೋ ಅದನ್ನು plan ಮಾಡಿಸಿದ್ದೇವೆ. ಇದಕ್ಕೆ ಸುಮಾರು ಮೂರುವರೆ ಸಾವಿರ ಕೋಟಿ ರೂಪಾಯಿಗಿಂತ ಹೆಚ್ಚು ಹಣ ಬೇಕಾಗುತ್ತದೆ. ಅದಕ್ಕಾಗಿ ವಿಶ್ವಬ್ಯಾಂಕ್ ನೆರವಿನಿಂದ ತೆಗೆದುಕೊಳ್ಳಬೇಕು.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದೆಲ್ಲಾ ಯಾವಾಗ ಆಗುತ್ತದೆ ಎಂದು ಮಾನ್ಯ ಸಚಿವರು ಹೇಳಬೇಕು.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, We need Rs. 3,500 crores. Is it a small amount? ಅದಕ್ಕೆ ಇದನ್ನು ಮಾಡಲು ಯಾವ ತರಹ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಸಹ ಉಲ್ಲೇಖ ಮಾಡಿದ್ದಾರೆ. It's huge amount. Definitely it will take time. ತಾವು ದಯವಿಟ್ಟು ಅರ್ಥ ಮಾಡಿಕೊಳ್ಳಿ. ಇದನ್ನು ಮಾಡಲು ಇಷ್ಟು ವರ್ಷಗಳಾಗಿವೆ. ಆದರೆ ಇದನ್ನು ಒಂದು ವರ್ಷದಲ್ಲಿ ಮಾಡಲು ಸಾಧ್ಯವೇ? ಖಂಡಿತವಾಗಿ ಸರ್ಕಾರ ಗಂಭೀರವಾಗಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಪ್ರಾಮಾಣಿಕ ಚಿಂತನೆಯನ್ನು ಮಾಡುತ್ತದೆ ಎನ್ನುವಂತಹ ಮಾತನ್ನು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ.

**ಸಭಾಪತಿಯವರು:–** ಮುಂದಿನ ಪ್ರಶ್ನೆ, ಒಂದೇ ಪ್ರಶ್ನೆಯನ್ನು ಮೂರು ಜನ ಕೇಳಿದ್ದೀರಿ. ಶ್ರೀ ಅರುಣ್ ಶಹಾಪುರ್‌ರವರು, ರಾಮಚಂದ್ರೇಗೌಡ್ರು ಹಾಗೂ ಶ್ರೀಮತಿ ತಾರಾ ಅನೂರಾದರವರು ಕೇಳಿದ್ದೀರಿ. ಯಾರು ಕೇಳುತ್ತೀರಿ, ಯಾರಾದರೂ ಒಬ್ಬರು ಪ್ರಶ್ನೆಯನ್ನು ಕೇಳಿ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ನಾನೇ ಪ್ರಶ್ನೆಯನ್ನು ಕೇಳುತ್ತೇನೆ.

**ಸಭಾಪತಿಯವರು:–** ಶ್ರೀ ಅರುಣ ಶಹಾಪುರ ರವರೇ, ತಾವು ಪ್ರಶ್ನೆ ಕೇಳಿ.

ಪ್ರಶ್ನೆ ಸಂಖ್ಯೆ. 697+623+699 (ಉತ್ತರ ಲಗತ್ತಿಸಿದೆ)

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ನನ್ನ ಕೊನೆಯ ಪ್ರಶ್ನೆಗೆ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಅಳವಡಿಸಿಕೊಂಡಿರುವ ಅಥವಾ ಅಳವಡಿಸಿಕೊಳ್ಳಲಿರುವ ಪಠ್ಯಪುಸ್ತಕಗಳು ಯಾವುವು? ಅವುಗಳ ಪ್ರತಿ ನೀಡುವುದು ಎಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ನನಗೆ ಪ್ರತಿ ದೊರೆತಿಲ್ಲ ಎನ್ನುವುದು ಮೊದಲ ವಿಚಾರ. ಅದನ್ನು ಸಹ ನೀವು ಒದಗಿಸಿ ಕೊಡಬೇಕೆಂದು ನಾನು ತಮ್ಮೂಲಕ ವಿನಂತಿ ಮಾಡುತ್ತೇನೆ. ಅದು ಅಪೂರ್ಣವಾಗಿದೆ. ಅರ್ಧ ಉತ್ತರ ಸಿಕ್ಕಿದೆ, ಅದರ ಮೇಲೆ ನನ್ನ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಸಚಿವರೆ, ತಾವು ಕೊಡದಿರುವುದನ್ನು ಯಾವಾಗ ಕೊಡುತ್ತೀರಿ ಎಂದು ಕೇಳುತ್ತಿದ್ದಾರೆ.

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೇ, ಲಭ್ಯವಾಗಿರುವುದೆಲ್ಲವನ್ನೂ ಕೊಟ್ಟಿದ್ದೇನೆ. ಅದು ಅವರಿಗೂ ಗೊತ್ತಿದೆ. ಬಹುಶಃ ಅರುಣ್ ಶಹಪೂರ ರವರು ಈ ಸದನದ ಒಬ್ಬ ಅತ್ಯಂತ ಸಾಮರ್ಥ್ಯವುಳ್ಳ ಸದಸ್ಯರು. ಮುದ್ರಣಕ್ಕೆ ಹೋಗುವುದಕ್ಕೆ ಮುಂಚೆಯೇ ಅವರ ಕೈಯಲ್ಲಿ ಪ್ರತಿ ಇರುತ್ತದೆ. ಹಾಗಾಗಿ, ಇದರಲ್ಲಿ ತಮ್ಮ ಅನಿಸಿಕೆಗಳೇನಾದರೂ ಇದ್ದಲ್ಲಿ ಕೇಳಿ ನಾವು ಉತ್ತರವನ್ನು ಕೊಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ನೀವು ಕೊಟ್ಟಿರುವ ಉತ್ತರದಲ್ಲಿದೆ ಹೇಳುತ್ತೇನೆ. ಆದಷ್ಟು ಬೇಗ ಪಠ್ಯ ಪುಸ್ತಕಗಳ ಪ್ರತಿಯನ್ನು ಕೊಡಿ, ಶಿಕ್ಷಕರು ಕೇಳುತ್ತಿದ್ದಾರೆ ಎನ್ನವಂತಹ ವಿನಂತಿ ಇದೆ. ಈಗ ಇರುವ ಪ್ರಶ್ನೆಯನ್ನು ನೇರವಾಗಿ ಕೇಳುತ್ತೇನೆ. ಮೊದಲನೆಯದಾಗಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಪಠ್ಯ ಪುಸ್ತಕಗಳ ಪರಿಷ್ಕರಣ ಕಾರ್ಯ ಪ್ರಗತಿಯಲ್ಲಿದೆ, ಅದು ಪೂರ್ಣಗೊಂಡಿಲ್ಲ. ಹಾಗಾದರೆ ಇದನ್ನು ಮುದ್ರಣಕ್ಕೆ ಹೇಗೆ ಕೊಟ್ಟಿರಿ? ನೀವು ಕೊಟ್ಟಿರುವ ಉತ್ತರದ ಮೇಲೆಯೇ ನಾನು ಕೇಳುತ್ತಿರುವ ಪ್ರಶ್ನೆ. ಎರಡನೆಯದು, ಪರಿಷ್ಕರಣಾ ಕಾರ್ಯ ಪೂರ್ಣಗೊಂಡಿರುವ 294 ಶೀರ್ಷಿಕೆಗಳ ಸಿ.ಡಿ.ಗಳನ್ನು ಮುದ್ರಣ ಕಾರ್ಯಕ್ಕಾಗಿ ಮುದ್ರಕರಿಗೆ ನೀಡಲಾಗಿದೆ. ಇನ್ನೂ 103 ಶೀರ್ಷಿಕೆಗಳ ಪರಿಷ್ಕರಣಾ ಕಾರ್ಯ ಪ್ರಗತಿಯ ಹಂತದಲ್ಲಿದೆ. 2017–18ನೇ ಸಾಲಿನಲ್ಲಿ ಇದನ್ನು ಹೇಗೆ ಅಳವಡಿಸಿಕೊಳ್ಳುತ್ತೀರಿ ಎನ್ನುವಂತಹ ಸಂದೇಹವನ್ನು ತಾವು ನಿವಾರಣೆ ಮಾಡಬೇಕಾಗುತ್ತದೆ. ಇನ್ನು ಎರಡನೆಯ ಸಂಗತಿ ಏನೆಂದರೆ, ಮಾನ್ಯ ಶಿಕ್ಷಣ ಸಚಿವರು ‘NCERT ಇಂದ ಪರಿಷ್ಕೃತ ಪಠ್ಯಪುಸ್ತಕಗಳ ಪರಿಶೀಲನೆಗಾಗಿ ಕರ್ನಾಟಕ ಸರ್ಕಾರಕ್ಕೆ ಪತ್ರ ಬಂದಿದೆಯೇ ಎಂದು ಕೇಳಿರುವುದಕ್ಕೆ, ಹೌದು ಬಂದಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಅದು ದಿನಾಂಕ:06–02–2017ಕ್ಕೆ ಕರ್ನಾಟಕದಲ್ಲಿ ಪರಿಷ್ಕೃತಗೊಂಡಿರುವ ಪಠ್ಯಪುಸ್ತಕವನ್ನು ಕಳುಹಿಸಿ ಎಂದು NCERT ಪತ್ರ ಬರೆದಿದೆ.

*(259) 17.3.2017 12.50 ಪಿಕೆ:ಎಂಡಿ*

**ಶ್ರೀ ಅರುಣ ಶಹಾಪುರ:–** ಮುಂದು. ಇವರು ದಿನಾಂಕ 10.2.2017ರಂದು NCERT (National Council of Educational Research and Training) ಗೆ, ಪರಿಷ್ಕೃತ ಪಠ್ಯಪುಸ್ತಕಗಳ ಸಾಫ್ಟ್ ಪ್ರತಿಯನ್ನು ಸಲ್ಲಿಸಿದ್ದಾರೆ. NCERT ಜೊತೆ ಸಂವಹನ ಮಾಡುವುದಕ್ಕೆ ದಿನಾಂಕ 14.2.2017ರಂದು ಒಬ್ಬ ಅಧಿಕಾರಿಯನ್ನೂ ಕೂಡ ನೇಮಕ ಮಾಡಿದ್ದಾರೆ. ಈ ಕ್ರಮ ಕೈಗೊಂಡ ನಂತರ, ಪರಿಶೀಲನೆ ಇರದೆಯೇ ದಿನಾಂಕ 15.2.2017 ರಿಂದ 25.2.2017 ರವರೆಗಿನ ಅವಧಿಯಲ್ಲಿ ಮುದ್ರಣಕ್ಕೆ ಆದೇಶ ಕೊಡುತ್ತಾರೆ. ಪರಿಶೀಲನೆ ನಡೆಸಿದ ಮೇಲೆ ವ್ಯತಿರಿಕ್ತ ಪರಿಣಾಮ ಬಂದರೆ ಈ ರಾಜ್ಯದ ಮಕ್ಕಳ ಪರಿಸ್ಥಿತಿ ಏನು? ಯಾವುದೇ ಪರಿಶೀಲನೆ ಇರಲಾರದೆ ನೀವು ಮುದ್ರಣದ ಆದೇಶವನ್ನು ಹೇಗೆ ಕೊಟ್ಟಿರಿ ಎಂಬುದನ್ನು ತಿಳಿಸಬೇಕು. ಮಾನ್ಯ ಸಭಾಪತಿಗಳೆ, KTBS (Karnataka Text Book Society) ಇದೊಂದು ಸ್ವಾಯತ್ತ ಸಂಸ್ಥೆ. ಶ್ರೀ ಕೆ.ಪಿ.ಪುರಂದರನಾಥ್‌ರವರು, ಪಠ್ಯಪುಸ್ತಕದ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ಸ್ವಾಯತ್ತ ಸಂಸ್ಥೆ ಆಗಬೇಕು ಎಂದು ಮಾಡಿದಾಗ, ಆ Text Book Society ಯಿಂದ ತೆಗೆದುಕೊಂಡಂಥ ತೀರ್ಮಾನಕ್ಕೆ ವ್ಯತಿರಿಕ್ತವಾಗಿ ನೀವು ಯಾವರೀತಿ ಮುದ್ರಣಕ್ಕೆ ಆದೇಶ ಕೊಟ್ಟಿದ್ದೀರಿ ಎನ್ನುವುದನ್ನು ತಿಳಿಸಬೇಕು. ಇವತ್ತೇನು ಪಠ್ಯಪುಸ್ತಕಗಳಿಗೆ ಸಂಬಂಧಪಟ್ಟಂತೆ ಆಗಿರುವ ಗೊಂದಲವನ್ನು, ಅಧ್ವಾನವನ್ನು ಹೇಗೆ ನಿರ್ವಹಿಸುತ್ತಾರೆ ಎನ್ನುವುದನ್ನೂ ತಿಳಿಸಬೇಕು. KTBS ಗೆ ಅಧ್ಯಕ್ಷರು ಯಾರು? ಮುಖ್ಯಮಂತ್ರಿಗಳು ಅದಕ್ಕೆ ಹೇಗೆ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಅಧ್ಯಕ್ಷತೆಯನ್ನು ವಹಿಸಿದರು? ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯ ಅಧ್ಯಕ್ಷರು ಕೊಟ್ಟಿರುವ ಒಂದು ಅಭಿಪ್ರಾಯದ ಮಾಹಿತಿಯನ್ನು ಮಾನ್ಯ ಶಿಕ್ಷಣ ಸಚಿವರು ಹೇಳಿದ್ದಾರೆ. ದಿನಾಂಕ 14.12.2016ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪರಿಷ್ಕರಣಾ ಸಮಿತಿಯ ಅಧ್ಯಕ್ಷರು, ಕರಡು ಪಠ್ಯಪುಸ್ತಕಗಳನ್ನು ಸರ್ಕಾರಕ್ಕೆ ಒಪ್ಪಿಸುವ ಅಗತ್ಯ ಇರುವುದಿಲ್ಲ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆ ಕಾರಣಕ್ಕಾಗಿ ನಾವು ಪಠ್ಯಪುಸ್ತಕವನ್ನು ಸರ್ಕಾರಕ್ಕೆ ಒದಗಿಸಿಲ್ಲ ಎಂದು ಮಾನ್ಯ ಸಚಿವರು ಕೊಟ್ಟಿರುವ ಉತ್ತರದ ಪೂರಕ ಟಿಪ್ಪಣಿಯಲ್ಲಿ ಇದೆ. ಹಾಗಾದರೆ ಇಲ್ಲಿ ಯಾರು supreme? ಏನು ಕಥೆ ನಡೆಯುತ್ತಿದೆ ಎನ್ನುವುದರ ಬಗ್ಗೆ ಉತ್ತರಿಸಬೇಕು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಮುಖ್ಯಮಂತ್ರಿಯವರ ನಡೆಸಿದಂತಹ ಒಂದು ಸಭೆಯಲ್ಲಿ, ಸರ್ಕಾರಕ್ಕೆ ಇದನ್ನು ಒದಗಿಸುವ ಅವಶ್ಯಕತೆಯೇ ಇಲ್ಲ ಎಂದು ಹೇಳಲು ಹೇಗೆ ಸಾಧ್ಯ?

**ಶ್ರೀ ರಾಮಚಂದ್ರಗೌಡ:-** ಸರ್ಕಾರಕ್ಕೆ ಕಳುಹಿಸಿ ಕೊಡುವ ಅವಶ್ಯಕತೆ ಇಲ್ಲ ಎಂದು ಹೇಳುವ ಅಧಿಕಾರ ಅವರಿಗೆ ಯಾರು ಕೊಟ್ಟರು?

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಗಳೆ, ಈಗ ಮಂಡನೆಯಾಗಿರುವ ಉತ್ತರವೇ ಸರ್ಕಾರದ ಉತ್ತರವಾಗಿದೆ. ಅಧಿಕಾರಿಗಳು ಕೊಟ್ಟಿರುವ ಪೂರಕ ಟಿಪ್ಪಣಿಗೂ ಈ ಸದನಕ್ಕೂ ಸಂಬಂಧ ಇಲ್ಲ. ದಿನಬೆಳಗಾದರೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಸಚಿವರಾದವರು ಮಾತನಾಡುತ್ತಿರುತ್ತಾರೆ. ಸರ್ಕಾರದ ಮಂತ್ರಿಯಾಗಿ ನಾನೇನು ಉತ್ತರ ಕೊಟ್ಟಿದ್ದೇನೆಯೋ ಅದನ್ನು ನೀವು ಪರಿಗಣಿಸಬೇಕು. ಪೂರಕ ಟಿಪ್ಪಣಿ ಸದನದ ವಸ್ತು ಅಲ್ಲ. . . .

(ಗೊಂದಲ)

**ಶ್ರೀ ಅರುಣ ಶಹಾಪುರ:-** ಆದರೆ ಅದು ಇಲ್ಲಿ ಮಂಡನೆಯಾಗಿದೆ. ಮಾನ್ಯ ಸಭಾಪತಿಗಳೆ, ತಾವು ಇದರ ಬಗ್ಗೆ ರೂಲಿಂಗ್ ಕೊಡಿ .

(ಗೊಂದಲ)

**ಶ್ರೀ ತನ್ವೀರ್ ಸೇಠ್:-** ನಾನು ಮಂಡನೆ ಮಾಡಿಲ್ಲ. ಅದು ನಿಮ್ಮ ಹತ್ತಿರ ಹೇಗೆ ಬಂತು ಎಂದು ನಾನೀಗ ಕೇಳಬೇಕಾಗುತ್ತದೆ. ನನ್ನ ಕಡತದಿಂದ ಅದು ಕಳುವಾಗಿದ್ದರೆ. . . ಅದು ನಿಮ್ಮ ಹತ್ತಿರ ಹೇಗೆ ಬಂತು ಎಂದು ಕೇಳಬೇಕಾಗುತ್ತದೆ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ರಾಮಚಂದ್ರಗೌಡ**:–ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆದಿದೆಯೇ? ಈ ಪಠ್ಯಪುಸ್ತಕಗಳಿಗೆ ಸಂಬಂಧಪಟ್ಟಂತೆ ಸರ್ಕಾರದಿಂದ ಅನುಮತಿ ಪಡೆದುಕೊಳ್ಳುವ ಅವಶ್ಯಕತೆ ಇಲ್ಲ ಎಂದು ಹೇಗೆ ಹೇಳುತ್ತಾರೆ? ...(ಗೊಂದಲ)

**ಶ್ರೀ ತನ್ವೀರ್ ಸೇಠ್**:– ತಾವು ಕೇಳುವಂತಹ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡುತ್ತೇನೆ. ಮಾನ್ಯ ಸಭಾಪತಿಗಳೆ, ...

**ಶ್ರೀ ಅರುಣ ಶಹಾಪುರ:**– ಮಾನ್ಯ ಸಭಾಪತಿಗಳೇ, ತಾವು ರೂಲಿಂಗ್ ಕೊಡಿ, ನಮಗೆ ನ್ಯಾಯ ಕೊಡಿ. ಸದನದಲ್ಲಿ ಮಂಡನೆಯಾಗಿರುವ ಕಾಗದಪತ್ರಗಳ ಬಗ್ಗೆ ಮಾನ್ಯ ಶಿಕ್ಷಣ ಸಚಿವರು ತಮ್ಮ ನಿಲುವನ್ನು ವ್ಯಕ್ತಪಡಿಸಿದ್ದಾರೆ. ಸದನದಲ್ಲಿ ಮಂಡನೆ ಆಗಿರುವ ಈ ಕಾಗದಪತ್ರಗಳ ಬಗ್ಗೆ ದಯವಿಟ್ಟು ತಾವು ರೂಲಿಂಗ್ ಕೊಡಬೇಕಾಗುತ್ತದೆ. ...

**ಶ್ರೀ ತನ್ವೀರ್ ಸೇಠ್**:– ಯಾವ ವಿಚಾರವಾಗಿ ರೂಲಿಂಗ್ ಕೊಡಬೇಕು?

**ಶ್ರೀ ಅರುಣ ಶಹಾಪುರ:**–ನೀವು ಕೊಟ್ಟಿರುವ ಉತ್ತರದ ಜೊತೆ ಏನು ಪೂರಕ ಟಿಪ್ಪಣಿ ಕೊಟ್ಟಿದ್ದೀರೋ ಅದಕ್ಕೆ ನಮ್ಮ ಜವಾಬ್ದಾರಿ ಇಲ್ಲ ಎಂದು ಹೇಳಿದ್ದೀರಲ್ಲಾ, ಅದಕ್ಕೆ ..

.

**ಶ್ರೀ ತನ್ವೀರ್ ಸೇಠ್**:– ನಾನು ಎಲ್ಲದಕ್ಕೂ ಉತ್ತರ ಕೊಡುತ್ತೇನೆ. ಮಾನ್ಯ ಸಭಾಪತಿಗಳೆ, ಗೌರವಾನ್ವಿತ ಅರುಣ ಶಹಾಪುರರವರು, ಮಾಜಿ ಸಚಿವರಾದ ಮಾನ್ಯ ರಾಮಚಂದ್ರಗೌಡರು, ಮಾನ್ಯ ಸದಸ್ಯರಾದ ತಾರಾ ಅನೂರಾಧರವರು ಕೇಳಿರುವ ಪ್ರಶ್ನೆಯ ವಿಚಾರ ಹಿಂದಿನ ಅಧಿವೇಶನದಲ್ಲಿ ನಿಯಮ 68ರ ಅಡಿ ಚರ್ಚೆಯಾಗಿತ್ತು. ಅದಕ್ಕೆ ಆಗ ಸಮಯ ಸಾಕಾಗಲಿಲ್ಲ. 2014ರ ಆಯವ್ಯಯದ ಮೇಲೆ ಮಾತನಾಡಿದ ಮಾನ್ಯ ಮುಖ್ಯಮಂತ್ರಿಗಳ ಭಾಷಣದಲ್ಲಿ ರಾಜ್ಯದಲ್ಲಿನ ಪಠ್ಯಪುಸ್ತಕಗಳ ಪರಿಷ್ಕರಣೆ ಬಗ್ಗೆ ಪ್ರಸ್ತಾಪವಾಯಿತು. ಇಲ್ಲಿ ಒಂದು ಅಂಶವನ್ನು ಬಹಳ ಸ್ಪಷ್ಟವಾಗಿ ಹೇಳಬೇಕಾಗಿದೆ. 2012ರ ಪೂರ್ವದಲ್ಲಿ ತೆಗೆದುಕೊಂಡಂಥ ತೀರ್ಮಾನದಂತೆ ಹೊಸ ಪಠ್ಯಕ್ರಮಗಳು ಏನು ಬಂತೋ ಅದರಲ್ಲಿ ಇದ್ದಂಥ ನ್ಯೂನತೆಗಳನ್ನು ತಿದ್ದುವ ಕೆಲಸವನ್ನು ಮಾತ್ರ ನಾವು ಮಾಡಿದ್ದೇವೆ. ಜೊತೆಗೆ, ಎಲ್ಲಿ ಮಕ್ಕಳ learning indicators ಇದೆಯೋ, NCF (The National Curriculum Framework) 2005 ಮತ್ತು KCF (Karnataka Curriculum Framework) 2007ಕ್ಕೆ ಅನುಗುಣವಾಗಿ ಏನು ಕಾರ್ಯ ಮಾಡಬೇಕಾಗಿತ್ತೆಂದು ಗುರಿ ನೀಡಲಾಗಿತ್ತೋ ಆ ಹಿನ್ನೆಲೆಯಲ್ಲಿ 27 ವಿವಿಧ ಸಮಿತಿಗಳನ್ನು ರಚನೆ ಮಾಡಲಾಗಿತ್ತು. ಅದರಲ್ಲಿ ಟೆಂಡರ್ ಹಾಕಿ, ಸಮಿತಿಯ ಕಾರ್ಯಕ್ರಮಗಳು ಪ್ರಾರಂಭವಾದ ಸಂದರ್ಭದಲ್ಲಿ 2015ರಲ್ಲಿ ಈ ಸರ್ವಸಮಿತಿಗಳ ಅಧ್ಯಕ್ಷರಾಗಿ ಮಾನ್ಯ ಬರಗೂರು ರಾಮಚಂದ್ರಪ್ಪನವರನ್ನು ನೇಮಿಸಲಾಯಿತು. ನಾನು ಈ ಇಲಾಖೆಯ ಜವಾಬ್ದಾರಿಯನ್ನು ವಹಿಸದ ಮೇಲೆ ಸ್ವತಃ ರುಜು ಹಾಕಿ ಒಂದು ಪತ್ರ ಬರೆದೆ. ಪರಿಷ್ಕರಣಾ ಸಮಿತಿಯವರು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಡುತ್ತಿರುವ ಕಾರ್ಯಗಳೇನು? ಇದರಲ್ಲಿ ಈ ಎಲ್ಲಾ ಅಂಶಗಳು ಕೂಡಿದೆಯೇ? ಈ ಅಂಶಗಳನ್ನು ಒಳಗೊಂಡಂತೆ ಸ್ಪಷ್ಟ ವಿವರ ಕೊಡಬೇಕು ಎಂದು ಆ ಪತ್ರದಲ್ಲಿ ತಿಳಿಸಿದ್ದೆ.

ಇದಲ್ಲದೆ ಕರ್ನಾಟಕ ಜ್ಞಾನ ಆಯೋಗ ನಮಗೇನು ಶಿಫಾರಸ್ಸು ಮಾಡಿದೆಯೋ ಅದು ಬರುವ ವರ್ಷಗಳಲ್ಲಿ ಅನುಷ್ಠಾನವಾಗುವುದಕ್ಕಿಂತ ಅದೂ ಕೂಡ ಇವುಗಳಲ್ಲಿ ಸೇರಿದೆಯೇ ಅಥವಾ ಇಲ್ಲವೋ ಎನ್ನುವುದನ್ನು ದೃಢೀಕರಿಸಿ ಕೊಡಬೇಕು ಎಂದು ತಿಳಿಸಿದ್ದೆ. ಮಾನ್ಯ ಸದಸ್ಯರು ಮೊದಲನೇ ಪ್ರಶ್ನೆಯಲ್ಲಿ, ಪರಿಷ್ಕರಣೆ ಕಾರ್ಯ ಪೂರ್ಣಗೊಂಡಿದೆಯೇ ಎಂದು ಕೇಳಿದ್ದಾರೆ. ಸಮಿತಿಯಿಂದ ಬಂದಿರುವ ವರದಿಯನ್ನು ನನ್ನ ಇಲಾಖೆಯಿಂದ ಪರಿಶೀಲನೆ ಮಾಡುವ ಕೆಲಸವನ್ನು ಈಗಲೂ ಮಾಡುತ್ತಿದ್ದೇನೆ ಎಂದು ಹೇಳಿದ್ದೇನೆ. 62 ಪ್ಯಾಕೇಜ್‌ಗಳನ್ನು ಮಾಡಿ ಮುದ್ರಣಕ್ಕೆ ಕೊಡುವಂಥದ್ದಕ್ಕೆ ಈಗಾಗಲೇ ಟೆಂಡರ್ ಪ್ರಕ್ರಿಯೆ ಮುಗಿಸಿದ್ದೇವೆ. ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಮುದ್ರಣದ ವಸ್ತುವನ್ನು ಕೊಡುತ್ತಿದ್ದೇವೆ. ಈಗಾಗಲೇ ನಾವು ಬಹುತೇಕ ಎಲ್ಲವನ್ನೂ ಮುದ್ರಣಕ್ಕೆ ಕಳುಹಿಸಿದ್ದೇವೆ. ಭಾಷಾ ಅಲ್ಪಸಂಖ್ಯಾತರ ವಿಷಯದಲ್ಲಿ ಬರಬೇಕಾಗಿರುವ ಸುಮಾರು ಪುಸ್ತಕಗಳನ್ನು ನಾವು ಕೊಟ್ಟಿದ್ದೇವೆ. ಪರಿಷ್ಕರಣಾ ಸಮಿತಿಗೆ ಏನು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಸಂಬಂಧಪಟ್ಟಂತೆ ಪೂರ್ಣ ಜವಾಬ್ದಾರಿಯನ್ನು ಕೊಟ್ಟಿದ್ದೆವೋ ಅದರಲ್ಲಿ 9ನೇ ಮತ್ತು 10ನೇ ತರಗತಿಯ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳನ್ನು ಹೊರತುಪಡಿಸಿ ನಿಮ್ಮಿಂದ ಪಡೆಯುತ್ತೇವೆ ಎಂದು ಹೇಳಿದ್ದೆವು. ಈಗ NCERT ಪುಸ್ತಕಗಳನ್ನು ಅಳವಡಿಸಿಕೊಳ್ಳುವಂಥದ್ದನ್ನು ಮಾಡಿರುವುದರಿಂದ ಅದಕ್ಕೆ ಸಂಬಂಧಪಟ್ಟಂತೆ 54 ಸಿ.ಡಿ.ಗಳನ್ನು ಅವರು ನಮಗೆ ಕೊಡಬೇಕಾಗಿತ್ತು, ಅದನ್ನು ಸ್ವೀಕರಿಸಿಲ್ಲ. ಹಾಗಾಗಿ ಆ ಲೆಕ್ಕವನ್ನು ಅಲ್ಲಿಗೆಯೇ ಕೊಟ್ಟಿದ್ದೇವೆ. ಆದರೆ, ಇದರಲ್ಲಿ ಯಾವುದೇ ಗೊಂದಲವಾಗುವುದಿಲ್ಲ. ಪಠ್ಯಕ್ರಮಗಳ ಪರಿಷ್ಕರಣೆ ಎನ್ನುವುದಕ್ಕಿಂತ ಅದನ್ನು ಸರಿಪಡಿಸುವ ಕೆಲಸವನ್ನು ಈ ಸರ್ಕಾರ ಮಾಡಿದೆ. ಎಲ್ಲೆಲ್ಲಿ ನ್ಯೂನತೆಗಳಿತ್ತು ಎನ್ನುವುದನ್ನು ನಾವು ಹೇಳಿದ್ದೇವೆ. ಇದು ಸಾಕಷ್ಟು ಪತ್ರಿಕೆಗಳಲ್ಲೂ ಬಂದಿದೆ, ಬಹಿರಂಗವಾಗಿದೆ. ಹಾಗಾಗಿ ನಮ್ಮ ಮಕ್ಕಳ ವಯೋಮಿತಿಗೆ ತಕ್ಕಂತೆ ಬೇಕಾಗಿರುವುದು ಏನು ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಕೊಡುತ್ತಿದ್ದೇವೆ.

1ನೇ ತರಗತಿಯಿಂದ 8ನೇ ತರಗತಿವರೆಗೂ ಎಲ್ಲೂ ಪಠ್ಯ ಕ್ರಮದಲ್ಲಿ ವ್ಯತ್ಯಾಸಗಳಾಗಬಾರದು. ಪ್ರಾಥಮಿಕ ಶಾಲಾ ವಿಭಾಗದಲ್ಲಿ ನಮ್ಮ ರಾಜ್ಯದ ವಿಚಾರವಾಗಿ ಹೆಚ್ಚಿನ ಮಾಹಿತಿ ಕೊಡಬೇಕು, ಪ್ರೌಢ ಶಾಲಾ ವಿಭಾಗದಲ್ಲಿ ದೇಶದ ಮಾಹಿತಿ ಸಿಗಬೇಕು ಮತ್ತು ಪದವಿಪೂರ್ವ ಮಟ್ಟದಲ್ಲಿ ಇಡೀ ಪ್ರಪಂಚದ ಜ್ಞಾನ ಸಿಗಬೇಕು ಎನ್ನುವ ಅಂಶವನ್ನು ಗಮನದಲ್ಲಿಟ್ಟುಕೊಂಡು, ಪ್ರತಿಯೊಂದರಲ್ಲೂ ಸ್ಥಳೀಯವಾದ ಉದಾಹರಣೆ ಕೊಟ್ಟು ಹೋಲಿಕೆ ಮಾಡಿ ಪಠ್ಯಕ್ರಮ ತರುವ ವ್ಯವಸ್ಥೆ ಮಾಡಿದ್ದೇವೆ. ಇಲ್ಲಿ, ಕೇಸರಿಕರಣವಾಗಿದೆ ಎಂದು ಹೇಳುವುದು ಅಥವಾ ಅಹಿಂದ ಪರವಾಗಿದೆ ಎಂದು ಹೇಳುವ ಪ್ರಶ್ನೆ ಇಲ್ಲ. ಯಾರನ್ನೂ ಓಲೈಕೆ ಮಾಡುವ ಕೆಲಸ ಮಾಡಿಲ್ಲ. ಈ ರಾಜ್ಯದ ಮಕ್ಕಳ ಜ್ಞಾನ ವೃದ್ಧಿ ಆಗುವುದಕ್ಕೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಏನು ಮಾಡಬೇಕೋ ಅದಕ್ಕೆ ಸಂಬಂಧಪಟ್ಟ ಕೆಲಸ ಮಾಡಿದ್ದೇವೆ. NCF 2005 ಏನಿದೆ, ಅದರಂತೆ ನಾವು ಮಾಡಿಕೊಂಡು ಬಂದಿದ್ದೇವೆ. ನಮ್ಮ ವಿಧಾನಸಭೆಯಲ್ಲಿ NCF 2012 ಎಂದು ಹೇಳಿದರು. ಅದನ್ನು ಇದುವರೆಗೂ ನಾನಂತೂ ನೋಡಿಲ್ಲ, ಅದು ಮುದ್ರಣವೇನಾದರೂ ಆಗಿದ್ದರೆ ಕೊಡಿ ಎಂದು ನಾನೇ ಕೇಳಿದೆ. ನೇರವಾಗಿ NCERT ಪುಸ್ತಕಗಳನ್ನು ನಾವು ತೆಗೆದುಕೊಳ್ಳುತ್ತಿರುವುದರಿಂದ, ರಾಷ್ಟ್ರೀಯ ಪಠ್ಯಕ್ರಮಗಳನ್ನು ಹಂತ ಹಂತವಾಗಿ ನಮ್ಮ ರಾಜ್ಯದಲ್ಲಿ ತರುತ್ತಿದ್ದೇವೆ. NEET (National Eligibility cum Entrance Test) ಪರೀಕ್ಷೆ ಮತ್ತು CET (Common Entrance Test) ಪರೀಕ್ಷೆಗೆ ಸಂಬಂಧಪಟ್ಟಂತೆ ನಮ್ಮ ಮಕ್ಕಳಿಗೆ ಸಮಾನವಾದ ವೇದಿಕೆ ಸಜ್ಜು ಮಾಡಿಕೊಡುವ ಕೆಲಸ ಮಾಡುತ್ತಿದ್ದೇವೆ. ಇದರಲ್ಲಿ ರಾಜಕಾರಣ ಸಲ್ಲದು. ತಪ್ಪು ಗ್ರಹಿಕೆ ಮತ್ತು ತಪ್ಪು ಕಲ್ಪನೆಗಳಿದ್ದರೆ ಅದನ್ನು ದೂರ ಮಾಡಿಕೊಳ್ಳೋಣ.

*(260)17.03.2017-MM-RN 1.00*

**ಶ್ರೀ ತನ್ವೀರ್ ಸೇಠ್:-** ಮುಂದು. ಮುಖ್ಯಮಂತ್ರಿಯವರ ಜೊತೆಗೆ ಸಭೆ ಮಾಡುವುದಾಗಲೀ ಅಥವಾ ಬೇರೆ ಇನ್ನಾರಾದರೂ ಅಧಿಕಾರಿಗಳ ಜೊತೆಗೆ ಸಭೆ ಮಾಡುವುದಾಗಲೀ ಅಥವಾ ನಿಮ್ಮ ಜೊತೆಗೆ ಕುಳಿತು ಸಮಾಲೋಚನೆ ಮಾಡುವಂತಹದ್ದಾಗಲೀ ಇವೆಲ್ಲಾ ಏನಾಗುತ್ತದೆ ಎಂದರೆ ಯಾರ ವಿಚಾರವನ್ನೂ ನಾವು ಕೇಳಬಾರದು ಎಂದಲ್ಲ. ಏಕೆಂದರೆ ಬೆಳಗಾವಿ ಅಧಿವೇಶನದಲ್ಲಿ ಮುದ್ರಣ ವಸ್ತುಗಳು ನನಗೆ ಇನ್ನೂ ತಲುಪಿಲ್ಲದಿರುವುದರಿಂದ ಮುದ್ರಣಕ್ಕೆ ಇನ್ನೂ ಕಳುಹಿಸಿಲ್ಲ. ಆದರೆ 2018-19ನೇ ಸಾಲಿನಲ್ಲಿ ಬರಬಹುದೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ತದನಂತರ ಮುದ್ರಣಕ್ಕೆ ಕಳುಹಿಸುವ ಸಂದರ್ಭ ಬಂದಾಗ ಜನವರಿ 15ನೇ ತಾರೀಖಿನ ನಂತರ ಮುದ್ರಣಕ್ಕೆ ಕಳುಹಿಸಿ ಎಂದು ಮಾನ್ಯ ಮುಖ್ಯಮಂತ್ರಿಯವರು ಆದೇಶ ಮಾಡಿದರು. ಇಲ್ಲಿ ಪೂರಕ ಟಿಪ್ಪಣಿಗಳನ್ನು ನನ್ನ ಅಧಿಕಾರಿಗಳು ನನ್ನ ಮಾಹಿತಿಗಾಗಿ ಬರೆಯುವಂತಹದ್ದಾಗಿದ್ದು, ಅದು ನನ್ನ ಕಡತದಲ್ಲಿದ್ದು; ಅದು ನಿಮ್ಮ ಕೈಗೆ ಸೇರಿದೆ ಎಂದರೆ, ಅದು ಹೇಗೆ ಎನ್ನುವುದನ್ನು ನಾನು ತನಿಖೆ ಮಾಡಿಸಬೇಕಾಗುತ್ತದೆ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಚಿವರೇ, ಅದನ್ನು ಮಾನ್ಯ ಸಭಾಪತಿಯವರು ಕೊಟ್ಟಿದ್ದಾರೆ.

**ಶ್ರೀ ತನ್ವೀರ್ ಸೇಠ್:-** ಸರಿ ಹಾಗಿದ್ದರೆ ಅದೇನೇ ಬಂದಿದ್ದರೂ ಕೂಡ ಸರ್ಕಾರದ ಪರವಾಗಿ ಮಂತ್ರಿಗಳು ರುಜು ಮಾಡಿಕೊಡುವ ಉತ್ತರ ಅದು ಉತ್ತರ. ಅದಕ್ಕೆ ಪೂರಕವಾಗಿ ಬರುವ ಟಿಪ್ಪಣಿಗಳು, ಅಡಕಗಳು ನಾವು annexures ಏನು ಹಾಕುತ್ತೇವೆ ಅದು ನಿಜ. ಆದರೆ ಪೂರಕ ಟಿಪ್ಪಣಿ ಮತ್ತು ಹೆಚ್ಚುವರಿ ಮಾಹಿತಿಗಳು ಸಚಿವರ ಕಡತದಲ್ಲಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಾಕುವುದಾಗಿದ್ದು ಅದೆಲ್ಲ ಸೇರಿ ಬಂದಿದೆ ಎಂದರೆ ಅದು ಸರಿಯಲ್ಲ. ನಾನು ಹೇಳುವುದೇನೆಂದರೆ, ಇದರಲ್ಲಿ ಯಾವುದೇ ಗೊಂದಲವಿಲ್ಲ. ರಾಜ್ಯದ ಪ್ರಗತಿಗೆ ನಮ್ಮ ಮಕ್ಕಳನ್ನು ನಾಳೆ ಉತ್ತಮವಾದಂತಹ ಪ್ರಜೆಗಳನ್ನಾಗಿ ಮಾಡುವುದಕ್ಕೆ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಅದನ್ನು ಮಾಡಿರುವಂತಹದಾಗಿದ್ದು, ಅದರಲ್ಲಿ ಯಾವುದೇ ರೀತಿಯ ...

**ಸಭಾಪತಿಯವರು:–** 15 ನಿಮಿಷವಾಯಿತು. ಒಬ್ಬೊಬ್ಬರಿಗೆ 15 ನಿಮಿಷ ಕೊಡುವುದಕ್ಕಾಗುವುದಿಲ್ಲ.

**ಶ್ರೀಮತಿ ತಾರಾ ಅನೂರಾಧ:–** ಮಾನ್ಯ ಸಭಾಪತಿಯವರೇ, ನನ್ನ ಪೂರಕ ಪ್ರಶ್ನೆಗೆ ಉತ್ತರ ಬರಲಿಲ್ಲ. ಅವರು ಹೇಳಿದರು. ನಾನು ಕೇಳಬೇಕಾಗಿರುವುದು ಕೇವಲ ಎರಡು ಮೂರು ಪ್ರಶ್ನೆಗಳು ಮಾತ್ರ. ಪೂರಕ ಟಿಪ್ಪಣಿಗಳನ್ನು ಕೊಟ್ಟಿರುವುದಕ್ಕೆ ಮಾನ್ಯ ಸಚಿವರು ಅಧಿಕಾರಿಗಳ ಮೇಲೆ ಏನು ಕ್ರಮಗಳನ್ನು ತೆಗೆದುಕೊಳ್ಳುತ್ತಾರೋ ತೆಗೆದುಕೊಳ್ಳಲಿ ಅದರ ರೂಲಿಂಗ್ ನೀವು ಏನು ಕೊಡುತ್ತೀರೋ ಅದನ್ನು ಹೇಳಿ. ನಮಗೆ ಬೇಕಾಗಿರುವುದೇನೆಂದರೆ ಹಿಂದೆ KTBS (Karnataka Text Book Society) ತೆಗೆದುಕೊಂಡ ನಿರ್ಣಯವನ್ನು ರದ್ದುಗೊಳಿಸಿದ್ದು, ಯಾರು, ಯಾವ ಸಭೆಯಲ್ಲಿ ಇರಬೇಕು ಮತ್ತು ಪಠ್ಯಪುಸ್ತಕದ ವಿಷಯದಲ್ಲಿ ಯಾರ ತೀರ್ಮಾನ ಅಂತಿಮ ಎನ್ನುವುದು ನನಗೆ ಗೊತ್ತಾಗಬೇಕು. ಆರ್‌ಟಿಐ ಕಾನೂನಿನ ಪ್ರಕಾರ ಹಾಗೂ ಕರ್ನಾಟಕ ಶಿಕ್ಷಣ ಕಾಯಿದೆಯ ಪ್ರಕಾರ ಕರ್ನಾಟಕದಲ್ಲಿ ಈ ಕುರಿತು ಇರುವ ವ್ಯವಸ್ಥೆಗಳೇನು ಎನ್ನುವುದು ನಮಗೆ ಗೊತ್ತಾಗಬೇಕು. ನಾನು ಕೇಂದ್ರದಲ್ಲಿ ಶಿಕ್ಷಣ ಮಂತ್ರಿಯವರನ್ನು ಭೇಟಿ ಮಾಡಿದಾಗ ಅವರು ಹೇಳಿದ ವಿಷಯವೇನೆಂದರೆ ಕೇಂದ್ರದ ಹೊಸ ಶಿಕ್ಷಣ ನೀತಿ ಜಾರಿಗೆ ಬಂದರೆ ನೀವು ಹೊಸ ಪಠ್ಯಪುಸ್ತಕಗಳನ್ನು ಪ್ರಿಂಟ್ ಮಾಡುತ್ತೀರಾ? ಏನು ಮಾಡುತ್ತೀರಿ ಅದನ್ನು ಹೇಳಿ. ಏಕೆಂದರೆ ಅದು ಮುಂದಿನ ವರ್ಷದಿಂದ ಜಾರಿಗೆ ಬರುವ ಸಾಧ್ಯತೆಗಳಿವೆ. ಮೊದಲು ಕೇಳಿದ ಎರಡು ಪ್ರಶ್ನೆಗಳಿಗೆ ಉತ್ತರ ನೀಡಿ ಕೊನೆಗೆ ಇದಕ್ಕೆ ಉತ್ತರ ಕೊಡಿ.

**ಸಭಾಪತಿಯವರು:–** ಮಾನ್ಯ ಸಚಿವರೇ, ಒಂದು ನಿಮಿಷ ಅವರೂ ಪ್ರಶ್ನೆಯನ್ನು ಕೇಳಿ ಬಿಡಲಿ. ಅವರೂ ಒಬ್ಬ signatory.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, ಬಹಳ ಮುಖ್ಯವಾದ ಒಳ್ಳೆಯ ಕೆಲಸ ಮಾಡಿರುವುದೆಂದರೆ ...

**ಸಭಾಪತಿಯವರು:–** ಪ್ರಶ್ನೆ ಕೇಳಿ ನಾನು ಆಮೇಲೆ ಹೇಳುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೆ, ದಿನಾಂಕ 06-02-2017ರಲ್ಲಿ ...

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ಸುಮಾರು ಅರ್ಧ ಗಂಟೆ ತೆಗೆದುಕೊಳ್ಳಲಿ. ಈಗ ಪ್ರಶ್ನೋತ್ತರ ಅವಧಿಯಲ್ಲಿದ್ದೇವೆ. ಇನ್ನೂ ಹಲವಾರು ಪ್ರಶ್ನೆಗಳಿವೆ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಇಡೀ ಮೂರು ಪ್ರಶ್ನೆಗಳಲ್ಲಿ ಸರ್ಕಾರ ಪ್ರಾಮಾಣಿಕವಾಗಿ ಇಲ್ಲ. ...

(ಗೊಂದಲ)

**ಶ್ರೀಮತಿ ತಾರಾ ಅನೂರಾಧ:-** ಮಾನ್ಯ ಸಭಾಪತಿಯವರೇ, ಹಾಗಾದರೆ ಶಿಕ್ಷಣದ ಬಗ್ಗೆ ಮಾತನಾಡುವುದು ಬೇಡವೇ?

**ಶ್ರೀ ಐವನ್ ಡಿ'ಸೋಜಾ:-** ಅದನ್ನು ಕನ್ವರ್ಟ್ ಮಾಡೋಣ

**ಶ್ರೀಮತಿ ತಾರಾ ಅನೂರಾಧ:-** ಮಾನ್ಯ ಐವನ್ ಡಿ'ಸೋಜಾರವರೇ, ಕನ್ವರ್ಟ್ ಮಾಡುವುದು ಬೇರೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಅರ್ಧಗಂಟೆ ಚರ್ಚೆಗೆ ಕನ್ವರ್ಟ್ ಮಾಡಿ. ಆಗ ಚರ್ಚೆ ಮಾಡೋಣ. ಈ ವಿಷಯದಲ್ಲಿ ದೊಡ್ಡ ವಿಚಾರವಿದೆ. ಕನ್ವರ್ಟ್ ಮಾಡಿ. ಬೇರೆಯವರು ಕಾಯಬೇಕಾಗುತ್ತದೆ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ನನ್ನದು ಎರಡೇ ಪ್ರಶ್ನೆ.

**ಸಭಾಪತಿಯವರು:-** ಈಗ 16 ನಿಮಿಷವಾಯಿತು. 16 ನಿಮಿಷ ಬಿಟ್ಟಿದ್ದೇನೆ. ಇನ್ನೂ ಈ ಪ್ರಶ್ನೆಗೆ ಎಷ್ಟು ನಿಮಿಷಗಳು ಬೇಕು?

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ಎರಡು ಪ್ರಶ್ನೆಯೇನೆಂದರೆ, *NCERT* ಯಿಂದ ಇನ್ನೂ ಪರಿಷ್ಕೃತ ಪಠ್ಯಪುಸ್ತಕಗಳನ್ನು ಪರಿಶೀಲನೆ ಮಾಡುತ್ತಿರುವಾಗ ನೀವು 14ನೇ ತಾರೀಖಿಗೆ ಸಭೆ ಮಾಡಿ 15ನೇ ತಾರೀಖಿಗೇ ಮುದ್ರಣಕ್ಕೆ ಕೊಟ್ಟು ಬಿಟ್ಟಿದ್ದೀರಿ. ಅಂತಹ ಜರೂರು ಏನಿತ್ತು? ಇದು ಮೊದಲನೆಯದು. *National Council of Educational Research and Training* (*NCERT*) ಪರಿಶೀಲನಾ ವರದಿ ಬಂದ ಮೇಲೆ ಬದಲಾವಣೆ ಇದ್ದರೆ ಪುನಃ ಪ್ರಿಂಟ್ ಮಾಡುತ್ತೀರಾ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಆಯಿತು ಪ್ರಶ್ನೆ ಬೇಕು. ವಿವರಣೆ ಬೇಡ. It is a very good question. ಆ ಮೂರು ಜನರಿಗೇ ನನ್ನ ಹತ್ತಿರ ಸಮಯವಿಲ್ಲ. ಇನ್ನು ನಾಲ್ಕನೆಯವರಿಗೆ ಎಲ್ಲಿಂದ ಸಮಯ ಕೊಡಲಿ?

**ಶ್ರೀ ರಾಮಚಂದ್ರಗೌಡ:-** 14ನೇ ತಾರೀಖಿಗೆ ಮೀಟಿಂಗ್ ಮಾಡಿ ಅದರ ವರದಿಯನ್ನು 15ನೇ ತಾರೀಖಿಗೇ ಮುದ್ರಣಕ್ಕೆ ಕೊಡುವ ಜರೂರು ಏನು? ಪರಿಶೀಲನಾ ವರದಿಯಲ್ಲಿ ಅದನ್ನು ಬದಲಾವಣೆ ಮಾಡಿದರೆ ಪುನಃ ಪ್ರಿಂಟ್ ಮಾಡುತ್ತೀರಿ.

**ಸಭಾಪತಿಯವರು:-** ಮಾನ್ಯ ಸಚಿವರೇ, ಒಂದು ನಿಮಿಷ ಕುಳಿತುಕೊಳ್ಳಿ. ನಾನು ಹೇಳುತ್ತೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳಿ.

**ಸಭಾಪತಿಯವರು:-** ಆಯಿತು ಹೇಳುತ್ತೇನೆ ಕುಳಿತುಕೊಳ್ಳಿ. ಮಾನ್ಯ ಸಚಿವರೆ, ಒಂದು ವಿಷಯ. ಸಾಮಾನ್ಯವಾಗಿ ಸದನದಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಅಥವಾ ಬೇರೆ ಸಮಯದಲ್ಲಿ ಸರ್ಕಾರದ ಪರವಾಗಿ ಏನು ಕಾಗದ ಪತ್ರಗಳನ್ನು ಕೊಡುತ್ತೀರಿ ಅದನ್ನು ನಾವು ಗೌರವಾನ್ವಿತ ಸದಸ್ಯರಿಗೆ ಕಳುಹಿಸಿಕೊಡುತ್ತೇವೆ. ಆ ಕಾಗದಪತ್ರಗಳಲ್ಲಿ ಗೌಪ್ಯ ಕಾಗದಪತ್ರಗಳು ಅಕಸ್ಮತ್ತಾಗಿ ನಿಮ್ಮ ಇಲಾಖೆಯಿಂದ ಯಾವುದಾದರೂ ಕಾರಣಕ್ಕಾಗಿ ಸರಬರಾಜಾಗಿ ಬಿಟ್ಟಿದ್ದರೆ ಅದಕ್ಕೆ ನಿಮ್ಮ ಇಲಾಖೆಯೇ ಹೊಣೆಯಾಗುತ್ತದೆ. ಬೇರೆ ಯಾರೂ ಅಲ್ಲ. ಒಮ್ಮೆ ಕೊಟ್ಟಮೇಲೆ ಅದು ಸದನದ ಆಸ್ತಿ. ಅದನ್ನು ನಾವು disown ಮಾಡುವುದಕ್ಕಾಗುವುದಿಲ್ಲ. ನೀವು ಏನು ಮಾಡಬಹುದೆಂದರೆ, ಈ ತರಹದ ಇಕ್ಕಟ್ಟಿಗೆ ಸಿಕ್ಕಿಹಾಕಿಕೊಂಡ ಸಂದರ್ಭದಲ್ಲಿ ಅದನ್ನು ಇನ್ನೊಮ್ಮೆ ಪರಿಶೀಲನೆ ಮಾಡಿ, you have got every right to withdraw it. ಆದ್ದರಿಂದ ಅದನ್ನು ನಾನು ಒಪ್ಪುವುದಿಲ್ಲ ಎಂದು ಹೇಳಬೇಡಿ. ಅದನ್ನು withdraw ಮಾಡಿಲ್ಲ ಎನ್ನುವ ತನಕ ಅದು ಸದನದ ಆಸ್ತಿ ಮತ್ತು ಅಧಿಕೃತ ದಾಖಲೆಯಾಗುತ್ತದೆ ಇದು ಮೊದಲನೆಯದು. ಎರಡನೆಯದಾಗಿ ಇದು ಬಹಳ ಗಂಭೀರವಾಗಿರುವ ವಿಷಯವಾಗಿದೆ. ಈಗಾಗಲೇ ನನಗೆ ಎರಡು ಮೂರು ಜನ ಗೌರವಾನ್ವಿತ ಸದಸ್ಯರು ಮುಂದಿನ ಪ್ರಶ್ನೆಯವರು ಪ್ರಶ್ನೋತ್ತರ ಅವಧಿಯನ್ನು ಎಷ್ಟು ಗಂಟೆಗಳ ಕಾಲ ನಡೆಸುತ್ತೀರಿ ಎಂದು ಚೀಟಿ ಕಳುಹಿಸುತ್ತಿದ್ದಾರೆ. ಈಗ ನಾನು ಎರಡು ಗಂಟೆಗಳ ಹತ್ತಿರಕ್ಕೆ ಬಂದಿದ್ದೇನೆ. ಇನ್ನೂ ಎಷ್ಟು ಸಮಯ ನಡೆಸುವುದು? ಹಾಗಾಗಿ ...

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಸೋಮವಾರ ಬೆಳಿಗ್ಗೆ ಅರ್ಧಗಂಟೆ ಚರ್ಚೆಗೆ ಸಮಯವನ್ನು ತೆಗೆದುಕೊಳ್ಳಿ.

**ಸಭಾಪತಿಯವರು:-** ಸೋಮವಾರ ಬೆಳಿಗ್ಗೆ ಈ ವಿಷಯವನ್ನು ಅರ್ಧಗಂಟೆ ಚರ್ಚೆಗೆ ತೆಗೆದುಕೊಳ್ಳುತ್ತೇನೆ. ಆದರೆ ನಾನು ತೆಗೆದುಕೊಳ್ಳಲು ಬರುವುದಿಲ್ಲ ಒಂದು ನೋಟಿಸ್ ಕೊಡಬೇಕು.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಸೋಮವಾರ ಬೆಳಿಗ್ಗೆ ಖಂಡಿತವಾಗಿ ಚರ್ಚೆಗೆ ತೆಗೆದುಕೊಳ್ಳಬೇಕು. ಇದು ಬಹಳ ಪ್ರಮುಖವಾದ ವಿಷಯವಾಗಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ನೋಟಿಸ್ ಕೊಡಿ ನಾನು ತೆಗೆದುಕೊಳ್ಳುತ್ತೇನೆ. ಧನ್ಯವಾದಗಳು. ಮುಂದಿನ ಪ್ರಶ್ನೆ ಶ್ರೀ ಕೆ.ವಿ. ನಾರಾಯಣಸ್ವಾಮಿ.

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೇ, ಇಲಾಖೆಯಿಂದ ಬರುವಂತಹ ಪೂರಕ ಟಿಪ್ಪಣಿ ಸರಬರಾಜಾಗಿರುವುದು ನನಗೆ ಗೊತ್ತಿರಲಿಲ್ಲ. ಈಗ ಸರಬರಾಜಾಗಿರುವುದರಿಂದ ಅದು ನನ್ನ ಜವಾಬ್ದಾರಿ. ಆದರೆ ಅಲ್ಲಿ ಯಾವುದು ವ್ಯತಿರಿಕ್ತವಾಗಿರುವ ವಿಚಾರ ಬರುವುದಿಲ್ಲ.

**ಸಭಾಪತಿಯವರು:–** ಸಂಬಂಧಪಟ್ಟ ಪ್ರತಿಯನ್ನು ಅವರು ಕೊಡುತ್ತಾರೆ ಅದನ್ನು ಪರಿಶೀಲನೆ ಮಾಡಿ.

**ಚುಕ್ಕೆ ಪ್ರಶ್ನೆ ಸಂಖ್ಯೆ: 721 (ಉತ್ತರ ಲಗತ್ತಿಸಿದೆ)**

**ಸಭಾಪತಿಯವರು:–** ವಸತಿ ಸಚಿವರಿಗೆ ಪ್ರಶ್ನೆ ಕೇಳಿ. Supplementary questions ಕೇಳಿ.

**ಶ್ರೀ ಕೆ.ವಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮೊದಲನೇ ಪ್ರಶ್ನೆಗೆ ಉತ್ತರ ಅಂಕಿ ಅಂಶದ್ದು. ಅದರಲ್ಲಿ ನನ್ನ ಪ್ರಶ್ನೆ ಗ್ರಾಮೀಣ ವಸತಿ ಯೋಜನೆಗೆ ಕೇಂದ್ರದಿಂದ ಹಾಗೂ ರಾಜ್ಯದಿಂದ ಬಿಡುಗಡೆಯಾದ ಅನುದಾನ ಎಷ್ಟು ಹಾಗೂ 2013ರಿಂದ ವರ್ಷವಾರು ಹಾಗೂ ಜಿಲ್ಲಾವಾರು ವಿವರ ಕೊಡಿ ಎಂದು ಕೇಳಿದ್ದೇನೆ. ಇದರಲ್ಲಿ ಒಟ್ಟು ಮೊತ್ತ ಇದೆ. ಇದು ಸ್ವಲ್ಪ ಸರಿಯಾಗಿದೆ ಒಂದು ಸಣ್ಣ ವ್ಯತ್ಯಾಸವಿದೆ. 2012–13 ರಿಂದ 2016–17ರಲ್ಲಿ ಒಟ್ಟು ರೂ. 12,169 ಕೋಟಿ 40 ಲಕ್ಷ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನ ಬಿಡುಗಡೆಯಾಗಿದೆ. ಹಾಗೆಯೇ ಜಿಲ್ಲಾವಾರು ಅನುದಾನ ಬಿಡುಗಡೆಯಾಗಿರುವುದು ರೂ. 12,035 ಕೋಟಿ 19 ಲಕ್ಷ. ಇದರಲ್ಲಿ ಸುಮಾರು 130 ಕೋಟಿಯಷ್ಟು ವ್ಯತ್ಯಾಸವಿದೆ. ಇದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೇ ಪ್ರಶ್ನೆಯೆಂದರೆ ತಾಲ್ಲೂಕು ಮತ್ತು ಜಿಲ್ಲಾ ಮಟ್ಟಗಳಲ್ಲಿ ವಸತಿ ಇಲಾಖೆಯ ಯೋಜನೆಗಳನ್ನು ಅನುಷ್ಠಾನ ಮಾಡುವುದಕ್ಕೆ, ಮೇಲ್ವಿಚಾರಣೆ ಮಾಡುವುದಕ್ಕೆ ಸಿಬ್ಬಂದಿ ಇದೆಯೇ ಎನ್ನುವುದು. ಅದಕ್ಕೆ ಅವರು ಏನು ಉತ್ತರ ಕೊಟ್ಟಿದ್ದಾರೆಂದರೆ ದಿನಾಂಕ 11–11–2013ರ ಪ್ರಕಾರ ಗ್ರಾಮೀಣ ಪ್ರದೇಶಗಳಲ್ಲಿ ಅನುಷ್ಠಾನಗೊಳ್ಳುತ್ತಿರುವ ಎಲ್ಲಾ ವಸತಿ ಯೋಜನೆಗಳ ಮೇಲ್ವಿಚಾರಣೆಯನ್ನು ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಹಣಾಧಿಕಾರಿಗಳು ಅಂದರೆ ತಾಲ್ಲೂಕುಗಳ ಸಿಇಓ ಗಳು ಮತ್ತು ಜಿಲ್ಲಾ ಮಟ್ಟದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಅಂದರೆ ಜಿಲ್ಲಾ ಸಿಇಓ ಇವರಿಗೆ ವಹಿಸಿದ್ದೇವೆ ಅವರು ನಿರ್ವಹಿಸುತ್ತಿದ್ದಾರೆ ಎಂದು ಹೇಳಿದ್ದಾರೆ. ಇದೊಂದು ಬಹಳ ಮುಖ್ಯವಾದ ಇಲಾಖೆಯಾಗಿದೆ. ಈ ಇಲಾಖೆಯಲ್ಲಿ ಸಾವಿರಾರು ಕೋಟಿ ರೂಪಾಯಿಗಳಷ್ಟು ಅನುದಾನವಿದೆ. ಈ ವರ್ಷದ ಬಜೆಟ್‌ನಲ್ಲಿ ಸುಮಾರು ನಾಲ್ಕು ಸಾವಿರದ ಏಳುನೂರು ಕೋಟಿಗೂ ಹೆಚ್ಚು ಅನುದಾನವನ್ನು ನಿಗದಿಪಡಿಸಲಾಗಿದೆ. ಈ ಮೂರು ವರ್ಷದ 12 ಸಾವಿರ ಕೋಟಿ....

**ಸಭಾಪತಿಯವರು:–** ಪ್ರಶ್ನೆ ಕೇಳಿ. ಇಷ್ಟು ಸಮಯದವರೆಗೆ ಚರ್ಚೆಯಾಯಿತು. ದಯವಿಟ್ಟು ಪ್ರಶ್ನೆ ಕೇಳಿ.

**ಶ್ರೀ ಕೆ.ವಿ. ನಾರಾಯಣಸ್ವಾಮಿ:-** ಇಂತಹ ದೊಡ್ಡ ಇಲಾಖೆಯನ್ನು ಮೇಲ್ವಿಚಾರಣೆ ಮಾಡುವುದಕ್ಕೆ ಅಗತ್ಯವಾದ ಸಿಬ್ಬಂದಿ ಇಲ್ಲದಿರುವುದೇ ಒಂದು ಕೊರತೆ.

**ಸಭಾಪತಿಯವರು:-** ಇಷ್ಟು ಗೋಳಾದ ಮೇಲೂ ಸಹಕರಿಸದಿದ್ದರೆ ಏನು ಮಾಡಲಿ? ಇಲ್ಲಿಗೆ ಪ್ರಶ್ನೋತ್ತರ ಅವಧಿಯನ್ನು ಮುಗಿಸುತ್ತೇನೆ. ಎರಡು ಗಂಟೆ ಆಯಿತು.

**ಶ್ರೀ ಕೆ.ವಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇಂಪ್ಲಿಮೆಂಟ್ ಮಾಡುವುದಕ್ಕೆ...

**ಸಭಾಪತಿಯವರು:-** ಆಯಿತು ಪ್ರಶ್ನೆ ಕೇಳಿ. ಅವರು ಉತ್ತರ ಹೇಳುತ್ತಾರೆ.

**ಶ್ರೀ ಕೆ.ವಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮುಂದಿನ ಪ್ರಶ್ನೆ ಕೇಳುತ್ತೇನೆ. ಸಿಇಓ ಮತ್ತು ಆರ್‌ಡಿಓ ಗಳಿಗೆ 18 ಮುಖ್ಯವಾದ ಇಲಾಖೆಗಳನ್ನು ಸರ್ಕಾರ ಅವರಿಗೆ ವಹಿಸಿದೆ. ಅವರು ಅದನ್ನೂ ಸಹಿತ ಮೇಲ್ವಿಚಾರಣೆ ಮಾಡಬೇಕು. ಇದರ ಜೊತೆಗೆ ಇದೊಂದು ಮುಖ್ಯವಾದ ಇಲಾಖೆಯಾಗಿದೆ. ಅಂದರೆ ವಸತಿ ಇಲಾಖೆಯು ಮೂಲಭೂತ ಸೌಕರ್ಯಗಳಿಗೆ ಸಂಬಂಧಪಟ್ಟಂತಹ ಒಂದು ಪ್ರಮುಖವಾದ ಇಲಾಖೆಯಾಗಿದೆ. ಈ ಇಲಾಖೆಯನ್ನು ಅವರು ನಿರ್ವಹಿಸಬೇಕೆಂದರೆ ಬಹಳ ತೊಂದರೆಯಾಗುತ್ತದೆ. ಅವರಿಂದ ನಾವು ಯಾವ ಕೆಲಸವನ್ನೂ ನಿರೀಕ್ಷೆ ಮಾಡುವುದಕ್ಕಾಗುವುದಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವುದೇ ನನ್ನ ಪ್ರಶ್ನೆ. ಅದಕ್ಕೆ 'ಹೌದು ಸರ್ಕಾರದ ಗಮನಕ್ಕೆ ಬಂದಿದೆ' ಎಂದು ಹೇಳಿದ್ದಾರೆ. ಮುಂದೆ 'ಇದನ್ನು ಸರಿಪಡಿಸುವುದಕ್ಕೆ ಸರ್ಕಾರ ಏನು ಕ್ರಮಗಳನ್ನು ಕೈಗೊಂಡಿದೆ' ಎಂದು ಕೇಳಿದ್ದೇನೆ. ಅದಕ್ಕೆ ಅವರು 'ಪರಿಶೀಲನೆ ಮಾಡುತ್ತಿದ್ದೇವೆ' ಎಂದು ಹೇಳಿದ್ದಾರೆ. ಇದು ಇನ್ನೂ ಪರಿಶೀಲನಾವಸ್ಥೆಯಲ್ಲಿಯೇ ಇದ್ದರೆ, ಈಗಾಗಲೇ 2016-17ರ ಬಜೆಟ್ ಪ್ರಕಾರ ಇನ್ನು ಒಂದು ತಿಂಗಳಿದೆ. ಒಂದು ತಿಂಗಳೂ ಇಲ್ಲ, 15 ದಿವಸ ಇದೆ. ಈ ವರ್ಷದ ಬಜೆಟ್ ಪ್ರಕಾರ ಇನ್ನೂ ಸುಮಾರು ಏಳು ಲಕ್ಷ ಮನೆಗಳನ್ನು ಕಟ್ಟಬೇಕಾಗಿದೆ, ಈ ಬಜೆಟ್‌ನಲ್ಲಿ ಅದಕ್ಕೆ ಬೇಕಾದ ಅನುದಾನವನ್ನು ನಿಗದಿಪಡಿಸಿ ಅಷ್ಟು ಮನೆಗಳನ್ನು ಕಟ್ಟುತ್ತೇವೆ ಎಂದು ಹೇಳಿದ್ದಾರೆ.

*261/17-3-2017/1.10/ಡಿಎಸ್-ಆರ್‌ಎಸ್*

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ವಿ. ನಾರಾಯಣಸ್ವಾಮಿ:–** ಮುಂದು. ಇದು ಸಾಧ್ಯವೇ? ಇದು ಸರ್ಕಾರದ ನಿರಾಸಕ್ತಿಯನ್ನು ತೋರಿಸುತ್ತಿದೆ. ಇವತ್ತಿನ ಪ್ರಜಾವಾಣಿ ಪತ್ರಿಕೆಯ ಮುಖಪುಟದಲ್ಲಿ "ವಸತಿ ಹೀನರಿಗೆ ಮನೆ ರಾಜ್ಯ ಸರ್ಕಾರದ ನಿರಾಸಕ್ತಿ" ಎಂಬ ಶೀರ್ಷಿಕೆ ಅಡಿಯಲ್ಲಿ ಸರ್ಕಾರದ ನಿರಾಸಕ್ತಿ ಬಗ್ಗೆ ಲೇಖನ ಬಂದಿದೆ. ಮೂಲಭೂತ ಸೌಕರ್ಯ ಒದಗಿಸುವಂತಹ ಇಲಾಖೆಯವರೆ ಆಸಕ್ತಿ ತೋರಿಸಿಲ್ಲ.

**ಸಭಾಪತಿಯವರು:–** ನಿಮಗೆ ಬೇಜಾರಾಗಿದೆ ಎಂದು ಹೇಳಿದ್ದೀರಿ. You have to ask what your question to the Government is. ನೀವು ಹೇಳಿಕೆಯನ್ನು ಕೊಡಬೇಡಿ. Ask your question.

**ಶ್ರೀ ಕೆ.ವಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ವಸತಿ ಕ್ಷೇತ್ರದಲ್ಲಿ ಮಾನ್ಯ ಸಚಿವರಿಗೆ ಬಹಳ ಅನುಭವ ಇದೆ. ಅವರಿಗೆ ಇದರ ಬಗ್ಗೆ ತುಂಬಾ ಜ್ಞಾನವೂ ಇದೆ. ಅವರಿಗೆ ಒಳ್ಳೆಯ ಇಲಾಖೆಯನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರು ಈಗ ಈ ಇಲಾಖೆಗೆ ಹೊಸದಾಗಿ ಬಂದಿದ್ದಾರೆ. ಹಿಂದಿನ ಮೂರು ವರ್ಷಗಳ ಬಗ್ಗೆ ನಾನು ಅವರಿಗೆ ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಇನ್ನು ಮುಂದೆ ಇದನ್ನು ಅನುಷ್ಠಾನ ಮಾಡುವುದಕ್ಕೆ ಅವರ ಯೋಜನೆಗಳು ಏನಿವೆ ಎಂಬುದನ್ನು ಹೇಳಿದರೆ ಸಾಕು.

**ಸಭಾಪತಿಯವರು:–** ಮಾನ್ಯ ಸಚಿವರೇ, ನೇರವಾಗಿ ಉತ್ತರ ಹೇಳಿ.

**ಶ್ರೀ ಎಂ.ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೇ, ಅವರ ಮೊದಲನೇ ಪ್ರಶ್ನೆ ಏನೆಂದರೆ, ಏನು 12169 ಕೋಟಿ ರೂಪಾಯಿಗಳ ಅನುದಾನ ಒದಗಿಸಲಾಗಿದೆ, ಅದರಲ್ಲಿ 12,035 ಕೋಟಿ ರೂಪಾಯಿಗಳ ವ್ಯತ್ಯಾಸ ಆಗಿದೆ ಎಂದು ಹೇಳಿದ್ದಾರೆ. ಇರತಕ್ಕಂಥ ಅನುದಾನ 12169 ಕೋಟಿ ರೂಪಾಯಿಗಳು. ಆದರೆ, ಇದುವರೆಗೂ 12,035 ಕೋಟಿ ರೂಪಾಯಿಗಳು ಖರ್ಚಾಗಿದೆ ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರು ಹೇಳಿರುವುದು ನಿಜವಾಗಿಯೂ ಸತ್ಯ ಇದೆ. ಗ್ರಾಮೀಣಾಭಿವೃದ್ಧಿ ಸಚಿವರಿಂದ ನಾವು ಸಹಾಯ ಪಡೆದುಕೊಂಡು ಈ ಕೆಲಸಗಳನ್ನೆಲ್ಲಾ ಮಾಡಬೇಕಾಗಿತ್ತು. ಆದರೆ ಅವರಿಗೆ ಈಗಾಗಲೇ ಕೆಲಸದ ಒತ್ತಡ ಇರುವುದರಿಂದ, ಬೇಕಾದಷ್ಟು ಕೆಲಸಗಳಿರುವುದರಿಂದ ನಾನು ಬಂದ ಮೇಲೆ ನಮ್ಮದೇ ಆದಂತಹ ಸಿಬ್ಬಂದಿಯನ್ನು ಮಾಡಿಕೊಳ್ಳುವುದಕ್ಕೆ ಇದರ ಬಗ್ಗೆ ಯೋಚನೆ ಮಾಡಿ ರೂಪುರೇಷೆಗಳನ್ನು ತಯಾರು ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ನಮ್ಮದೇ ಆದಂತಹ ಒಂದು ಶಕ್ತಿ ಸಾಮರ್ಥ್ಯ ಇರತಕ್ಕಂಥ establishment ಮಾಡಿ ಈ ಕಾರ್ಯಕ್ರಮಗಳನ್ನೆಲ್ಲಾ ಯಶಸ್ವಿಯಾಗಿ ಹಾಗೂ ಆದಷ್ಟೂ ಶೀಘ್ರವಾಗಿ ಅನುಷ್ಠಾನ ಮಾಡಿಸುವುದಕ್ಕೆ ಹೆಚ್ಚಿನ ರೀತಿಯಲ್ಲಿ ಪ್ರಯತ್ನ ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ:724 (ಉತ್ತರ ಲಗತ್ತಿಸಿದೆ)**

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) (ಮಾನ್ಯ ವಿ.ಸೋಮಣ್ಣನವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಯು.ಜಿ.ಸಿ.ಗೆ ಮಾನ್ಯತೆ ಸಿಗದಿರುವುದರಿಂದ ಎಷ್ಟು ಸಮಸ್ಯೆಯಾಗಿದೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎಂಬುದು ಮಾನ್ಯ ಸಚಿವರ ಗಮನಕ್ಕೆ ಬಂದಿದೆ. ವಿವಿಧ ಇಲಾಖೆಯಲ್ಲೇ ಪದೋನ್ನತಿ ಕೊಡುವುದಕ್ಕೂ ಕೂಡ ಕರ್ನಾಟಕ ಸರ್ಕಾರದ ಇಲಾಖೆಗಳೇ ಆ ಪದವಿಯನ್ನು ಇವತ್ತು ಪರಿಗಣಿಸುತ್ತಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಏನು ಕ್ರಮ ತೆಗೆದುಕೊಳ್ಳುತ್ತಾರೆ? ಯಾವ ಸಮಯದ ಮಿತಿಯೊಳಗೆ ಯಾವ ಕ್ರಮ ಕೈಗೊಂಡು ಇದಕ್ಕೆ ಮಾನ್ಯತೆ ದೊರಕಿಸಿಕೊಟ್ಟು ಪದವಿ ಪಡೆದಿರುವವರಿಗೆ ನ್ಯಾಯ ಒದಗಿಸಿಕೊಡುತ್ತಾರೆಂದು ಮಾನ್ಯ ಸಚಿವರು ವಿವರಣೆ ಕೊಡಬೇಕೇಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಇದು ಬಹಳ ಇಕ್ಕಟ್ಟಿನ ಪ್ರಶ್ನೆ ಇದೆ. ಹುಷಾರಾಗಿ ಹ್ಯಾಂಡಲ್ ಮಾಡಬೇಕು. ಏಕೆಂದರೆ ಬಹಳ ಜನ ಕೆಲಸದಲ್ಲಿರುವವರಿಗೆ ಈ ಪ್ರಶ್ನೆ ಬರುತ್ತದೆ. ಅದಕ್ಕಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆ.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ರಾಜ್ಯದ ಹೊರಗಡೆ ಸ್ಟಡಿ ಕೋರ್ಸ್‌ಗಳನ್ನು ಪ್ರಾರಂಭ ಮಾಡಿತು. ಫ್ರಾಂಚೈಸಿಯನ್ನು ಓಪನ್ ಮಾಡಿತು. ಹೀಗಾಗಿ ನಿಯಮಾವಳಿ ಪ್ರಕಾರ ಅದನ್ನು ಮಾಡುವುದಕ್ಕೆ ಬರುವುದಿಲ್ಲ ಎಂದು ಯು.ಜಿ.ಸಿ.ಯವರು ದಿನಾಂಕ:1–6–2015 ರಲ್ಲಿ ಮಾನ್ಯತೆಯನ್ನು ರದ್ದು ಮಾಡಿದರು. ನಾನು ಉನ್ನತ ಶಿಕ್ಷಣ ಮಂತ್ರಿಯಾದ ಮೇಲೆ ತಕ್ಷಣ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ನಮ್ಮ ವಿಶ್ವವಿದ್ಯಾನಿಲಯದ ಅಧಿನಿಯಮ 1992, ಸೆಕ್ಷನ್ 3(2) ಕ್ಕೆ ತಿದ್ದುಪಡಿ ಮಾಡಿ ನಾವು ಅದನ್ನು ಯು.ಜಿ.ಸಿ.ಗೆ ತಿಳಿಸಿದ್ದೇವೆ. ಇದನ್ನು ನಾವು ರಾಜ್ಯ ವ್ಯಾಪ್ತಿಗೆ ಮಾತ್ರ ವಿಸ್ತರಣೆ ಮಾಡಿಕೊಂಡಿದ್ದೇವೆ, ಅದಕ್ಕೆ ಮಾನ್ಯತೆ ಕೊಡಬೇಕೆಂದು ಈಗಾಗಲೇ University Grant Commission ಗೆ ಕೊಟ್ಟಿದ್ದೇವೆ. ಯು.ಜಿ.ಸಿ.ಯವರು ಭೇಟಿ ಕೊಟ್ಟು ನಮ್ಮನ್ನೆಲ್ಲಾ ವಿಚಾರಣೆ ಮಾಡಿದ್ದಾರೆ. ಕೆಲವು ಕ್ಲಾರಿಫಿಕೇಶನ್ ಕೇಳಿದ್ದರು ಅದನ್ನು ಕೂಡ ಕೊಟ್ಟು ಬಂದಿದ್ದೇವೆ. ನಾನು ಕೂಡ ಎರಡು ಸಲ ಕೇಂದ್ರದ ಮಾನವ ಸಂಪನ್ಮೂಲ ಮಂತ್ರಿಗಳನ್ನು ಭೇಟಿ ಮಾಡಿ ಕೂಡಲೇ ಮಾನ್ಯತೆ ಕೊಡಬೇಕಾಗುತ್ತದೆ, ಇಲ್ಲದಿದ್ದರೆ ತೊಂದರೆಯಾಗುತ್ತದೆ ಎಂದು ಹೇಳಿದ್ದೇನೆ. ಈಗ ಯು.ಜಿ.ಸಿ. ಇದನ್ನೆಲ್ಲಾ ಪರಿಶೀಲನೆ ಮಾಡುತ್ತಿದೆ. ನಾವು ಇನ್ನೂ ಒತ್ತಾಯ ಮಾಡುತ್ತೇವೆ. ನಮ್ಮ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯಕ್ಕೆ ತಕ್ಷಣವೇ ಮಾನ್ಯತೆ ಕೊಡಬೇಕೆಂದು ಮತ್ತೆ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತೇವೆ. ಎರಡನೆಯದು, ಮಾನ್ಯತೆ ರದ್ದಾಗಿರುವುದರಿಂದ ಕೆಲವು ಪದವೀಧರರಿಗೆ ತೊಂದರೆಯಾಗಿದೆ ಎನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಮುಕ್ತ ವಿಶ್ವವಿದ್ಯಾನಿಲಯದವರು ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಹಾಕಿದರು. ದಿನಾಂಕ:27–06–2016 ರಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ಪಡೆದಂತಹ ಪದವಿಗಳಿಗೆ ಮಾನ್ಯತೆಯನ್ನು ಕೊಡಬೇಕು ಎಂದು ಹೇಳಿದ್ದರಿಂದ ಈಗಾಗಲೇ ನಮ್ಮ ಇಲಾಖೆಯಿಂದ ಕೆ.ಪಿ.ಎಸ್.ಸಿ.ಗೆ ಮತ್ತು ಬೇರೆ ಬೇರೆ ಇಲಾಖೆಗಳಿಗೆ ಉಚ್ಚ ನ್ಯಾಯಾಲಯದ ಆದೇಶದಂತೆ ಮಾನ್ಯತೆ ಕೊಡಬೇಕೆಂದು ತಿಳಿಸಿದ್ದೇವೆ. ಅದರಲ್ಲೇನಾದರೂ ತೊಂದರೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕಂಡುಬಂದಂತಹ ಪ್ರಕರಣಗಳನ್ನು ಮಾನ್ಯ ಸದಸ್ಯರು ಗಮನಕ್ಕೆ ತಂದರೆ ಅದನ್ನು ಸರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ನಾನು ಸಲಹೆ ಕೊಡುವುದೇನೆಂದರೆ, ಪ್ರಾಥಮಿಕ ಶಾಲೆಯಿಂದ ಪ್ರೌಢ ಶಾಲೆಗಳಿಗೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಪದೋನ್ನತಿ ಹೊಂದುವ ಸಂದರ್ಭದಲ್ಲಿ ಶಿಕ್ಷಣ ಇಲಾಖೆಯಲ್ಲೇ ಈಗ ತೊಂದರೆಯಾಗುತ್ತಿದೆ. ಜನರಲ್ ಆಗಿ ಈ ಅಂಶಗಳನ್ನು ಸ್ಪಷ್ಟೀಕರಿಸಿ ಸುತ್ತೋಲೆಯನ್ನು ಹೊರಡಿಸಬೇಕು. ಎರಡನೆ ಸಂಗತಿ ಏನೆಂದರೆ, ತಿದ್ದುಪಡಿಯನ್ನು ಮಾಡಿದ್ದಾರೆ, ಯು.ಜಿ.ಸಿ.ಗೆ ಮತ್ತೆ ಕಳುಹಿಸಿದ್ದಾರೆ. ಯು.ಜಿ.ಸಿ. ಟೀಮ್ ಬಂದು ಹೋಗಿದೆ. ಇದೆಲ್ಲಾ ಸರಿ ಇದೆ. ಆದರೆ ಇದಕ್ಕೆ ಸರ್ಕಾರದ ಕಡೆಯಿಂದ ಇನ್ನಷ್ಟು ಕ್ರಮ ವಹಿಸಬೇಕು. ಸ್ವತಃ ಮಾನ್ಯ ಸಚಿವರೆ ಹೋಗಿ ಬಂದಿದ್ದಾರೆ. ವಿಶ್ವವಿದ್ಯಾನಿಲಯದ ಟೀಮ್ ಓಡಾಡುತ್ತಿದೆ. ಮಾನ್ಯ ಸಚಿವರ ಉತ್ತರವನ್ನು ಗಮನಿಸಿದಾಗ ಉನ್ನತ ಶಿಕ್ಷಣ ಇಲಾಖೆ ಈ ಕೆಲಸಕ್ಕೆ ಏನು ಓಡಾಡಬೇಕಾಗಿತ್ತು ಆ ಓಡಾಡಿರುವ ಬಗ್ಗೆ ಎಲ್ಲೂ ಉಲ್ಲೇಖ ಇಲ್ಲ. ನಾನು ಹೇಳುವ ಉದ್ದೇಶವೇನೆಂದರೆ, ಯಾರಾದರೂ ಒಬ್ಬ ಐ.ಎ.ಎಸ್. ಅಧಿಕಾರಿಗೆ ಜವಾಬ್ದಾರಿಯನ್ನು ಕೊಟ್ಟು ಯಾವ ಸಮಯದ ಮಿತಿಯೊಳಗೆ ಈ ಸಮಸ್ಯೆಗೆ ಮುಕ್ತಿ ಹಾಡುತ್ತೀರಿ ಎನ್ನುವುದು ನನ್ನ ಕಳಕಳಿಯ ವಿನಂತಿ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೆಲವೊಂದು ಇಲಾಖೆಯಲ್ಲಿ ಮಾನ್ಯತೆ ರದ್ದಾಗಿರುವುದರಿಂದ ತೊಂದರೆಯಾಗಿದೆ ಎಂದು ಹೇಳಿದ್ದಾರೆ. ಖಂಡಿತವಾಗಿಯೂ ಮತ್ತೆ ಸುತ್ತೋಲೆಯನ್ನು ಹೊರಡಿಸುತ್ತೇವೆ. ಎರಡನೆಯದು, ಯು.ಜಿ.ಸಿ. ಮಾನ್ಯತೆ ಪಡೆಯುವ ಸಲುವಾಗಿ ಮತ್ತೆ ಪ್ರಯತ್ನ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಖಂಡಿತವಾಗಿಯೂ ಮತ್ತೆ ಪ್ರಯತ್ನ ಮಾಡುತ್ತೇವೆ. ವೈಯಕ್ತಿಕವಾಗಿ ಮತ್ತೆ ನಮ್ಮ ಅಧಿಕಾರಿಗಳನ್ನು ಕಳುಹಿಸುತ್ತೇನೆ. ಸಾಧ್ಯವಾದರೆ ನಾನೇ ಮಂತ್ರಿಗಳನ್ನು, ಧನ ಸಹಾಯ ಆಯೋಗದ ಅಧ್ಯಕ್ಷರನ್ನು ಭೇಟಿ ಮಾಡಿ ಕೂಡಲೇ ಮಾನ್ಯತೆ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ:686 (ಉತ್ತರ ಲಗತ್ತಿಸಿದೆ)**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಸರ್ಕಾರದ ಅಸಂವಿಧಾನಿಕ ಸುತ್ತೋಲೆಗಳು ಮತ್ತು ಆದೇಶಗಳಿಂದ ಕಾನೂನು ತೊಡಕುಗಳುಂಟಾಗಿ ರಾಜೀವ್ ಗಾಂಧಿ ವಸತಿ ನಿಗಮದ ವಸತಿ ಯೋಜನೆಗಳು ನೆನೆಗುದಿಗೆ ಬೀಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದೆ, ಇಲ್ಲ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ನಿನ್ನೆ ಕೂಡ ವಸತಿ ಇಲಾಖೆಯ ಬಗ್ಗೆ ಬಹಳಷ್ಟು ಚರ್ಚೆಯಾಗಿದೆ. ನಾನು ಇವತ್ತು ಹೆಚ್ಚು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ದಿನಾಂಕ:23-11-2016 ರಂದು ಜಾಗೃತ ಸಮಿತಿಯಲ್ಲಿ ಆದೇಶವನ್ನು ಮಾಡಿದ್ದಾರೆ. ಸಾಮಾಜಿಕ ಮತ್ತು ಆರ್ಥಿಕ ಜನಗಣತಿಯ 2011 ರ ಸಮೀಕ್ಷೆಯಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಸತಿ ರಹಿತರ ಆಧಾರದ ಮೇಲೆ ಮನೆಗಳ ಗುರಿಯನ್ನು ಗ್ರಾಮ ಪಂಚಾಯಿತಿವಾರು ನಿಗದಿಪಡಿಸಿ ಫಲಾನುಭವಿಗಳನ್ನು ಆಯ್ಕೆ ಮಾಡಬೇಕೆಂದು ಆದೇಶ ಮಾಡಿದ್ದಾರೆ. ಆದರೆ ಈ ಆದೇಶ ಪಾಲನೆಯಾಗುತ್ತಿಲ್ಲ. ಚಿಕ್ಕೋಡಿ ತಾಲ್ಲೂಕು ಪಂಚಾಯಿತಿ ಮತ್ತು ರಾಮದುರ್ಗ ತಾಲ್ಲೂಕು ಪಂಚಾಯಿತಿಯಲ್ಲಿ ಸಭೆ ಮಾಡಿರತಕ್ಕಂಥ ತಾಲ್ಲೂಕು ಪಂಚಾಯಿತಿ ಅಧಿಕಾರಿಗಳು 2011 ರ ಜನಗಣತಿಯ ಆಧಾರದ ಮೇಲೆ ಮಾಡಬೇಕೆಂದು ಆದೇಶವನ್ನು ಕೊಟ್ಟಿದ್ದಾರೆ. ಅಂದರೆ, ಯಾರು ವಸತಿ ಹೀನರಿದ್ದಾರೆ ಅವರ ಸರ್ವೆ 2011 ರಲ್ಲಿ ಆಗಿದೆ. ಅದನ್ನು ಆಧಾರವಾಗಿಟ್ಟುಕೊಂಡು ಫಲಾನುಭವಿಗಳ ಆಯ್ಕೆ ಆಗಬೇಕು ಎಂಬುದು ಆದೇಶದ ಸೂಚನೆ. ಆದರೆ ಇವತ್ತು ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕು, ಚಿಕ್ಕೋಡಿ ತಾಲ್ಲೂಕಿನಲ್ಲಿ ವಸತಿ ಹೀನರನ್ನು ಆಯ್ಕೆ ಮಾಡತಕ್ಕಂಥ ಜಾಗೃತ ಸಮಿತಿಯಲ್ಲಿ ತಮಗೆ ಬೇಕಾಗಿರತಕ್ಕಂಥ ಪಂಚಾಯಿತಿಗಳಲ್ಲಿ ಆಯ್ಕೆಗಳನ್ನು ಮಾಡಿ ಕೆಲವು ಪಂಚಾಯಿತಿಗಳಲ್ಲಿ ವಸತಿ ಹೀನರ 2011 ರ ಪಟ್ಟಿ ಇದ್ದರೂ ಕೂಡ ಆ ಗ್ರಾಮ ಪಂಚಾಯಿತಿಗಳಿಗೆ ನ್ಯಾಯ ಕೊಡದಿರತಕ್ಕಂಥ ವಿಷಯ ನನ್ನ ಗಮನಕ್ಕೆ ಬಂದಿದೆ. ದಯವಿಟ್ಟು ಮಾನ್ಯ ಸಚಿವರು ಸಂಬಂಧಪಟ್ಟಂಥ ಅಧಿಕಾರಿಗಳಿಗೆ ಸೂಚನೆ ಕೊಡಬೇಕು. ಈ ತಪ್ಪು ಆಗಬಾರದು. ಏಕೆಂದರೆ, ಸರ್ಕಾರ 2011 ರ ಜಾತಿ ಮತ್ತು ವಸತಿ ಹೀನರ ಸರ್ವೆ ಪ್ರಕಾರ ವಸತಿರಹಿತರ ಪಟ್ಟಿ ಮಾಡಬೇಕೆಂದು ಆದೇಶವನ್ನು ಪಾಲನೆ ಮಾಡತಕ್ಕಂಥ ಸಂದರ್ಭದಲ್ಲಿ ಇವತ್ತು ಬೆಳಗಾವಿ ಜಿಲ್ಲೆಯ ಎರಡು ತಾಲ್ಲೂಕುಗಳಲ್ಲಿ ಆಗಿರತಕ್ಕಂಥ ನಿಜವಾದ ಅರ್ಹ ಫಲಾನುಭವಿಗಳ ಆಯ್ಕೆಯಾಗಬೇಕೆನ್ನುವುದು ನನ್ನ ಬೇಡಿಕೆ. ಆ ವಿಚಾರದಲ್ಲಿ ಸಂಬಂಧಪಟ್ಟಂಥ ಅಧಿಕಾರಿಗಳಿಗೆ ಮಾನ್ಯ ಸಚಿವರು ಆದೇಶ ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತಿದ್ದೇನೆ. 2016–2017ನೇ ಸಾಲಿನಲ್ಲಿ ಶ್ರೀ ದೇವರಾಜ ಅರಸು ವಿಶೇಷ ವಸತಿ ಯೋಜನೆಯನ್ನು ಅತ್ಯಂತ ಯಶಸ್ವಿಯಾಗಿ ಅನುಷ್ಠಾನ ಮಾಡಿದ್ದಾರೆ. ನಾನು ಮಾನ್ಯ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ವರ್ಷವೂ ಕೂಡ ವಿಶೇಷ ವಸತಿ ಯೋಜನೆಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತೇನೆ.

**ಶ್ರೀ ಎಂ.ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ಎರಡು ತಾಲ್ಲೂಕುಗಳನ್ನು ಹೇಳಿದ್ದಾರೆ. ಅದರ ಬಗ್ಗೆ ಮಾಹಿತಿ ತರಿಸಿಕೊಂಡು ಅವರಿಗೆ ಒದಗಿಸಿಕೊಡುತ್ತೇನೆ. ದೇವರಾಜ ಅರಸು ವಿಶೇಷ ವಸತಿ ಯೋಜನೆಯಲ್ಲಿ 38,000 ವಸತಿಗಳು, ಅದು ಮೂರು ವರ್ಷದ್ದು, ಹತ್ತು ಸಾವಿರ ಪ್ಲಸ್ ಇಪ್ಪತ್ತು ಸಾವಿರ. ಅದರಲ್ಲಿ ಬೆಳಗಾವಿ ಜಿಲ್ಲೆಗೆ ಸುಮಾರು ಹತ್ತು ಸಾವಿರ ಕೊಟ್ಟಿದ್ದೇವೆ. ಅವರು ಸಂತೋಷಪಟ್ಟಿದ್ದಾರೆ. ಇನ್ನು ಹೆಚ್ಚಿನ ರೀತಿಯಲ್ಲಿ ಕೊಡಿ ಎಂದು ಕೇಳಿದ್ದಾರೆ, ಮಾಡೋಣ.

(262) 17.03.2017/ 1.20/ ಕೆಹೆಚ್/ವಿಕೆ

**ಸಭಾಪತಿಯವರು:–** ಶ್ರೀ ಅಪ್ಪಾಜಿ ಗೌಡರ ಪ್ರಶ್ನೆಗೆ ಉತ್ತರಿಸಬೇಕಾದ ಸಚಿವರು ಸದನದಲ್ಲಿ ಉಪಸ್ಥಿತರಿಲ್ಲದ ಕಾರಣ ಆ ಪ್ರಶ್ನೆಯನ್ನು ಮುಂದಿನ ವಾರಕ್ಕೆ ತೆಗೆದುಕೊಳ್ಳಲಾಗುತ್ತದೆ. ಇಲ್ಲಿಗೆ ಪ್ರಶ್ನೋತ್ತರ ಅವಧಿ ಮುಗಿಯಿತು.

## (ಆ) <u>ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು</u>

**ಡಾ||ಜಿ.ಪರಮೇಶ್ವರ್ (ಸಭಾನಾಯಕರು):–** ಮಾನ್ಯಸಭಾಪತಿಯವರೇ, ದಿನಾಂಕ: 17ನೇ ಮಾರ್ಚ್ 2017 ಸಮೂಹ–Vರ ಲಿಖಿತ ಮೂಲಕ ಉತ್ತರಿಸುವ ಒಟ್ಟು 135 ಪ್ರಶ್ನೆಗಳ ಪೈಕಿ 86 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಲಿಖಿತ ಮೂಲಕ ನೀಡಲಾದ ಉತ್ತರಗಳ ಪಟ್ಟಿಯನ್ನು ಲಗತ್ತಿಸಲಾಗಿದೆ)**

**3.ಸಭೆಯ ಮುಂದಿಡಲಾದ ಕಾಗದ ಪತ್ರಗಳು**

(ಮೂರನೇ ಮತ್ತು ನಾಲ್ಕನೇ ಪಟ್ಟಿಯನ್ನು ಲಗತ್ತಿಸಲಾಗಿದೆ)

**4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

**(ಅ) ಅನುದಾನಕ್ಕೊಳಪಡಿಸಿದ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಗ್ರೂಪ್ "ಡಿ" ನೌಕರರನ್ನು ಅನುದಾನಕ್ಕೊಳಪಡಿಸಬೇಕೆನ್ನುವ ಕುರಿತು.**

***

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಇತ್ತೀಚೆಗೆ ಅನುದಾನಕ್ಕೊಳಪಟ್ಟ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳ ಸುಮಾರು 165 ಮಂದಿ "ಡಿ" ಗ್ರೂಪ್ ನೌಕರರು ನೆನ್ನೆಯಿಂದ (ದಿನಾಂಕ:16–03–2017) ತಮ್ಮಗಳ ನೇಮಕಾತಿಯನ್ನು ಅನುದಾನಕ್ಕೊಳಪಡಿಸುವಂತೆ ಆಗ್ರಹಿಸಿ ಧರಣಿ ನಿರತರಾಗಿದ್ದಾರೆ.

ಸರ್ಕಾರ ದಿನಾಂಕ:01–06–1987 ರಿಂದ 1994–95ರ ಸಾಲಿನ ಅವಧಿಯಲ್ಲಿ ಪ್ರಾರಂಭಿಸಲ್ಪಟ್ಟ ಅನುದಾನಕ್ಕೊಳಪಟ್ಟಿರುವ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಶಿಕ್ಷಣ ನಿಯಮಗಳು 2016ರ ಸಿಬ್ಬಂದಿ ಮಾದರಿ ಅನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ:136 ಟಿಪಿಯು 1993 ರನ್ವಯ ಗ್ರೂಪ್ "ಡಿ" ಹುದ್ದೆಗಳನ್ನು ಕಾಲೇಜು ಅಥವಾ ಪ್ರೌಢಶಾಲೆಗೆ "ಒಂದು ಹುದ್ದೆ" ತುಂಬಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈಗಾಗಲೇ ಈ ಅವಧಿಯಲ್ಲಿನ 600ಕ್ಕೂ ಹೆಚ್ಚು ಹುದ್ದೆಗಳನ್ನು ಅನುದಾನಕ್ಕೆ ಒಳಪಡಿಸಲಾಗಿದೆ. ಆದರೆ ಇದೇ ಅವಧಿಗೆ ಸೇರಿದ ನಾನಾ ಕಾರಣಗಳಿಂದಾಗಿ ಸ್ವಲ್ಪ ತಡವಾಗಿ ಬಂದ ಪ್ರಸ್ತಾವನೆಗಳು ಜಿಲ್ಲಾಧಿಕಾರಿಗಳು ಹಾಗೂ ತ್ರಿಸದಸ್ಯ ಸಮಿತಿಯಿಂದ ಶಿಫಾರಸ್ಸುಗೊಂಡು ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರಿಂದ ಶಿಫಾರಸ್ಸುಗೊಂಡು ಸರ್ಕಾರದ ಮುಂದೆ ಕಳೆದ ಒಂದೂವರೆ ವರ್ಷಗಳಿಂದ ಅನುಮೋದನೆಯ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಿರೀಕ್ಷೆಯಲ್ಲಿವೆ. ಈ ರೀತಿ ಸುಮಾರು 165 ಪ್ರಕರಣಗಳಿದ್ದು, ಕಳೆದ 15–20 ವರ್ಷಗಳಿಂದಲೂ ಸೇವೆ ಸಲ್ಲಿಸಿಕೊಂಡು ಬರುತ್ತಿದ್ದಾರೆ.

ಈ ಹಂತದಲ್ಲಿ ಗ್ರೂಪ್ "ಡಿ" ಹುದ್ದೆಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಇವರು ನಿಯಮಗಳಿಗೆ ತಿದ್ದುಪಡಿ ತಂದು ಹೊಸದಾಗಿ ಇವರನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳುವಂತಹ ಆಲೋಚನೆಗೆ ಮುಂದಾಗಿದ್ದಾರೆ. ಇದು ಅತ್ಯಂತ ದುರಾದೃಷ್ಟಕರ ವಿಚಾರವಾಗಿದ್ದು, ಸದರಿ ಸಿಬ್ಬಂದಿ ತೀವ್ರ ಆತಂಕಕ್ಕೆ ಒಳಗಾಗಿದ್ದಾರೆ.

ಈಗಾಗಲೇ 600ಕ್ಕೂ ಹೆಚ್ಚು ಜನರು ಅನುಮೋದನೆಗೊಂಡು ಅನುದಾನಕ್ಕೊಳಪಟ್ಟಿದ್ದು, ಇದೇ ಅವಧಿಯಲ್ಲಿ ಕೇವಲ 165 ಜನರ ಪ್ರಸ್ತಾವನೆ ಸರ್ಕಾರದ ಮುಂದೆ ಇದ್ದು, ಕೂಡಲೇ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು 600 ಜನರಲ್ಲಿ 165 ಜನರನ್ನು ಅನುದಾನಕ್ಕೊಳಪಡಿಸುವುದರ ಮೂಲಕ ಬೀದಿಗೆ ಬಿದ್ದಿರುವ ಇವರು ಸಮಾಧಾನವಾಗಿ ಜೀವನವನ್ನು ನಡೆಸಲು ಅವಕಾಶ ಮಾಡಿಕೊಡಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):–** ರಾಜ್ಯದ ಅನುದಾನಿತ ಶಾಲಾ ಕಾಲೇಜುಗಳಲ್ಲಿ ದಿನಾಂಕ: 02–02–2000ದ ಪೂರ್ವದಲ್ಲಿ ನೇಮಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ "ಡಿ" ಮತ್ತು "ಸಿ" ನೌಕರರನ್ನು ಅನುದಾನಕ್ಕೆ ಒಳಪಡಿಸಲು ಒತ್ತಾಯಿಸಿ ದಿನಾಂಕ:16–03–2017ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹಮ್ಮಿಕೊಂಡಿರುವ ಉಪವಾಸ ಸತ್ಯಾಗ್ರಹದ ಕುರಿತು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನಕ್ಕೆ ತರಲು ಬಯಸುತ್ತೇನೆ.

ಸರ್ಕಾರ ಈಗಾಗಲೇ 01–06–1992 ರಿಂದ 02–02–2000ದ ಅವಧಿಯಲ್ಲಿ ನೇಮಕಗೊಂಡು ಕರ್ತವ್ಯ ನಿರ್ವಹಿಸುತ್ತಿದ್ದ "ಡಿ" ದರ್ಜೆಯ 918 ಬೋಧಕೇತರರನ್ನು ಅನುದಾನಕ್ಕೆ ಒಳಪಡಿಸಿ ಆದೇಶ ಹೊರಡಿಸಿದ್ದುಂಟು. ಆದರೆ ಕೆಲವೊಂದು ತಾಂತ್ರಿಕ ಕಾರಣಗಳಿಂದ ಇನ್ನೂ ನೂರಾರು ಬೋಧಕೇತರರ "ಡಿ" ದರ್ಜೆಯ ಸಿಬ್ಬಂದಿಯವರು ಅನುದಾನಕ್ಕೆ ಒಳಪಡದೇ ಹಾಗೇ ಉಳಿದಿರುವರು. ಇಂತಹ ಒಂದು ಸಂದರ್ಭದಲ್ಲಿ ಸರ್ಕಾರ ಇನ್ನುಳಿದ ಬೋಧಕೇತರರ "ಡಿ" ದರ್ಜೆಯ ನೌಕರರನ್ನು ಅನುದಾನಕ್ಕೆ ಒಳಪಡಿಸದೇ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಮುಂದಾಗಿರುವುದು ತುಂಬಾ ನೋವಿನ ಸಂಗತಿಯಾಗಿದೆ.

ಆದ್ದರಿಂದ ಈಗಾಗಲೇ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ನಿಯಮವನ್ನು ಇವರಿಗೆ ಅನ್ವಯಿಸದೇ ದಿನಾಂಕ: 02–02–2000ದ ಪೂರ್ವದಲ್ಲಿ ನೇಮಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಇನ್ನುಳಿದ ಸಿಬ್ಬಂದಿಯನ್ನು ಕೂಡಾ ಅನುದಾನಕ್ಕೆ ಒಳಪಡಿಸಿ ನ್ಯಾಯ ಒದಗಿಸಲು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಅಲ್ಪ ಸಂಖ್ಯಾತರ ಕಲ್ಯಾಣ ವಕ್ಫ್ ಸಚಿವರು):–** ಮಾನ್ಯ ಸಭಾಪತಿಯವರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರಗಳನ್ನು ತರಿಸಿ ಕೊಡುತ್ತೇನೆ.

**(ಆ) ಮಡಿಕೇರಿ ನಗರದಲ್ಲಿ ಫಲಪುಷ್ಪ ಪ್ರದರ್ಶನ ನಡೆಸದೇ ಅದರ ಅನುದಾನ ದುರ್ಬಳಕೆಯಾಗಿರುವ ಬಗ್ಗೆ.**

~~~~~

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆ, ಮಡಿಕೇರಿ ನಗರದಲ್ಲಿರುವ ರಾಜಾಸೀಟ್ ಉದ್ಯಾನವನದಲ್ಲಿ ಕಳೆದ ಎರಡು ವರ್ಷಗಳಲ್ಲಿ ನಡೆಯಬೇಕಿದ್ದ ಫಲಪುಷ್ಪ ಪ್ರದರ್ಶನವನ್ನು ನಡೆಸದೆ, ಅದಕ್ಕೆಂದು ಬಂದ ಅನುದಾನವನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ. ಮಡಿಕೇರಿಯ ಪ್ರವಾಸಿ ತಾಣ ರಾಜಾಸೀಟ್‌ನಲ್ಲಿ ಕಳೆದ ಕೆಲ ವರ್ಷಗಳಿಂದ ತೋಟಗಾರಿಕಾ ಇಲಾಖೆ ವತಿಯಿಂದ ಫಲಪುಷ್ಪ ಪ್ರದರ್ಶನವನ್ನು ಆಯೋಜಿಸಿಕೊಂಡು ಬರಲಾಗುತ್ತಿತ್ತು. ಆದರೆ ಕಳೆದೆರಡೂ ವರ್ಷಗಳಲ್ಲಿ ಈ ಕಾರ್ಯಕ್ರಮಗಳನ್ನು ಇಲಾಖೆಯು ನಡೆಸಿರಲಿಲ್ಲ. ಆದರೆ ಅಂದಿನ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ಈ ಕಾರ್ಯಕ್ರಮವನ್ನು ಮಾಡಿರುವುದಾಗಿ ನಕಲಿ ಬಿಲ್ಲುಗಳನ್ನು ಸಲ್ಲಿಸಿ ಸುಮಾರು ರೂ.8.00 ಲಕ್ಷ ರೂಪಾಯಿಗಳನ್ನು ದುರ್ಬಳಕೆ ಮಾಡಿಕೊಂಡಿರುತ್ತಾರೆ. ಈ ವಿಷಯದ ಕುರಿತು ಪತ್ರಿಕೆಯಲ್ಲಿ ವರದಿಯು ಸಹ ಆಗಿರುತ್ತದೆ. ಈ ವಿಷಯವನ್ನು ಸರ್ಕಾರ ಗಂಭೀರವಾಗಿ ಪರಿಶೀಲಿಸಿ ಹಣ ದುರ್ಬಳಕೆ ಮಾಡಿಕೊಂಡಿರುವ ಅಧಿಕಾರಿಯ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಡಾ॥ ಜಿ.ಪರಮೇಶ್ವರ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರಿಂದ ಉತ್ತರಗಳನ್ನು ಒದಗಿಸಿಕೊಡಲಾಗುವುದು.

**(ಇ) ಮಲ ಹೊರುವ ಪದ್ಧತಿಯನ್ನು ಸಂಪೂರ್ಣವಾಗಿ ತಡೆಗಟ್ಟಬೇಕೆಂಬ ಕುರಿತು.**

~~~~~~

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, 'ಮಲ ಹೊರುವ ಪದ್ಧತಿ: ಕರ್ನಾಟಕ 2ನೆಯ ಸ್ಥಾನದಲ್ಲಿ'? 'ದೇಶದಲ್ಲಿ 04 ವರ್ಷದ ಹಿಂದೆಯೇ ಮಲ ಹೊರುವ ಪದ್ಧತಿ ನಿಷೇಧವಾಗಿದ್ದರೂ ಕರ್ನಾಟಕ ಸೇರಿ 13 ರಾಜ್ಯದಲ್ಲಿ ಇನ್ನೂ ಜೀವಂತವಾಗಿದೆ. ಉತ್ತರ ಪ್ರದೇಶದಲ್ಲಿ 10301, ಕರ್ನಾಟಕದಲ್ಲಿ 737 ಮಂದಿ ಕಾರ್ಮಿಕರು ಇಂತಹ ಕೆಲಸವನ್ನು ಮಾಡುತ್ತಿದ್ದಾರೆ' ಎಂದು ಇಂದಿನ ಕನ್ನಡಪ್ರಭ ದಿನಪತ್ರಿಕೆ ಸೇರಿದಂತೆ ಎಲ್ಲ ದಿನಪತ್ರಿಕೆಗಳಲ್ಲಿ ವರದಿಯಾಗಿದೆ. ದೇಶದಲ್ಲೇ ಈ ಪದ್ಧತಿ ಇರುವ ರಾಜ್ಯದಲ್ಲಿ ಕರ್ನಾಟಕವು 2ನೇ ಸ್ಥಾನ ಪಡೆದಿರುವುದು ಅತ್ಯಂತ ಕೆಟ್ಟ ಸಂಗತಿ. ಮಲ ಹೊರುವ ಪದ್ಧತಿಯನ್ನು ಬಹಳ ವರ್ಷಗಳ ಹಿಂದೆಯೇ ನಿಷೇಧಿಸಲಾಗಿದ್ದರೂ ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಹಾಗೂ ಯಶಸ್ವಿಗೊಳಿಸುವಲ್ಲಿ ರಾಜ್ಯ ಸರ್ಕಾರ ಎಡವಿರುವುದು ಕರ್ನಾಟಕ 2ನೇ ಸ್ಥಾನದಲ್ಲಿರುವುದಕ್ಕೆ ಸಾಕ್ಷಿಯಾಗಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಈ ಕುರಿತು ರಾಜ್ಯ ಸರ್ಕಾರ ಮಲ ಹೊರುವ ಪದ್ಧತಿಯನ್ನು ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಹೊಸ ಹೊಸ ಯೋಜನೆಗಳನ್ನು ರೂಪಿಸಿಕೊಂಡು, ಅದಕ್ಕೆ ಬೇಕಾದಂತಹ ಅತ್ಯಾಧುನಿಕ ಯಂತ್ರಗಳನ್ನು ಖರೀದಿಸಲು ಸರ್ಕಾರ ಮುಂದಾಗಿ, ಈ ಪದ್ಧತಿಯನ್ನು ಸಂಪೂರ್ಣವಾಗಿ ತಡೆಗಟ್ಟಬೇಕು ಹಾಗೂ ಈ ರೀತಿಯ ಪ್ರಕರಣಗಳು ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಹಾಗೂ ಇದಕ್ಕೆ ಪ್ರಚೋದನೆ ನೀಡುವಂತವರ ಮೇಲೆ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಡಾ॥ ಜಿ.ಪರಮೇಶ್ವರ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಮಾಜ ಕಲ್ಯಾಣ ಸಚಿವರಿಂದ ಉತ್ತರಗಳನ್ನು ಒದಗಿಸಿಕೊಡಲಾಗುವುದು.

**(ಈ) ವಿಜಯಪುರ ಜಿಲ್ಲೆಯಲ್ಲಿ ಅಕಾಲಿಕ ಮಳೆಯಿಂದಾಗಿ ದ್ರಾಕ್ಷಿ ಬೆಳೆ ಹಾನಿಯಾಗಿರುವ ಕುರಿತು.**

~~~~~

**ಶ್ರೀ ಅರುಣ ಶಹಾಪೂರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, 'ಅಕಾಲಿಕ ಮಳೆಗೆ 400 ಕೋಟಿ ರೂಪಾಯಿ ಮೌಲ್ಯದ ದ್ರಾಕ್ಷಿ ಬೆಳೆ ಹಾನಿ' ಎಂಬ ವರದಿಯು ಇಂದಿನ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿಯಾಗಿದ್ದು, ವಿಜಯಪುರ ಜಿಲ್ಲೆಯಲ್ಲಿ ಒಂದೇ ದಿನ ಸುರಿದ ಅಕಾಲಿಕ ಮಳೆಯಿಂದಾಗಿ 400 ಕೋಟಿ ರೂಪಾಯಿಗೂ ಮಿಗಿಲಾದ ದ್ರಾಕ್ಷಿ ಬೆಳೆ ನಷ್ಟವಾಗಿದೆ. ಅಕಾಲಿಕ ಮಳೆಯಿಂದಾಗಿ ಸಿಂಧಗಿ ಹಾಗೂ ಇಂಡಿ ತಾಲ್ಲೂಕಿನ ನೂರಾರು ಎಕರೆ ದ್ರಾಕ್ಷಿ ತೋಟದಲ್ಲಿ ನೀರು ನಿಂತಿದೆ. ಸುಮಾರು 500 ಹೆಕ್ಟೇರ್ ಪ್ರದೇಶದಲ್ಲಿ ಶೇಕಡಾ 50 ರಷ್ಟು ದ್ರಾಕ್ಷಿ ಹಾನಿಗೀಡಾಗಿದ್ದು, ಗಾಳಿಗೆ ನೆಲಕ್ಕುದುರಿವೆ. ಇಂಡಿ ತಾಲ್ಲೂಕಿನಲ್ಲೂ ಕೂಡ 1200 ಹೆಕ್ಟೇರ್ ಪ್ರದೇಶದಲ್ಲಿ ಶೇಕಡಾ 50 ರಷ್ಟು ಬೆಳೆ ಹಾನಿಯಾಗಿದೆ ಎಂದು ವರದಿಯಾಗಿದೆ.

ಈ ಕುರಿತು ಜಿಲ್ಲಾಡಳಿತ, ಮಳೆ ಬಿದ್ದ ಪ್ರದೇಶದಲ್ಲಿ ದ್ರಾಕ್ಷಿಯನ್ನು ಮಾತ್ರ ಹಾನಿಗೆ ಪರಿಗಣಿಸುತ್ತದೆ. ಆದರೆ, ಕೆಟ್ಟ ದ್ರಾಕ್ಷಿಯನ್ನೂ ಸಹ ಸರ್ಕಾರ ಹಾನಿಗೆ ಪರಿಗಣಿಸಬೇಕು, ರೈತರ ಪರಿಸ್ಥಿತಿ ಅರಿಯಬೇಕು ಎಂದು ದ್ರಾಕ್ಷಿ ಬೆಳೆಗಾರರ ಸಂಘದ ಅಧ್ಯಕ್ಷ ಅಭಯಕುಮಾರ ನಾಂದ್ರೇಕರ್ ಸರ್ಕಾರವನ್ನು ಆಗ್ರಹಿಸಿದ್ದಾರೆ. ರಾಜ್ಯ ಸರ್ಕಾರ ಕೂಡಲೇ ವಾಸ್ತವ ವರದಿಯನ್ನು ಕಳುಹಿಸಲು ಈ ಭಾಗದ ಎಲ್ಲ ಜಮೀನುಗಳಿಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳನ್ನು ಕಳುಹಿಸಿ ಹಾನಿಗೀಡಾದ ಬೆಳೆಯ ಪ್ರಮಾಣವನ್ನು ಅರಿತು ಕೂಡಲೇ ಬೆಳೆ ಹಾನಿಯಿಂದಾಗಿ ಸಂಕಷ್ಟಕ್ಕೀಡಾಗಿರುವ ರೈತರ ನೆರವಿಗೆ ಧಾವಿಸಿ ಅಗತ್ಯ ಪರಿಹಾರವನ್ನು ಸರ್ಕಾರ ಘೋಷಣೆ ಮಾಡಲು ಮುಂದಾಗಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ॥ ಜಿ.ಪರಮೇಶ್ವರ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಈ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರಿಂದ ನಂತರ ಉತ್ತರಗಳನ್ನು ಒದಗಿಸಿಕೊಡಲಾಗುವುದು.

263/17-03-2017/1-30/bkp-vk

**(ಉ) ಕೆ.ಆರ್.ಪೇಟೆ ತಾಲ್ಲೂಕಿನ ಹೇಮಗಿರಿ ಬಳಿಯ ನಾಟನಹಳ್ಳಿ ಗ್ರಾಮದ ಚಲುವೇಗೌಡ ಎಂಬ ರೈತನು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ.**

~~~~~

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರೈತನು ದೇಶದ ಬೆನ್ನೆಲುಬು ಎಂದು ಮಹಾತ್ಮ ಗಾಂಧಿಯವರು ಈ ಹಿಂದೆ ಹೇಳಿದ್ದಾರೆ. ಅಂತಹ ರೈತನು ಆತ್ಮಹತ್ಯೆಯ ದಾರಿ ಹಿಡಿದಿರುವುದು ಸಮಾಜಕ್ಕೆ ಕಳವಳಕಾರಿಯಾದ ಅಂಶವಾಗಿರುತ್ತದೆ. ಆಳುವ ಸರ್ಕಾರಗಳು ಇಂಥ ರೈತನ ಅಭಿವೃದ್ಧಿಗೆ ಒತ್ತು ನೀಡುವುದು ಮೊದಲನೇ ಅಂಶವಾಗಿರುತ್ತದೆ.

ದಿನಪತ್ರಿಕೆಗಳಲ್ಲಿ ವರದಿಯಾಗಿರುವಂತೆ ಕೆ.ಆರ್.ಪೇಟೆ ತಾಲ್ಲೂಕಿನ ಹೇಮಗಿರಿ ಬಳಿಯ ನಾಟನಹಳ್ಳಿ ಗ್ರಾಮದ ಚೆಲುವೇಗೌಡ ಎಂಬ ರೈತನು ಸಾಲ ಮನ್ನಾ ಘೋಷಣೆಯ ನಿರೀಕ್ಷೆಯಲ್ಲಿದ್ದು ಸರ್ಕಾರವು ಸಾಲ ಮನ್ನಾ ಘೋಷಣೆ ಮಾಡದೇ ಇರುವುದರಿಂದ ಭ್ರಮನಿರಸನಗೊಂಡು ಬೆಂಕಿಗೆ ಹಾರಿ ಅತ್ಮಹತ್ಯೆ ಮಾಡಿಕೊಂಡಿರುತ್ತಾನೆ. ಇವರು ಮೂರುವರೆ ಎಕರೆ ಜಮೀನು ಹೊಂದಿದ್ದು, ಪಿ.ಎಲ್.ಡಿ. ಬ್ಯಾಂಕ್‌ನಲ್ಲಿ 1 ಲಕ್ಷ ರೂ ಮತ್ತು ಲಕ್ಷಾಂತರ ರೂಪಾಯಿಗಳ ಕೈಸಾಲ ಮಾಡಿಕೊಂಡಿರುತ್ತಾರೆ.

ಬರಗಾಲದ ಬವಣೆಯಿಂದ ಇನ್ನಷ್ಟು ರೈತರು ಆತ್ಮಹತ್ಯೆ ಮಾರ್ಗ ತುಳಿಯದಂತೆ ಸರ್ಕಾರವು ಈ ರೈತನ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡುವುದರೊಂದಿಗೆ ರಾಜ್ಯದ ಇತರೆ ರೈತರು ಆತ್ಮಹತ್ಯೆ ಹಾದಿ ಹಿಡಿಯದಂತೆ ರೈತರ ಸಾಲವನ್ನು ಮನ್ನಾ ಮಾಡಲು ಈ ಮೂಲಕ ಒತ್ತಾಯಿಸುತ್ತೇನೆ.

**ಡಾ॥ ಜಿ.ಪರಮೇಶ್ವರ್(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಈ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರಗಳನ್ನು ಒದಗಿಸಿಕೊಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 5. ಪ್ರಕಟಣೆಗಳು

**ಸಭಾಪತಿಯವರು:–** ಒಂದೆರಡು ಸಣ್ಣ ಪ್ರಕಟಣೆಗಳಿವೆ. **ಮೊದಲನೆಯದಾಗಿ,** Karnataka Budget Analysis, ಕರ್ನಾಟಕದ ಬಜೆಟ್ ಅನ್ನು ಮುಖ್ಯಮಂತ್ರಿಗಳು ಮೊನ್ನೆ ಮಂಡಿಸಿದ್ದಾರೆ. ಪುಸ್ತಕ ಸ್ವಲ್ಪ ದೊಡ್ಡದಿದ್ದು, ಅದನ್ನು ಓದಲಿಕ್ಕೆ ನಮಗೆಲ್ಲರಿಗೂ ಸಮಯ ಬೇಕು. PRS Legislative Research ಎನ್ನುವಂತಹ ಒಂದು
~~~~~

ಸಂಸ್ಥೆ, ದೇಶದ ಎಲ್ಲಾ ರಾಜ್ಯಗಳಲ್ಲಿ ಈ ಬಜೆಟ್‌ನ ಪರಿಷ್ಕರಣೆಯ ಬಗ್ಗೆ ಅವರೇನೂ comments ಮಾಡುವುದಿಲ್ಲ. ಅವರು 5–8 ಪುಟಗಳಲ್ಲಿ ಬಜೆಟ್ analysis ಮಾಡಿ ಕೊಡುತ್ತಿದ್ದಾರೆ. ಬೇರೆ ಬೇರೆ ರಾಜ್ಯಗಳದ್ದು ಅಂದರೆ ಸುಮಾರು 9 ರಾಜ್ಯಗಳದ್ದು ಕೊಟ್ಟಿದ್ದಾರೆ. ಕರ್ನಾಟಕದ್ದನ್ನು ಸಹ ಅವರು ತಯಾರು ಮಾಡಿ ಕೊಟ್ಟಿದ್ದಾರೆ. ಇದರ ಪ್ರತಿಗಳನ್ನು ನಾನು ಎಲ್ಲಾ ಸದಸ್ಯರುಗಳಿಗೂ ಕಳುಹಿಸಿ ಕೊಡುತ್ತಿದ್ದೇನೆ. ಇದು ಬಜೆಟ್ ಮೇಲೆ ಮಾತನಾಡುವುದಕ್ಕೆ, ಬಜೆಟ್ ಮೇಲೆ ಅಧ್ಯಯನ ಮಾಡಲಿಕ್ಕೆ, ಅದರ ಬಗ್ಗೆ ನಮ್ಮ ಟೀಕೆ–ಟಿಪ್ಪಣೆ ಮಾಡಲಿಕ್ಕೆ, ಅದರ ಬಗ್ಗೆ ನಮ್ಮ ಚರ್ಚೆ ಮಾಡುವುದಕ್ಕೆ ಬಹಳ ಪರಿಣಾಮಕಾರಿಯಾಗಿ ನಮಗೆ ಅನುಕೂಲವಾಗುತ್ತದೆ. ಇದನ್ನು ಎಲ್ಲಾ ಗೌರವಾನ್ವಿತ ಸದಸ್ಯರುಗಳು ಓದಿ, ಉಪಯೋಗಿಸಬೇಕು. ಇದರ ಪ್ರತಿಯನ್ನು ಎಲ್ಲರಿಗೂ ತಲುಪಿಸುವಂತಹ ಒಂದು ವ್ಯವಸ್ಥೆಯನ್ನು ನಾನು ಇಲ್ಲಿ ಮಾಡಿದ್ದೇನೆ. ಅದರ ಪ್ರತಿಯನ್ನು ಎಲ್ಲರಿಗೂ ಕೊಡುತ್ತಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ತಾವು ಅವರನ್ನು ನಿನ್ನೆ ಪರಿಚಯಿಸಿದ ಮೇಲೆ ಅದೇ ಸಂಸ್ಥೆಯವರು ತಾವು ಅನುಮತಿ ಕೊಟ್ಟರೆ, ಮತ್ತು ಸದಸ್ಯರು ಅಪೇಕ್ಷೆ ಪಟ್ಟಲ್ಲಿ ಈ ಸದನ ನಡೆಯುವಾಗ ಒಂದು ಗಂಟೆ ಅವಧಿಯವರೆಗೆ GST ಯ ಬಗ್ಗೆ ಒಂದು ಕಾರ್ಯಗಾರ ಮಾಡುತ್ತೇವೆಂದು ಸಲಹೆಯನ್ನು ಕೊಟ್ಟಿದ್ದಾರೆ. ಅದಕ್ಕೆ ಗುರುವಾರ ಬೆಳಿಗ್ಗೆ ಅವಕಾಶ ಕೊಟ್ಟರೆ, ಅವರು ಆ ಕಾರ್ಯಾಗಾರ ಮಾಡುತ್ತೇವೆಂದು ಹೇಳಿದ್ದಾರೆ.

**ಸಭಾಪತಿಯವರು:–** GST ಯ ಬಗ್ಗೆ ಚರ್ಚೆಯಾಗಿ, ಮಾನ್ಯ ಸದಸ್ಯರುಗಳಿಗೆ ಅದು ಗೊತ್ತಾಗಬೇಕು. ನಮ್ಮ ಸದಸ್ಯರಿಗೆ 45 ನಿಮಿಷ, ಒಂದು ಗಂಟೆ ಸಮಯ ಅದರ ಬಗ್ಗೆ ವಿವರಣೆ ಕೊಡುತ್ತೇವೆಂದು ಹೇಳಿದ್ದಾರೆ. ಅದರ ಬಗ್ಗೆ ವ್ಯವಸ್ಥೆ ಮಾಡಿ, ಅದಕ್ಕೆ ಸಂಬಂಧಪಟ್ಟಂತೆ ದಿನಾಂಕವನ್ನು ತಿಳಿಸುತ್ತೇವೆ. ಎಲ್ಲಾ ಗೌರವಾನ್ವಿತ ಸದಸ್ಯರುಗಳು ಅದರ ಉಪಯೋಗವನ್ನು ಪಡೆದುಕೊಳ್ಳಬೇಕೆಂದು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ.

**ಎರಡನೆಯ ಪ್ರಕಟಣೆ ಏನೆಂದರೆ,** ಜೆ.ಡಿ(ಎಸ್) ಪಕ್ಷದ ವತಿಯಿಂದ ವಿಧಾನ ಪರಿಷತ್ತಿನಲ್ಲಿ ನಾಯಕರಾಗಿರುವಂತಹ ಶ್ರೀಯುತ ಬಸವರಾಜ ಹೊರಟ್ಟಿಯವರು ಮತ್ತು ರಾಜ್ಯಾಧ್ಯಕ್ಷರಾಗಿರುವಂತಹ ಶ್ರೀಯುತ ಹೆಚ್.ಡಿ. ಕುಮಾರ ಸ್ವಾಮಿಯವರು ನನಗೆ ಒಂದು ಪತ್ರವನ್ನು ಬರೆದಿದ್ದಾರೆ. ಆ ಪತ್ರದಲ್ಲಿ ವಿಧಾನ ಪರಿಷತ್ತಿನಲ್ಲಿ ಜೆ.ಡಿ(ಎಸ್) ಪಕ್ಷದ ವತಿಯಿಂದ ನಾಯಕರಾಗಿ ಶ್ರೀಯುತ ಬಸವರಾಜ ಹೊರಟ್ಟಿಯವರು ಇದ್ದಾರೆ, ಉಪ ನಾಯಕರನ್ನಾಗಿ ಶ್ರೀಯುತ ಕೆ.ಟಿ.ಶ್ರೀಕಂಠೇಗೌಡರವರನ್ನು ನೇಮಕ ಮಾಡಿ ಎಂದು ಹೇಳಿ, ನನಗೆ ಪತ್ರವನ್ನು ಬರೆದಿದ್ದಾರೆ. **ಅವರ ಪತ್ರದಂತೆ ಶ್ರೀಯುತ ಕೆ.ಟಿ.ಶ್ರೀಕಂಠೇಗೌಡರವರನ್ನು ಜೆ.ಡಿ.(ಎಸ್) ಪಕ್ಷದ ಉಪ ನಾಯಕರು ಎಂದು ನಾನು ಗುರುತಿಸುತ್ತಿದ್ದೇನೆ.**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಈಗ ಬಹಳ ಪ್ರಮುಖವಾದ ಒಂದು ವಿಧೇಯಕವನ್ನು ಪರ್ಯಾಲೋಚನೆ ಮಾಡಿ, ಅದನ್ನು ಚರ್ಚೆ ಮಾಡಿ, ಅದರ ಬಗ್ಗೆ ಇವತ್ತು ತೀರ್ಮಾನ ಮಾಡಬೇಕು. ಹಾಗಾಗಿ, ನಾವೀಗ ವಿಧೇಯಕವನ್ನು ಹಾಕಿಕೊಂಡಿದ್ದೇವೆ. ಅದರ ಬಗ್ಗೆ ಮಾನ್ಯ ಶಿಕ್ಷಣ ಸಚಿವರು ಪ್ರಾರಂಭ ಮಾಡುತ್ತಾರೆ.

**(ಈ ಹಂತದಲ್ಲಿ ಉಪ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

**6. ಶಾಸನ ರಚನೆ**

**ವಿಧೇಯಕದ ಪರ್ಯಾಲೋಚನೆ ಮತ್ತು ಅಂಗೀಕಾರ**

**ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕ, 2017**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ನೇ ಸಾಲಿನ ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕಕ್ಕೆ ವಿಧಾನ ಪರಿಷತ್ತಿನ ಪರಿಶೀಲನಾ ಸಮಿತಿಯು ವರದಿ ಮಾಡಿರುವ ತಿದ್ದುಪಡಿಗಳ ರೀತ್ಯಾ ವಿಧೇಯಕವನ್ನು ಪರ್ಯಾಲೋಚಿಸಬೇಕಾಗಿ ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಈ ಸದನದಲ್ಲಿ ಸುದೀರ್ಘವಾಗಿ ಚರ್ಚೆಯಾಗಿದೆ. ಚರ್ಚೆಯ ನಂತರ ನಾವು ಪರಿಶೀಲನಾ ಸಮಿತಿಗೆ ಕಳುಹಿಸಿದ್ದೆವು. ಪರಿಶೀಲನಾ ಸಮಿತಿಯಲ್ಲಿ 8 ಜನ ಸದಸ್ಯರನ್ನು ಮಾನ್ಯ ಸಭಾಪತಿಯವರು ನೇಮಕ ಮಾಡಿದಂತೆ ನಾವು ಅವರ ಜೊತೆ ಸಮಾಲೋಚನೆ ಮಾಡಿ ಸಭೆಗಳನ್ನು ನಡೆಸಿದ್ದೇವೆ. ಸಭೆಯಲ್ಲಿ ಪಾಲ್ಗೊಂಡಂತಹ 8 ಜನ ಮಾನ್ಯ ಸದಸ್ಯರುಗಳು ಆ ವಿಚಾರದಲ್ಲಿ ಎಲ್ಲೆಲ್ಲಿ ತಿದ್ದುಪಡಿ ಅವಶ್ಯವಾಗಿರುವುದಾಗಿ ತಿಳಿಸಿದ್ದರು. ಆ ತಿದ್ದುಪಡಿಗಳನ್ನು ಮಾಡಿ, ಇವತ್ತಿನ ಪ್ರಸ್ತುತ ಪರೀಕ್ಷೆ ನಡೆಯುವಂತಹ ಸಂದರ್ಭದಲ್ಲಿ ನಮಗೆ ಕಾನೂನು ಬಿಗಿ ಮಾಡಬೇಕಾಗಿರುವಂತಹ ಒಂದು ಪರಿಸ್ಥಿತಿಯನ್ನು ನಾವು ಏನು ಕಾಣುತ್ತಿದ್ದೇವೆ, ಮುಂಜಾಗ್ರತಾ ಕ್ರಮವಾಗಿ ನಾವು ಏನೆಲ್ಲಾ ಮಾಡಬೇಕಾಗಿತ್ತು, ಅದನ್ನು ಮನಸ್ಸಿನಲ್ಲಿಟ್ಟುಕೊಂಡು ವಿಧೇಯಕವನ್ನು ತಯಾರಿಸಿರುವಂತಹದ್ದಾಗಿತ್ತು. ಈ ಸಂಬಂಧ ಆಕ್ಷೇಪಣೆಯನ್ನು ಎತ್ತಿದಂತಹ ಸಂದರ್ಭದಲ್ಲಿ ಬಹಳ ಪ್ರಮುಖವಾಗಿ ಇದ್ದಂತಹ ವಿಷಯ ಏನೆಂದರೆ, ಶಿಕ್ಷಕರುಗಳನ್ನು instigate ಮಾಡುವಂತಹದ್ದು, ಅಥವಾ ಅವರಿಗೆ ಎತ್ತಿಕಟ್ಟುವಂತಹ ಸನ್ನಿವೇಶ ಬಂದಾಗ, ಅವರುಗಳಿಗೂ ಸಹ ಶಿಕ್ಷೆ ಎನ್ನುವುದು ಒಂದು ಇತ್ತು. ಪೇಪರ್ ಲೀಕ್ ಆಗುವಂತಹದ್ದು ಮತ್ತು ಮೌಲ್ಯಮಾಪನ ಮಾಡುವಂತಹ ಈ ಎರಡು ಕ್ರಮಗಳು. ಈ ಪೇಪರ್ ಲೀಕ್ ಆಗುವಂತಹದ್ದಕ್ಕೆ ನೀವು ಎಷ್ಟು ಬೇಕಾದರೂ ದಂಡವನ್ನು ಹಾಕಿ, ಎಷ್ಟು ಬೇಕಾದರೂ ಶಿಕ್ಷೆ ಕೊಡಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎಂದವರು ಹೇಳಿದರು. ಆ ಕಾರಣದಿಂದ ನಾವು ಪ್ರಕರಣ 23(ಕೆ) ಇದಕ್ಕೆ ಮತ್ತಷ್ಟು ಬಿಗಿ ಮಾಡಿ, ಮತ್ತು ಸ್ಪಷ್ಟವಾದಂತಹ ನಮ್ಮ ಒಂದು ವ್ಯಾಖ್ಯಾನಗಳನ್ನು ಕೊಟ್ಟು, ಪೇಪರ್ ಲೀಕ್ ಆಗುವಂತಹ; ಪರೀಕ್ಷೆಯ ಮುನ್ನ, ಪರೀಕ್ಷೆಯ ಸಂದರ್ಭದಲ್ಲಿ, ಪರೀಕ್ಷೆಯ ನಂತರ ಆಗುವಂತಹ ಅಕ್ರಮಗಳಿಗೆ ಸಂಬಂಧಪಟ್ಟಂತೆ 5 ವರ್ಷ ಶಿಕ್ಷೆ ಮತ್ತು 5 ವರ್ಷ ದಂಡ ಹಾಕಿದ್ದೇವೆ. ಮೌಲ್ಯಮಾಪನ ಮಾಡುವಂತಹದ್ದನ್ನು ಬೇರ್ಪಡಿಸಿ, ಅದಕ್ಕೆ ನಾವು ಏನು ಮಾಡಿದ್ದೇವೆಂದರೆ ಪ್ರತಿಯೊಂದು ಪರೀಕ್ಷೆಯ ನಂತರ ನಾವು ಒಂದು Scheme of Evaluation ಏನು ಕೊಡುತ್ತೇವೆ, ಅದರಂತೆ ಇದು ನಡೆಯಬೇಕು. ಉದ್ದೇಶಪೂರ್ವಕವಾಗಿ ಯಾರಾದರೂ ಈ ಒಂದು ಕ್ರಮ ಮಾಡಿದಂತಹ ಸಂದರ್ಭದಲ್ಲಿ ಈಗಾಗಲೇ ನಮ್ಮ ಕಾನೂನಿನಲ್ಲಿರುವಂತೆ 28ನೇ ಪ್ರಕರಣಕ್ಕೆ ತಕ್ಕಂತೆ, ಇದನ್ನು 28ನೇ ಪ್ರಕರಣಕ್ಕೆ ಕೊಟ್ಟು, ಅಲ್ಲಿ 1 ಲಕ್ಷ ದಂಡ ಮತ್ತು 6 ತಿಂಗಳು ಸಜೆ ಎನ್ನುವುದನ್ನು ನಾವು ಮಾಡಿದ್ದೇವೆ. ಎಲ್ಲಾ ಮಾನ್ಯ ಸದಸ್ಯರುಗಳು ಇದನ್ನು ಒಪ್ಪಿಕೊಂಡು ಬಹುತೇಕವಾಗಿ ಎಲ್ಲರೂ ರುಜುವಾತು ಮಾಡಿಕೊಟ್ಟಿದ್ದಾರೆ. ಹಾಗೆ ಇರುವಂತಹ ಸಂದರ್ಭದಲ್ಲಿ ಯಾರು ನಮ್ಮ ಪರಿಶೀಲನಾ ಸಮಿತಿಯಲ್ಲಿ ಇದ್ದರು, ಅವರಿಗೆ ಸಿಮೀತವಾಗಿ ಅವರೆಲ್ಲರೂ ಒಪ್ಪಿಕೊಂಡಿರುವುದರಿಂದ ಮತ್ತೆ, ಈ ವಿಚಾರವಾಗಿ ಸದನದಲ್ಲಿ ಮತ್ತೊಮ್ಮೆ ಚರ್ಚೆ ಆಗಬೇಕೆಂದರೆ ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ, ಇದರ ಅವಶ್ಯಕತೆಯ ಒಂದು ವಿಚಾರವನ್ನು ಮುಂದಿಟ್ಟುಕೊಂಡು ನಾವು ಇವತ್ತು ಕಾನೂನಿನ ನೆರವನ್ನು ಪಡೆದುಕೊಂಡು ಪರೀಕ್ಷೆಗಳನ್ನು ಯಾವುದೇ ಅಕ್ರಮಗಳಿಲ್ಲದೆ, ನಾವು ನಡೆಸಬೇಕಾಗಿರುವಂತಹದ್ದಾಗಿದೆ. ಇತ್ತೀಚೆಗೆ ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕಿನಲ್ಲಿ ಆದಂತಹ ಘಟನೆಯನ್ನು ನಾವು ನೋಡಿದ್ದೇವೆ. ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡು, security measures ಅನ್ನು ನಾವು ಏನು ಹಾಕಿದ್ದೆವು, ಏನು bar coding ಮಾಡಿದ್ದೆವು, ಬಹುಶ: ನಮ್ಮ ಪೊಲೀಸ್ ಇಲಾಖೆಯವರು ಪ್ರಕರಣ ನಡೆದ ಎರಡು ಗಂಟೆಯೊಳಗಾಗಿ ತಪ್ಪಿತಸ್ತ ವ್ಯಕ್ತಿಗಳನ್ನು ದಸ್ತಗಿರಿ ಮಾಡಿ, ಅವರುಗಳಿಂದ ತಾವು ಮಾಡಿದಂತಹ ತಪ್ಪಿಗೆ ಹೇಳಿಕೆಗಳನ್ನು ಪಡೆದುಕೊಂಡು ಅವರಿಗೆ ಇವತ್ತು ಜೈಲು ಶಿಕ್ಷೆಯಾಗಿರುವಂತಹದ್ದನ್ನು ನಾವು ನೋಡುತ್ತಿದ್ದೇವೆ. ಮೊದಲಿನ ಮಂಡಿಸಿದಂತಹ ವಿಧೇಯಕದ ಕಾನೂನು ಇವರಿಗೆ ಅನ್ವಯಿಸಿದಂತಹ ಸಂದರ್ಭದಲ್ಲಿ ಅವರಿಗೆ 5 ವರ್ಷಗಳ ಸಜೆ ಮತ್ತು ಅದಕ್ಕಿಂತ ಜಾಸ್ತಿಯೂ ಆಗಬಹುದಿತ್ತು. ಈಗ ಇರುವಂತಹ ಕಾನೂನು ಬಹಳ ಸರಳವಾಗಿರುವುದರಿಂದ ಪರೀಕ್ಷೆಯ ವಿಚಾರದಲ್ಲಿ ವಿದ್ಯಾರ್ಥಿಗಳ ಜೀವನದ ಜೊತೆ ಚೆಲ್ಲಾಟ ಆಡುವಂತಹ ಯಾವುದೇ ಕ್ರಮ ಇದ್ದರೂ ಸಹ ಬಹುಶ: ಈ ಸದನವೂ ಸಹ ಅದನ್ನು ಸಹಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಹಾಗಾಗಿ, ನಾನು ಗೌರವಾನ್ವಿತ ಈ ಸದನಕ್ಕೆ ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕಾಗಿ ವಿನಂತಿ ಮಾಡಿಕೊಂಡು ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಮಾನ್ಯ ಸಭಾಪತಿಯವರಿಗೆ ವಂದಿಸುತ್ತೇನೆ.

(264) 17.03.17 SPR/BNS 1.40

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ಈ ತಿದ್ದುಪಡಿಯನ್ನು ವಿರೋಧ ಮಾಡಿದ ನಂತರ, ...

**ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು):-** ಮಾನ್ಯ ಸಭಾಪತಿಯವರೇ, ತಾವು ಒಂದು ರೂಲಿಂಗ್‌ನ್ನು ಕೊಡಬೇಕಾಗುತ್ತದೆ. ಅದೇನೆಂದರೆ, ಪರಿಶೀಲನಾ ಸಮಿತಿಯಲ್ಲಿ ಯಾವ ಸದಸ್ಯರುಗಳಿದ್ದರು, ಅವರುಗಳು ಒಪ್ಪಿಗೆಯನ್ನು ಕೊಟ್ಟಿರುವ ಹಿನ್ನೆಲೆಯಲ್ಲಿ ಅವರುಗಳನ್ನು ಹೊರತುಪಡಿಸಿ ಬೇರೆಯವರು ಯಾರು ಇದ್ದಾರೆ ಅವರುಗಳು ಈ ವಿಧೇಯಕದ ಮೇಲೆ ತಮ್ಮ ಆಕ್ಷೇಪಣೆಗಳೇನಾದರೂ ಇದ್ದರೆ ಅವುಗಳನ್ನು ಕೊಡಲಿ. ಪರಿಶೀಲನಾ ಸಮಿತಿಯಲ್ಲಿ ನಮ್ಮ ಶ್ರೀ ಅರುಣ ಶಹಾಪುರ, ಶ್ರೀ ಎಸ್.ವಿ.ಸಂಕನೂರ, ಶ್ರೀ ಪುಟ್ಟಣ್ಣ, ಶ್ರೀ ಕೆ.ಟಿ.ಶ್ರೀಕಂಠೇಗೌಡ, ಶ್ರೀ ಶರಣಪ್ಪ ಮಟ್ಟೂರ, ಶ್ರೀ ಎಸ್.ಆರ್.ಪಾಟೀಲ್ ರವರುಗಳಿದ್ದರು.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾವೇನು ಸಹಿ ಮಾಡಿಲ್ಲ, ಒಪ್ಪಿಗೆಯನ್ನೂ ಕೊಟ್ಟಿಲ್ಲ. ನಾವು ಸೂಚಿಸಿದ ತಿದ್ದುಪಡಿಗಳೆಲ್ಲವೂ ಅಂಗೀಕಾರವಾಗಿಲ್ಲ.

**(ಗೊಂದಲ)**

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಸಚಿವರು ಮಾತನಾಡುವ ಸಂದರ್ಭದಲ್ಲಿ ಮತ್ತೆ ಚರ್ಚೆಗೆ ಅವಕಾಶ ಕೊಡೋಣವೆಂದು ಹೇಳಿದರು.

**(ಗೊಂದಲ)**

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ಯಾರು ಯಾರು ಏನೇನು ಮಾತನಾಡಿದ್ದಾರೆ ಅದು ನನಗೆ ಗೊತ್ತಿದೆ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಕೊಟ್ಟ ಸಲಹೆಗಳನ್ನು ಅಂಗೀಕಾರ ಮಾಡಿಲ್ಲ. ಹೀಗಾಗಿ ನಾನು ಮಾತನಾಡಬೇಕಾಗುತ್ತದೆ.

**(ಗೊಂದಲ)**

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಸಚಿವರು ಮಾತನಾಡುವ ಸಂದರ್ಭದಲ್ಲಿ ಮತ್ತೆ ಚರ್ಚೆಗೆ ಅವಕಾಶ ಕೊಡೋಣವೆಂದು ಹೇಳಿದರು.

**(ಗೊಂದಲ)**

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ನಾನು ಅತ್ಯಂತ ವಿನಮ್ರತೆಯಿಂದ ಕೇಳಿಕೊಳ್ಳುತ್ತಿದ್ದೇನೆ. ಇವತ್ತಿನ ದಿವಸ ನಡೆಯುತ್ತಿರುವ ಪರೀಕ್ಷಾ ಅಕ್ರಮಗಳನ್ನು... ನಾವು ಈ ಸದನದ ಗೌರವವನ್ನು ಎತ್ತಿ ಹಿಡಿಯಬೇಕೆಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದರೆ, ತಪ್ಪು ಮಾಡಿದವರಿಗೆ ಶಿಕ್ಷೆಯಾಗಬೇಕು ಎನ್ನುವುದನ್ನು ಸಾಬೀತು ಮಾಡಬೇಕು. ನಾನಾ ಕಾರಣಗಳಿಂದ ಸಂಬಂಧಗಳನ್ನಿಟ್ಟುಕೊಂಡು ನಾವು ಇಲ್ಲಿ ಮಾತನಾಡಿದರೆ, ಶಾಸನವನ್ನು ರಚನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತಿನ ಪರಿಸ್ಥಿತಿಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದಂತಹ ಸಂದರ್ಭದಲ್ಲಿ ಮಕ್ಕಳ ಭವಿಷ್ಯದ ಜೊತೆಗೆ ಚೆಲ್ಲಾಟವಾಡಬಾರದು. ನಿಗದಿತ ಸಮಯದಲ್ಲಿ ವಿದ್ಯಾರ್ಥಿಗಳು ಸಿ.ಇ.ಟಿ. ಪರೀಕ್ಷೆಯನ್ನು ಬರೆಯಲು ಅನುಕೂಲ ಮಾಡಿಕೊಡಬೇಕು. ನಂತರದಲ್ಲಿ ಮುಂದಿನ ಶೈಕ್ಷಣಿಕ ಸನ್ನಿವೇಶಗಳಿಗೆ ಅವಕಾಶ ಮಾಡಿಕೊಡಬೇಕಾಗಿರುವಂತಹದ್ದು. National Eligibility and Entrance Test (NEET) ಪರೀಕ್ಷೆಗಳು ಈಗಾಗಲೇ ಪ್ರಕಟಗೊಂಡಿವೆ. ನಮ್ಮ ಶಿಕ್ಷಣದ ಮರು ಪರೀಕ್ಷೆ ಇತ್ಯಾದಿಗಳಿಗಾಗಿ ನಾವು ವಿಳಂಬ ಮಾಡಿದಾಗ, ನಾವು ನಮ್ಮ ರಾಜ್ಯದ ಮಕ್ಕಳಿಗೆ ಅನ್ಯಾಯ ಮಾಡಿದಂತಾಗುತ್ತದೆ. ಈ ರೀತಿಯ ಅನ್ಯಾಯವನ್ನು ನಾವು ಮಾಡುವಂತಹದ್ದು ಏನಾದರೂ ನಮ್ಮ ಮನಸ್ಸಿನಲ್ಲಿದ್ದರೆ, ಇದಕ್ಕೆ ಏನು ಬೇಕಾದರೂ ಮಾಡಲಿ. ನಾವು ತಂದಿರುವಂತಹ ವಿಧೇಯಕವನ್ನು ಚರ್ಚೆ ಮಾಡಿ ಪರಿಶೀಲನಾ ಸಮಿತಿಯ ಸದಸ್ಯರುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಅವರುಗಳು ಹೇಳಿದಂತಹ ತಿದ್ದುಪಡಿಗಳ ಜೊತೆಗೆ ವಿಧೇಯಕವು ಬಂದಿರುವುದರಿಂದ ಇದನ್ನು ಪರ್ಯಾಲೋಚಿಸಬೇಕಾಗಿ ನಾನು ಕೋರಿಕೊಳ್ಳುತ್ತೇನೆ.

**(ಗೊಂದಲ)**

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದಂತೆ ಎಲ್ಲಾ ಸದಸ್ಯರು ...

**ಉಪ ಸಭಾಪತಿಯವರು:-** ಶ್ರೀ ಚೌಡರೆಡ್ಡಿಯವರೇ, ಕುಳಿತುಕೊಳ್ಳಿ. ನಿಮಗೆ ಮಾತನಾಡಲಿಕ್ಕೆ ಅವಕಾಶ ಕೊಡೋಣ. ಕುಳಿತುಕೊಳ್ಳಿ.

**ಶ್ರೀ ರಮೇಶ್ ಬಾಬು(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕ, 2017 ರ ಬಗ್ಗೆ ಆರೋಗ್ಯಕರ ಚರ್ಚೆಗೆ ಮಾನ್ಯ ಪ್ರೌಢ ಶಿಕ್ಷಣ ಸಚಿವರು ಅವಕಾಶ ಕೊಡುತ್ತಾರೆಂಬುದು ನನ್ನ ಭಾವನೆಯಾಗಿದೆ. ಬಹಳ ಪ್ರಮುಖವಾಗಿ ಅವರು ಚರ್ಚೆಗೆ ಮುನ್ನವೇ ಸಮಿತಿಯಲ್ಲಿದ್ದಂತಹ ಸದಸ್ಯರು ಮಾತನಾಡಬಾರದು ಎನ್ನುವ ಅಡ್ಡ ... **(ಗೊಂದಲ)** ದಯಮಾಡಿ ನನ್ನ ಅಭಿಪ್ರಾಯ ಹೇಳಲಿಕ್ಕೆ ಅವಕಾಶ ಕೊಡಿ. ಮಧ್ಯದಲ್ಲಿ ಅವರು ಮಾತನಾಡುವುದಾದರೆ, ನಾನು ಕುಳಿತುಕೊಳ್ಳುತ್ತೇನೆ. ಇಲ್ಲಿರುವಂತಹ ಪ್ರಶ್ನೆ ಏನೆಂದರೆ, ಸದನದ ಸಮಿತಿಯ ಸದಸ್ಯರ ಅಭಿಪ್ರಾಯಕ್ಕೆ ವಿರುದ್ಧವಾಗಿ ವಿಧೇಯಕವೇನಾದರೂ ಅನುಮೋದನೆಯಾಗಿದ್ದರೆ, ಸದಸ್ಯರುಗಳಿಗೆ ಅವರ ಅಭಿಪ್ರಾಯ ಹೇಳಲಿಕ್ಕೆ ಅವರಿಗೆ ಹಕ್ಕು ಇದ್ದೇ ಇರುತ್ತದೆ. ಸಚಿವರು ಮುಂಚೆಯೆ defence ತೆಗೆದುಕೊಂಡು, ಸದಸ್ಯರು ಮಾತನಾಡಬಾರದು ಎಂದು ಹೇಳಿದರೆ ಬಹುಶ: ಅದು ತಪ್ಪಾಗುತ್ತದೆ.

**(ಗೊಂದಲ)**

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ಶ್ರೀ ರಮೇಶ್ ಬಾಬುರವರೇ ನಾನು ಒಂದು ಮಾತನ್ನು ಹೇಳುತ್ತೇನೆ. ನಿಯಮಗಳಲ್ಲಿ ಏನಿದೆ ಅದನ್ನು ಮಾತ್ರವೇ ನಾನು ಪ್ರಸ್ತಾಪ ಮಾಡಿದ್ದೇನೆ. ನಾನೇನು ಜಾಸ್ತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡಿಲ್ಲ. ನಾನು ಹೇಳುವುದೇನೆಂದರೆ, ಮಾತನಾಡಬೇಕು ಎನ್ನುವುದಕ್ಕೆ ಮಾತ್ರವೇ ಮಾತನಾಡುವಂತಹದ್ದು ನನಗೇನೂ ಇಲ್ಲ. ಯಾವ್ಯಾವ ಸದಸ್ಯರು ಏನೇನು ಮಾತನಾಡಿದ್ದಾರೆ, ಅಲ್ಲಿ ಏನೇನು ಆಗಿದೆ ಎಂಬ ಪ್ರತಿಯೊಂದು ಸಂಗತಿಗಳು ನನ್ನ ಸ್ಮೃತಿಯಲ್ಲಿವೆ, ದಾಖಲೆಯಲ್ಲಿವೆ. ಇವುಗಳನ್ನು ತಿದ್ದುವುದಕ್ಕಾಗುವುದಿಲ್ಲ. ಹೀಗಾಗಿ ನಾನು ನಿಮಗೆ ಹೇಳುವುದೇನೆಂದರೆ. . .

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಕೊಟ್ಟಿರುವ ಅಭಿಪ್ರಾಯಗಳು ಅನುಷ್ಠಾನವಾಗಿಲ್ಲವಲ್ಲ. ಹೀಗಾಗಿ ನಾವು ಅವುಗಳನ್ನು ಪ್ರಸ್ತಾಪ ಮಾಡಲೇಬೇಕಾಗುತ್ತದೆ. ಹೀಗಾಗಿ ನಾವು ರುಜುವನ್ನೂ ಸಹ ಮಾಡಿಲ್ಲ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ಇಲ್ಲಿ ಒಂದು ವಿಚಾರವನ್ನು ನಾನು ಹೇಳಲಿಚ್ಛಿಸುತ್ತೇನೆ. ಯಾರು ಮಾತನ್ನು ತಪ್ಪಿದ್ದಾರೆ, ಯಾರು ಮಾತನ್ನು ತಪ್ಪಿಲ್ಲ ಎನ್ನುವ ವಿಚಾರ ಇಲ್ಲಿಲ್ಲ. ನನ್ನ ಬಳಿ ಎಲ್ಲಾ ದಾಖಲಾತಿಗಳಿವೆ. ಹಾಲಿಯಿರುವ ನಿಯಮಗಳನ್ನು ಹಾಗೆಯೇ ಮುಂದುವರೆಸಿ, ನಮ್ಮ ತಲೆಗೆ ಹಚ್ಚಿಕೊಳ್ಳುವುದು ಬೇಡವೆಂದು ಹೇಳುವಂತಹ ಮಾತುಗಳೂ ಕೇಳಿ ಬಂದಿವೆ. ಅದು ಈಗ ಬೇಡ. ನಾವು ಚರ್ಚೆಯನ್ನು ಮಾಡೋಣ. ಆದರೆ, ಇವತ್ತಿನ ಅಗತ್ಯಕ್ಕನುಗುಣವಾಗಿ ಈ ವಿಧೇಯಕದ ಅವಶ್ಯಕತೆಯಿದೆ. ಇದನ್ನು ದಯವಿಟ್ಟು ಅಂಗೀಕರಿಸುವ ಹಂತದಲ್ಲಿ ನೀವುಗಳು ನಮಗೆ ಸಹಾಯ ಮಾಡಬೇಕು.

**ಶ್ರೀ ರಮೇಶ್ ಬಾಬು(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ತಿದ್ದುಪಡಿ ವಿಧೇಯಕದಲ್ಲಿ ಬಹಳ ಪ್ರಮುಖವಾದ ನಾಲ್ಕು ಅಂಶಗಳನ್ನು ನಾವು ಚರ್ಚೆಗೆ ತೆಗೆದುಕೊಂಡಿದ್ದೆವು. ಅವುಗಳು ಯಾವುದೆಂದರೆ, ವಿಧೇಯಕದ ಕಲಂ 21, 23 ಮತ್ತು 24 sub clause (A) ಮತ್ತು 121 sub clause (A) sub clause (iii)ಗಳಿಗೆ ತಿದ್ದುಪಡಿಯನ್ನು ತರುವುದಕ್ಕೆ ಮುಂಚಿತವಾಗಿ ಸಚಿವರು ಕೊಟ್ಟಂತಹ ಕಾರಣವೇನಂದರೆ, ಸಾರ್ವಜನಿಕವಾಗಿ ಪರೀಕ್ಷಾ ಅಕ್ರಮಗಳನ್ನು ತಡೆಯುವುದಕ್ಕೆ ಕೆಲವೊಂದು ಮಾರ್ಪಾಡುಗಳು ಬೇಕಾಗಿವೆ, ಅದಕ್ಕೋಸ್ಕರವಾಗಿಯೇ ತಿದ್ದುಪಡಿಯನ್ನು ತಂದಿದ್ದೇವೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ನಾವೂ ಸಹ ಇದನ್ನು ಸ್ವಾಗತಿಸುತ್ತೇವೆ. ಯಾವ ಕಾರಣಕ್ಕಾಗಿ ನಾವು ಇದನ್ನು ಸ್ವಾಗತ ಮಾಡುತ್ತೇವೆ ಎಂದರೆ, ಪರೀಕ್ಷೆಯಲ್ಲಿ ಇತ್ತೀಚಿನ electronic equipments ಗಳಾದ ಮೊಬೈಲ್ ಅಥವಾ ಇನ್ನಿತರೆ ಯಾವುದೇ ವಿದ್ಯುನ್ಮಾನ ಉಪಕರಣಗಳಿರಬಹುದು. ಈ ರೀತಿಯಾಗಿ ಆಗುತ್ತಿದೆ. ಆದ್ದರಿಂದ ಕಾಯ್ದೆಯ ವ್ಯಾಖ್ಯಾನದಲ್ಲಿ ಇವುಗಳನ್ನೆಲ್ಲಾ ತೆಗೆದುಕೊಂಡು ಬಂದಿಲ್ಲ. ಅವುಗಳು ಫೋಟೋಕಾಪಿ, ಮೊಬೈಲ್ ಅಥವಾ ಇನ್ನಾವುದೇ ಇರಬಹುದು. ಇವುಗಳನ್ನೆಲ್ಲಾ ತಿದ್ದುಪಡಿ ಮುಖೇನ ಕಾಯ್ದೆಯಲ್ಲಿ ಅಳವಡಿಸಲಿಕ್ಕೆ ಅವಕಾಶವಿದೆ ಎಂದಾಗ ನಾವೂ ಸಹ ಮುಕ್ತ ಕಂಠದಿಂದ ಅವರಿಗೆ ಅವಕಾಶವನ್ನು ಕೊಟ್ಟಿದ್ದೆವು. ಆದರೆ ತಿದ್ದುಪಡಿಯಲ್ಲಿ ಇವರು ಶಿಕ್ಷೆಯನ್ನು ವಿಧಿಸುವಂತಹ ಕಲಂಗಳನ್ನು ಕಲಂ 24 sub clause (A) ಮತ್ತು 121 sub clause (A) sub

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

clause (iii), ಗಳನ್ವಯ introduce ಮಾಡಿದ್ದಾರೆ. ಬಹಳ ಪ್ರಮುಖವಾದ ಮೂರು ಅಂಶಗಳನ್ನು ಇಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಮೊದಲನೆಯದಾಗಿ ಶಿಕ್ಷಕರು, ಉಪನ್ಯಾಸಕರು ಮತ್ತು ಅವರೊಂದಿಗೆ ಶಾಮೀಲಾಗುವವರ ವಿರುದ್ಧ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಐದು ವರ್ಷದ ಜೈಲು ಶಿಕ್ಷೆ, ಐದು ಲಕ್ಷ ರೂಪಾಯಿಗಳ ದಂಡಕ್ಕೆ ಅವಕಾಶ ಕೊಡುವಂತಹ ತಿದ್ದುಪಡಿಯನ್ನು ಅವರು ತೆಗೆದುಕೊಂಡು ಬಂದಿದ್ದರು. ನಾವು ಅದಕ್ಕೆ ವಿರೋಧ ಮಾಡಿದ್ದೆವು. ಇದಕ್ಕೆ ಕಾರಣವೇನೆಂದರೆ, ಹಳೆಯ ಕಾಯ್ದೆಯ ಕಲಂ 21 ಮತ್ತು 23 ಗಳಲ್ಲಿ ಒಂದು provision ಇತ್ತು. ಅದೇನೆಂದರೆ, ಯಾರಾದರೂ ಪರೀಕ್ಷೆಯ ಅಕ್ರಮಗಳಲ್ಲಿ ಭಾಗಿಯಾದರೆ, ಅವರಿಗೆ ಆರು ತಿಂಗಳು ಜೈಲು ಶಿಕ್ಷೆ ಅಥವಾ ಹತ್ತು ಸಾವಿರ ರೂಪಾಯಿ ಜುಲ್ಮಾನೆ ಎಂಬ ಅವಕಾಶವಿತ್ತು. ನಾನು ಮಾನ್ಯ ಮಂತ್ರಿಗಳನ್ನು ಅವತ್ತೂ ಸಹ ಕೇಳಿದ್ದೇನೆ. ಈಗ ನೀವು ಐದು ವರ್ಷ ಜೈಲು ಶಿಕ್ಷೆ ಹಾಗೂ ಐದು ಲಕ್ಷ ರೂಪಾಯಿಗಳ ಜುಲ್ಮಾನೆ ಎಂಬ ಹೊಸ ತಿದ್ದುಪಡಿಯನ್ನು ತಂದಿದ್ದೀರಿ. ಇದು ಒಂದು ಕಡೆ ಇರಲಿ. ಹಾಲಿ ಇರುವಂತಹ ಕಾನೂನಿನಲ್ಲಿ ಎಷ್ಟು ಜನರ ವಿರುದ್ಧ ಪ್ರಕರಣಗಳನ್ನು ದಾಖಲಿಸಿದ್ದೀರಿ? ಎಷ್ಟು ಜನರ ಮೇಲೆ ಅದು ಅನುಷ್ಠಾನಗೊಂಡಿದೆ? ಎಷ್ಟು ಜನರಿಗೆ conviction ಕೊಟ್ಟಿದ್ದೀರಿ ಎಂಬ ಮಾಹಿತಿಯನ್ನು ಕೊಡಿ. ನಾನು ಇದನ್ನು ಏಕೆ ಕೇಳುತ್ತಿದ್ದೇನೆಂದರೆ, ಶಿಕ್ಷೆಯ ಪ್ರಮಾಣವನ್ನು ಜಾಸ್ತಿ ಮಾಡಬೇಕಾದರೆ, there should be a justification. ಇವರು ಹಳೆಯ ಕಾಯ್ದೆಯನ್ವಯ ಒಬ್ಬರ ಮೇಲೂ ಕ್ರಮ ತೆಗೆದುಕೊಳ್ಳದೇ ಇವತ್ತಿನ ದಿವಸ ಏಕಾಏಕಿಯಾಗಿ ಆರು ತಿಂಗಳು ಇರುವ ಶಿಕ್ಷೆಯನ್ನು ಐದು ವರ್ಷಕ್ಕೆ ಹಾಗೂ ಜುಲ್ಮಾನೆಯನ್ನು ಹತ್ತು ಸಾವಿರ ರೂಪಾಯಿಗಳಿಂದ ಐದು ಲಕ್ಷ ರೂಪಾಯಿಗಳವರೆಗೆ ಏರಿಕೆ ಮಾಡಿದ್ದಾರೆ. ಈಗ ಸದನ ಸಮಿತಿಯ ಒಪ್ಪಿಗೆಯ ಮೇಲೆ ಎಂದು ಹೇಳಿ ಮತ್ತೊಂದನ್ನು ಮೂರು ವರ್ಷಕ್ಕೆ ಎಂದು ಮಾಡಿ, ಜುಲ್ಮಾನೆಯನ್ನು ಐದು ಲಕ್ಷ ರೂಪಾಯಿಗಳಿಗೆ ನಿಗದಿಪಡಿಸಿ indirect ಆಗಿ ಅಂದರೆ, ಹಿಂಬಾಗಿಲಿನ ಮೂಲಕ ತರುವಂತಹ ಪ್ರಯತ್ನವನ್ನು ಮಾಡಿದರೆ ಸರ್ಕಾರದ ಉದ್ದೇಶವೇನು? ಬಹುತೇಕವಾಗಿ ನಮಗೆ ಮಾನ್ಯ ಸಚಿವರ ಬಗ್ಗೆ ಗೌರವವಿದೆ. ಶ್ರೀ ತನ್ವೀರ್ ಸೇಠ್ ರವರ ಹೆಸರನ್ನು ಹೇಳಬೇಕಾದರೂ ಸಹ ನಾವು ಶ್ರೀ ಅಜೀಜ್ ಸೇಠ್ ರವರ ಹೆಸರನ್ನು ಜ್ಞಾಪಿಸಿಕೊಳ್ಳುತ್ತೇವೆ. ಇದಕ್ಕೆ ಕಾರಣವೇನೆಂದರೆ, ಮಾನ್ಯ ಅಜೀಜ್ ಸೇಠ್‌ರವರು ಯಾವತ್ತಿಗೂ ಈ ರಾಜ್ಯದಲ್ಲಿ ಶೋಷಿತ ವರ್ಗದ ಪರವಾಗಿಯೇ ಇದ್ದಂತಹವರು. ಯಾವತ್ತಿಗೂ ಸಹ ಅವರು ಕೆಳವರ್ಗದವರಿಗೆ ಅನ್ಯಾಯ ಮಾಡುವುದಕ್ಕೆ ಅವಕಾಶ ಕೊಟ್ಟಂತಹವರಲ್ಲ. ಅವರ ಸುಪುತ್ರರಾಗಿ ನೀವು ಇವತ್ತು ಬಡ ಮೇಷ್ಟ್ರುಗಳ, ಬಡ ಉಪನ್ಯಾಸಕರುಗಳ ಮೇಲೆ ಕೆಂಗಣ್ಣನ್ನಿಟ್ಟುಕೊಂಡು ಅವರುಗಳನ್ನು ಜೈಲಿಗೆ ತಳ್ಳುವಂತಹ ಉದ್ದೇಶ ನಿಮಗೇಕೆ ಬಂತು ಎಂಬುದು ನಮಗೆ ಇವತ್ತಿನವರೆಗೂ ಅರ್ಥವಾಗುತ್ತಿಲ್ಲ.

**(ಗೊಂದಲ)**

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ದಯಮಾಡಿ ದಾರಿ ತಪ್ಪಿಸಬೇಡಿ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ದಯಮಾಡಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ತಪ್ಪಿಸಿದವರು ಯಾರು ಎಂಬುದನ್ನು ನಾನು ಹೇಳುತ್ತಿದ್ದೇನೆ.

**(ಗೊಂದಲ)**

**ಉಪ ಸಭಾಪತಿಯವರು:-** ಅವರಿಗೆ ಮಾತನಾಡಲು ಬಿಡಿ.

**(ಗೊಂದಲ)**

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ನನ್ನ ಅಭಿಪ್ರಾಯಗಳನ್ನು ಹೇಳುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಿ.

**(ಗೊಂದಲ)**

**ಉಪ ಸಭಾಪತಿಯವರು:-** ನೀವೂ ಮಾತನಾಡಿ. ದಯವಿಟ್ಟು ಕುಳಿತುಕೊಳ್ಳಿ. ಅವರಿಗೆ ಮಾತನಾಡಲು ಅವಕಾಶ ಕೊಡಿ.

**(ಗೊಂದಲ)**

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ಶಿಕ್ಷಕರು ಆರು ತಿಂಗಳು ಪಾಠ ಮಾಡುವುದಿಲ್ಲ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ತಪ್ಪು ಮಾಡಿದವರಿಗೆ ಶಿಕ್ಷೆಯಾಗುವುದು ಬೇಡವೇ?

**ಉಪ ಸಭಾಪತಿಯವರು:-** ಶ್ರೀ ರವಿಯವರೇ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ಸರ್ಕಾರ ಶಿಕ್ಷಕರಿಗೆ ಕೈತುಂಬ ಸಂಬಳ ಕೊಡುವುದಿಲ್ಲವೇ?

**(ಗೊಂದಲ)**

**ಉಪ ಸಭಾಪತಿಯವರು:-** ಮಂತ್ರಿಯವರೇ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ಅವರು ನಮ್ಮ ತಂದೆಯವರ ಹೆಸರನ್ನು ಹೇಳಿದ್ದಾರೆ. ನಮಗೂ ಅಷ್ಟೇ ಕಾಳಜಿಯಿದೆ. ಆದರೆ ತಪ್ಪು ಮಾಡಿದವರಿಗೆ ಶಿಕ್ಷೆ...

**(ಗೊಂದಲ)**

**ಉಪಸಭಾಪತಿಯವರು:-** ಶ್ರೀ ರವಿಯವರೇ, ದಯವಿಟ್ಟು ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ಯಾರೂ ಬಡ ಮೇಷ್ಟ್ರುಗಳಲ್ಲ, ಸರ್ಕಾರ ಅವರಿಗೆ ಕೈತುಂಬಾ ಸಂಬಳ ಕೊಡುತ್ತದೆ. ಹೀಗಿರುವಾಗ ಶಿಕ್ಷಕರು ಬಡ ಮೇಷ್ಟ್ರುಗಳೆಂದು ಇವರು ಹೇಗೆ ಹೇಳುತ್ತಾರೆ?

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ರವಿಯವರೇ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ರಮೇಶ್ ಬಾಬು ರವರೆ ತಾವು ಮುಂದುವರೆಸಿ.

**(ಗೊಂದಲ)**

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, **"XXX"**...

**(ಗೊಂದಲ)**

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳಿಗೆ ಅವರ ಅಭಿಪ್ರಾಯ ಹೇಳುವುದಕ್ಕೆ ಅವರಿಗೆ ಅವಕಾಶವಿದೆ. ಅದಕ್ಕೆ ಯಾರೂ ಖಂಡಿತ ಅಡ್ಡ ಬರುವುದಿಲ್ಲ.

**(ಗೊಂದಲ)**

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ:–** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್ ಬಾಬು ಅವರು ನಮ್ಮ ಸದನದ ಹೊಸ ಸದಸ್ಯರಾಗಿದ್ದಾರೆ. ಅವರಿಗೆ ಮಾತನಾಡಲು ಅವಕಾಶ ಕೊಡಿ. ಅವರೇನಾದರೂ ಹೆಚ್ಚು–ಕಡಿಮೆ ಮಾತನಾಡಿದರೆ ಸರಿಪಡಿಸೋಣ. ಯಾರಾದರೂ ಒಬ್ಬರು ಮಾತನಾಡಿ, ಎಲ್ಲರೂ ಒಟ್ಟಿಗೆ ಮಾತನಾಡಿದರೆ ಹೇಗೆ?

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಚೌಡರೆಡ್ಡಿ ತೂಪಲ್ಲಿಯವರೆ ದಯವಿಟ್ಟು ಕುಳಿತುಕೊಳ್ಳಿ. **(ಗೊಂದಲ)** ಶ್ರೀ ರಮೇಶ್ ಬಾಬುರವರೇ, ತಾವು ಚೆನ್ನಾಗಿ ಮಾತನಾಡುತ್ತಿದ್ದೀರಿ, ಮುಂದುವರೆಸಿ.

**(ಗೊಂದಲ)**

---

XXX ಮಾನ್ಯ ಸಭಾಪತಿಯವರ ಆಜ್ಞಾನುಸಾರ ಸದರಿ ಪದಗಳನ್ನು ಕಡತದಿಂದ ತೆಗೆಯಲಾಗಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೇ, ತಿದ್ದುಪಡಿ ತಂದಿರುವಂತಹ ಮೂರು ಅಂಶಗಳ ಪೈಕಿ ಮೊದಲನೆಯ ಅಂಶವೇನೆಂದರೆ, ಇವತ್ತಿನ ದಿವಸ ಮೂರು ವರ್ಷಗಳ ಜೈಲು ಶಿಕ್ಷೆ ಅಥವಾ ಐದು ಲಕ್ಷ ರೂಪಾಯಿಗಳ . . .

**(ಗೊಂದಲ)**

**ಶ್ರೀ ಎಸ್.ರವಿ:–** ಮಾನ್ಯ ರಮೇಶ್ ಬಾಬು ಅವರು ಚೆನ್ನಾಗಿ ಮಾತನಾಡುತ್ತಿದ್ದಾರಂತೆ!

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ರವಿಯವರೇ, ದಯವಿಟ್ಟು ನಿಮಗೂ ಮಾತನಾಡಲಿಕ್ಕೆ ಅವಕಾಶವುಂಟು. ದಯವಿಟ್ಟು ನೀವು ಈ ರೀತಿಯಾಗಿ ಮಾತನಾಡಬಾರದು. ಅವರು ಏನು unparliamentary ಆಗಿ ಮಾತನಾಡಿದ್ದಾರೆ? **(ಗೊಂದಲ)** ಈಗ ಕುಳಿತುಕೊಳ್ಳಿ. ನಿಮಗೂ ಅವಕಾಶವುಂಟು, ನೀವೂ ಮಾತನಾಡಿ.

**(ಗೊಂದಲ)**

ನೀವು ಮಾತನಾಡುವಾಗ ಅದನ್ನು ಹೇಳಿ. **"XXX"** ಎಂದು ಹೇಳಿರುವುದನ್ನು ಕಡತದಿಂದ ವಾಪಸ್ಸು ತೆಗೆದುಕೊಳ್ಳುತ್ತೇವೆ. ಅದು ನಿಮಗೆ ಗೊತ್ತಾಯಿತೇ?

**ಶ್ರೀ ಎಸ್.ರವಿ.:–** ಮಾನ್ಯ ಸಭಾಪತಿಯವರೇ, ನಾವು ಮಧ್ಯದಲ್ಲಿ ಮಾತನಾಡಬಾರದೇ?

**ಉಪ ಸಭಾಪತಿಯವರು:–** ಶ್ರೀ ರವಿಯವರು ಮಾತನಾಡಿರುವುದು ಕಡತಕ್ಕೆ ಹೋಗುವುದಿಲ್ಲ. ಅದನ್ನು ಕಡತದಿಂದ ತೆಗೆಯಬೇಕು. **(ಗೊಂದಲ)** **XXX**. ನೀವು ಶಾಸಕರಾಗಿ ಶಿಕ್ಷಕರ ಬಗ್ಗೆ ಮಾತನಾಡುವುದನ್ನು ಮೊದಲು ಕಲಿತುಕೊಳ್ಳಿ.

**(ಗೊಂದಲ)**

---

XXX ಮಾನ್ಯ ಸಭಾಪತಿಯವರ ಆಜ್ಞಾನುಸಾರ ಸದರಿ ಪದಗಳನ್ನು ಕಡತದಿಂದ ತೆಗೆಯಲಾಗಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

*(265) 17.03.2017 1.50 MGN-BNS*

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಎಲ್ಲರೂ ಶಿಕ್ಷಕರ ಪರವಾಗಿಯೇ ಮಾತನಾಡುತ್ತಿದ್ದಾರೆ, ಇಲ್ಲಿ ಯಾರೂ ಶಿಕ್ಷಕರ ವಿರೋಧಿಗಳಿಲ್ಲ. ಶಿಕ್ಷಕರ ಪರವಾಗಿರುವವರು ನೀವೊಬ್ಬರು ಮಾತ್ರವೆ?

(ಗೊಂದಲ)

**ಉಪ ಸಭಾಪತಿಯವರು:–** (xxx) ಎಂದು ಮಾನ್ಯ ಎಸ್.ರವಿಯವರೇನು ಮಾತನಾಡಿದ್ದಾರೆ, ಅದನ್ನು ನಾನು ಕಡತದಿಂದ ತೆಗೆದುಹಾಕಿದ್ದೇನೆ.

(ಗೊಂದಲ)

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, (xxx) ಪರವಾಗಿ ಅವರು ಮಾತನಾಡುತ್ತಿದ್ದರೆ, ಅವರು ಚೆನ್ನಾಗಿ ಮಾತನಾಡುತ್ತಿದ್ದಾರೆ ಎಂದು ತಾವು ಹೇಳುತ್ತಿದ್ದೀರಿ.

(ಗೊಂದಲ)

**ಉಪ ಸಭಾಪತಿಯವರು:–** ಮಾನ್ಯ ರವಿಯವರೇ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ರಮೇಶ್ ಬಾಬು ಅವರು unparliamentary ಆಗಿ ಏನು ಮಾತನಾಡಿದರು?

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಾವೇಕೆ ಅವರಿಗೆ ಸಪೋರ್ಟ್ ಮಾಡುತ್ತಿದ್ದೀರಿ? ಕಾಪಿ ಹೊಡೆಯುವವರ ಪರವಾಗಿ ಅವರು ಮಾತನಾಡುತ್ತಿರುವಾಗ ತಾವು ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ ಎಂದು ಅವರಿಗೆ ಹೇಳುವುದು ಎಷ್ಟರಮಟ್ಟಿಗೆ ಸರಿಯಾಗುತ್ತದೆ?

---

(xxx) ಮಾನ್ಯ ಸಭಾಪತಿಯವರ ಆದೇಶಾನುಸಾರ ತೆಗೆದುಹಾಕಲಾಗಿದೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಉಪ ಸಭಾಪತಿಯವರು:-** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾನು ಎಲ್ಲರಿಗೂ ಮಾತನಾಡಲು ಅವಕಾಶ ಕೊಡುತ್ತೇನೆ. ಆ ಸಂದರ್ಭದಲ್ಲಿ ತಾವು ಮಾತನಾಡಿ. ಮಾನ್ಯ ರಮೇಶ್ ಬಾಬು ಅವರೆ, ತಾವು ಮುಂದುವರೆಸಿ.

(ಗೊಂದಲ)

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಸರ್ಕಾರ ತಂದಿರುವ "24ಎ" ತಿದ್ದುಪಡಿಯಲ್ಲಿ ಬಹಳ ವಿಚಿತ್ರವಾದ ಸಂಗತಿಗಳನ್ನು ಸೇರಿಸಿದ್ದಾರೆ. **"24ಎ. ಪ್ರಶ್ನೆ ಪತ್ರಿಕೆ ಸೋರಿಕೆಯ ನಿಷೇಧ.-** *ಯಾವೊಬ್ಬ ವ್ಯಕ್ತಿಯು, ಪ್ರಶ್ನೆಪತ್ರಿಕೆಯನ್ನು ಸಿದ್ಧಪಡಿಸುವ ಪ್ರಶ್ನೆಪತ್ರಿಕೆಯನ್ನು ಮುದ್ರಿಸುವ ಸಮಯದಲ್ಲಿ ಅಥವಾ ತರುವಾಯ, ಪರೀಕ್ಷೆಗೆ ಮೊದಲು ಅಥವಾ ಪರೀಕ್ಷೆ ನಡೆಯುವ ಅವಧಿಯಲ್ಲಿ, ಪ್ರಶ್ನೆಪತ್ರಿಕೆಗಳ ಅಭಿರಕ್ಷೆ ಮತ್ತು ಸಾಗಾಣಿಕೆಗಳಲ್ಲಿ,- ಅಂದರೆ ಅಭಿರಕ್ಷೆ ಎಂದರೆ, ಅದರಲ್ಲಿ ಎಲ್ಲರೂ ಸೇರುತ್ತಾರೆ. ಮುಂದುವರೆದು,*

*(iii) ಯಾವುದೇ ಪರೀಕ್ಷೆಯಲ್ಲಿ ಬಳಸಲು ಉದ್ದೇಶಿಸಲಾಗಿರುವ ಯಾವುದೇ ಪ್ರಶ್ನೆ ಪತ್ರಿಕೆಯನ್ನು ಕೊಳ್ಳುವುದು, ಮಾರುವುದು ಅಥವಾ ಸಂಗ್ರಹಿಸುವುದು ಅಥವಾ ಹಾಗೆ ಮಾಡುವುದಕ್ಕೆ ಪ್ರಯತ್ನಿಸುವುದು ಅಥವಾ ಅನ್ಯಥಾ; ಅಥವಾ*

*(iv) ಯಾವುದೇ ಪರೀಕ್ಷೆಯಲ್ಲಿ ಬಳಸಲು ಉದ್ದೇಶಿಸಲಾಗಿರುವ ಯಾವುದೇ ಪ್ರಶ್ನೆ ಪತ್ರಿಕೆಯನ್ನು ಹೊಂದಿರುವುದು ಅಥವಾ ಸಂಗ್ರಹಿಸುವುದು ಅಥವಾ ತನಗೆ ಅಥವಾ ಯಾವೊಬ್ಬ ಇತರ ವ್ಯಕ್ತಿಗೆ ಕೊಡುವಂತೆ ಮನವೊಲಿಸುವುದು ಅಥವಾ ಹಾಗೆ ಮಾಡುವಂತೆ ಪ್ರಯತ್ನಿಸುವುದು,*

*- ಈ ಮೂಲಕ ಪ್ರಶ್ನೆ ಪತ್ರಿಕೆಯ ಸೋರಿಕೆಯನ್ನು ಉಂಟುಮಾಡತಕ್ಕದ್ದಲ್ಲ ಅಥವಾ ದುರಾಚರಣೆಯಲ್ಲಿ ತೊಡಗತಕ್ಕದ್ದಲ್ಲ."* ಎಂದು ತಿಳಿಸಿ ಅದರ ವಿವರಣೆಯಲ್ಲಿ

*(ಎ) ಮುದ್ರಿಸುವುದು;*

*(ಬಿ) ಫೋಟೊ ಕಾಪಿ ಮಾಡುವುದು;*

*(ಸಿ) ಛಾಯಾಚಿತ್ರ ತೆಗೆಯುವುದು;*

*(ಡಿ) ಕೈ ಬರವಣಿಗೆ ಅಥವಾ ಬ್ರೈಲ್ ನಮೂನೆಯಲ್ಲಿ; ಅಥವಾ*

*(ಇ) ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000ರಲ್ಲಿ (2000ರ ಕೇಂದ್ರ ಅಧಿನಿಯಮ 21) ಪರಿಭಾಷಿಸಲಾದಂತೆ ಯಾವುದೇ ಸಂಪರ್ಕ ಸಾಧನ ಅಥವಾ ಕಂಪ್ಯೂಟರ್ ಜಾಲತಾಣದ ಮೂಲಕ ಯಾವುದೇ ಪಠ್ಯದ ವಿಡಿಯೋ (ದೃಷ್ಯ), ಆಡಿಯೋ (ಶ್ರವಣ) ಅಥವಾ ಇಮೇಜ್ (ಛಾಯೆ) ಅನ್ನು ತಿಳಿಸುವುದು, ಕಳುಹಿಸುವುದು ಅಥವಾ ರವಾನಿಸುವುದು."* ಎನ್ನುವಂತಹ ವಿವರಣೆಯನ್ನು ಕೊಟ್ಟಿದ್ದಾರೆ. ಆ ವಿವರಣೆಯನ್ನು ನಾನು ಒಪ್ಪಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲಿರುವಂತಹ ಪ್ರಶ್ನೆ, ಶಿಕ್ಷೆ ವಿಚಾರಕ್ಕೆ ಬಂದಂತಹ ಸಂದರ್ಭದಲ್ಲಿ **“115ಎ. 24ಎ ಪ್ರಕರಣದ ಉಲ್ಲಂಘನೆಗಾಗಿ ದಂಡ,–** *24ಎ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯದ ತರುವಾಯ ಮೊದಲನೆಯ ಅಪರಾಧಕ್ಕಾಗಿ ಕನಿಷ್ಠ ಮೂರು ವರ್ಷಗಳ ಅವಧಿಯ ಮತ್ತು ಎರಡನೇ ಅಥವಾ ಮುಂದುವರಿದ ಅಪರಾಧಕ್ಕಾಗಿ ಕನಿಷ್ಠ ಐದು ವರ್ಷಗಳ ಅವಧಿಯ ಕಾರಾವಾಸದಿಂದ ಹಾಗೂ ಎರಡೂ ಸಂದರ್ಭಗಳಲ್ಲಿ ಕನಿಷ್ಠ ಐದು ಲಕ್ಷ ರೂಪಾಯಿಗಳ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.”*

ಅಂದರೆ, ನಾನು ಹೇಳತಕ್ಕಂತಹ ಪ್ರಶ್ನೆಯನ್ನು ಬಹುಶಃ ನಮ್ಮ ಸಚಿವರು ತಪ್ಪಾಗಿ ಅರ್ಥೈಸಿಕೊಂಡಿರಬಹುದು. ನಾನು ಹೇಳಬಯಸುತ್ತಿರುವುದೇನೆಂದರೆ, ಈ provisioin ಇಟ್ಟುಕೊಂಡು ಉಪನ್ಯಾಸಕರು ಮತ್ತು ಶಿಕ್ಷಕರ ಮೇಲೆ ಸುಳ್ಳು ಪ್ರಕರಣಗಳನ್ನು ದಾಖಲಿಸುವುದಕ್ಕೆ ಅವಕಾಶ ಇದೆ. ಅದಕ್ಕೆ ಅವಕಾಶ ಕೊಡಬಾರದು ಎಂದು ನಾನು ಹೇಳುತ್ತಿದ್ದೇನೆ. ಯಾರೋ ಒಬ್ಬ ವ್ಯಕ್ತಿ ಪರೀಕ್ಷಾ ಅಕ್ರಮಗಳನ್ನು ಮಾಡಿದರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಿ, ಆ ವಿಚಾರದಲ್ಲಿ ನಮ್ಮ ಪ್ರಶ್ನೆ ಇಲ್ಲ. ಆದರೆ, ಇಲ್ಲಿರುವ ಪ್ರಶ್ನೆ ಏನೆಂದರೆ, ಇದನ್ನು ಉಪಯೋಗಿಸಿಕೊಂಡು ಶಿಕ್ಷಕರು ಮತ್ತು ಉಪನ್ಯಾಸಕರನ್ನು ಪ್ರಕರಣಗಳಲ್ಲಿ ಸಿಲುಕಿಸುವಂತಹ ಪ್ರಯತ್ನ ಬೇಡ. ನಾನು ಈ ಮಾತನ್ನು ಹೇಳುತ್ತಿರುವುದಕ್ಕೆ ಕಾರಣವೇನೆಂದರೆ, ಈಗಾಗಲೇ ಹಳೆಯ ಕಾಯಿದೆಯಲ್ಲಿ ಒಂದು ಅವಕಾಶ ಇತ್ತು. 6 ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿ ಜುಲ್ಮಾನೆ ಹಾಕುವಂಥದ್ದಿತ್ತು. ಆದರೆ ಆ provision ನ ಅಡಿಯಲ್ಲಿ ಒಂದೇ ಒಂದು ಪ್ರಕರಣದಲ್ಲಿ ಕೂಡ ಶಿಕ್ಷೆ ಆಗಿಲ್ಲ. ಆ ರೀತಿ ಇಲ್ಲದೆ ಇರುವಾಗ ಇಲ್ಲಿ ನಿಮ್ಮ justification ಏನಿದೆ? ಇಲ್ಲಿ ಪ್ರಶ್ನೆ ಇರುವಂಥದ್ದು, ‘ಹೌದು, ಈ ಪ್ರಕರಣಗಳು ಜಾಸ್ತಿಯಾಗಿವೆ, ಶಿಕ್ಷೆಯ ಪ್ರಮಾಣವನ್ನು ಜಾಸ್ತಿ ಮಾಡಿದರೆ ಮಾತ್ರ ಇಂತಹ ಪ್ರಕರಣಗಳನ್ನು ಕಡಿಮೆ ಮಾಡಬಹುದು ಎಂದು ನೀವೇನಾದರೂ ಸಮಜಾಯಿಷಿಯನ್ನು ಕೊಟ್ಟರೆ, justification ಕೊಟ್ಟರೆ ನಾವು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇವೆ. ಆದರೆ ಇವತ್ತಿನವರೆಗೂ ರಾಜ್ಯದಲ್ಲಿ ಅಂತಹ ಒಂದೇ ಒಂದು ಪ್ರಕರಣ ದಾಖಲೆಯಾದಂತಹ ನಿದರ್ಶನ ಇಲ್ಲ. ಅಂತಹ ಸಮಯದಲ್ಲಿ ಇಂತಹ ಹೆಚ್ಚುವರಿ ಶಿಕ್ಷೆ ಏತಕ್ಕೆ ಬೇಕು ಎನ್ನುವ ಪ್ರಶ್ನೆ ನನ್ನದಷ್ಟೇ ಹೊರತು ಶಿಕ್ಷಕರು ಮತ್ತು ಉಪನ್ಯಾಸಕರಿಗೆ ಬೆದರಿಕೆ ಒಡ್ಡಿ ಅಥವಾ ಶಿಕ್ಷೆಯ ಒಂದು ಅಸ್ತ್ರವನ್ನು ತೋರಿಸಿ ಅವರ ಹತ್ತಿರ ಕೆಲಸ ಮಾಡಿಸಿಕೊಳ್ಳುವಂಥದ್ದು ಅಥವಾ ಪರೀಕ್ಷಾ ಅಕ್ರಮದ ಹೆಸರಿನಲ್ಲಿ ಅವರ ಮೇಲೆ ಪ್ರಕರಣವನ್ನು ದಾಖಲಿಸುವಂತಹ ಪ್ರಯತ್ನ ನಡೆಸುವುದು ಬೇಡ ಎನ್ನುವುದು ನನ್ನ ಕಳಕಳಿಯಾಗಿದೆ. ಮುಂದುವರೆದು, ಈ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂತೆ ಇಲ್ಲಿ ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ಬಹುಶಃ ಮಾನ್ಯ ಉಗ್ರಪ್ಪನವರು ಸಹ ಹಿಂದೆ ಇದನ್ನು ಮಾತನಾಡಿದರು. ಇದು ಬೇಡ, ಇದು ಜನತಂತ್ರ ವ್ಯವಸ್ಥೆಗೆ ಮಾರಕ ಎನ್ನುವಂತಹ ಪ್ರಶ್ನೆಯನ್ನು ಅವರು ಎತ್ತಿದ್ದರು.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಖಂಡ 7ರ ಉಪಬಂಧ (iii) ರಲ್ಲಿ *"ಅಭ್ಯರ್ಥಿಯು ಪ್ರಶ್ನೆಪತ್ರಿಕೆ ಸೋರಿಕೆ ಅಥವಾ ಸಾಮಾಹಿಕ ನಕಲಿನಲ್ಲಿ ತೊಡಗಿದ್ದಾನೆಂದು ಅದು ಮನಗಂಡರೆ, ಅಭ್ಯರ್ಥಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ, ಅಭ್ಯರ್ಥಿಯ ಫಲಿತಾಂಶವನ್ನು ತಡೆಹಿಡಿಯುವುದು, ಅಮಾನತ್ತಿನಲ್ಲಿಡುವುದು ಅಥವಾ ರದ್ದುಗೊಳಿಸುವುದು ಅಥವಾ ಮೂರು ವರ್ಷಗಳವರೆಗೆ ತನ್ನ ಪರೀಕ್ಷೆಯನ್ನು ತೆಗೆದುಕೊಳ್ಳುವುದರಿಂದ ಆತನನ್ನು ಉಚ್ಚಾಟಿಸುವ (ಡಿಬಾರ್);'* ಎಂದು ಏನು ಹೇಳಲಾಗಿದೆ ಇದು ಬಹಳ ಪ್ರಮುಖ. ಏನೆಂದರೆ, upto P.U.C. ಮಕ್ಕಳು ಎಂದರೆ, ಅವರು 18 ವರ್ಷಕ್ಕೆ ವಯಸ್ಸಿಗೆ ಬಂದಿರುತ್ತಾರೆ. ಈಗಿರುವಂಥದ್ದು ಸೆಮಿಸ್ಟರ್ ಸಿಸ್ಟಂ. ನೀವು 6 ಸೆಮಿಸ್ಟರ್‌ವರೆಗೆ ಒಬ್ಬ ವಿದ್ಯಾರ್ಥಿಯನ್ನು ಡಿಬಾರ್ ಮಾಡಿದರೆ ಮತ್ತೆ ಆತ ಶಾಲೆ ಕಡೆ ಮುಖ ಮಾಡುತ್ತಾನೆಯೆ? ಆತ ಸಮಾಜದಲ್ಲಿ ಒಬ್ಬ ಕ್ರಿಮಿನಲ್ ಆಗಿ ತಯಾರಾಗುತ್ತಾನೆ. ನೀವು ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಿ, ನಾವು ಬೇಡವೆನ್ನುವುದಿಲ್ಲ. ವಿದ್ಯಾರ್ಥಿಗಳು ಗೊತ್ತಿದ್ದೋ, ಗೊತ್ತಿಲ್ಲದೆಯೋ ತಪ್ಪು ಮಾಡಿದಂತಹ ಸಮಯದಲ್ಲಿ ಅವರನ್ನು 3 ವರ್ಷಗಳವರೆಗೆ ಡಿಬಾರ್ ಮಾಡಿಬಿಟ್ಟರೆ ನೀವು ಮತ್ತೆ ಎಲ್ಲಿ ಅಂತಹ ಮಕ್ಕಳನ್ನು ಶಾಲಾಕಾಲೇಜಿಗೆ ಕರೆದುಕೊಂಡು ಬರುತ್ತೀರಿ? ಈ ವಿಚಾರದಲ್ಲಿ ಈ ಪ್ರಕರಣವನ್ನು ಕೈಬಿಡಬೇಕೆಂದು ತಾವು ಹಿಂದೆ ಸದನದಲ್ಲಿ ಈ ವಿಧೇಯಕವನ್ನು ತಂದಂತಹ ಸಂದರ್ಭದಲ್ಲಿ ನಾವು ಒತ್ತಾಯ ಮಾಡಿದೆವು.

ಮುಂದುವರೆದು ಉಪಬಂಧ *(iv)ರಲ್ಲಿ "ಶೈಕ್ಷಣಿಕ ಸಂಸ್ಥೆ ಅಥವಾ ಪರೀಕ್ಷಾ ಕೇಂದ್ರವು ಪ್ರಶ್ನೆಪತ್ರಿಕೆ ಸೋರಿಕೆ ಅಥವಾ ಸಾಮೂಹಿಕ ನಕಲಿನಲ್ಲಿ ತೊಡಗಿದೆ ಎಂದು ಅದು ಮನಗಂಡರೆ, ಶೈಕ್ಷಣಿಕ ಸಂಸ್ಥೆ ಅಥವಾ ಪರೀಕ್ಷಾ ಕೇಂದ್ರಕ್ಕೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ, ಶೈಕ್ಷಣಿಕ ಸಂಸ್ಥೆ ಅಥವಾ ಪರೀಕ್ಷಾ ಕೇಂದ್ರದ ಮಾನ್ಯತೆಯನ್ನು ಮೂರು ವರ್ಷಗಳ ಅವಧಿಯವರೆಗೆ ಅಮಾನತ್ತಿನಲ್ಲಿಡಲು ಅಥವಾ ಹಿಂಪಡೆಯಲು ಶಿಫಾರಸ್ಸು ಮಡುವ, – ಅಧಿಕಾರಗಳನ್ನು ಹೊಂದಿರತಕ್ಕದ್ದು."* ಅಂದರೆ, ಯಾವುದೋ ಒಂದು ಸಂಸ್ಥೆಯ ಮೇಲೆ ಅಧಿಕಾರಿಗಳಿಗೆ ಏನಾದರೂ ದುರುದ್ದೇಶವಿತ್ತೆಂದ್ದರೆ, ಅದನ್ನು ಉಪಯೋಗಿಸಿಕೊಂಡು ಅವರ ಮಾನ್ಯತೆಯನ್ನು ರದ್ದು ಮಾಡುವಂಥದ್ದು, ಮೂರು ವರ್ಷ ಅಮಾನತ್ತಿನಲ್ಲಿಡುವಂಥದ್ದು, ಇದು ಸಹ ಜನತಂತ್ರ ವ್ಯವಸ್ಥೆಗೆ ವಿರುದ್ಧವಾಗಿರುವಂತಹ ನಿಲುವಾಗುತ್ತದೆ. ಆ ಕಾರಣದಿಂದ ಇವತ್ತಾಗಲೇ ಏನು ಇವರು ಪರೀಕ್ಷಾ ಸಿಸ್ಟಮ್‌ನಲ್ಲಿ ತಂದಿದ್ದಾರೆ, ಸಿ.ಸಿ. ಟಿ.ವಿ.ಗಳನ್ನು ಅಳವಡಿಸುತ್ತಿದ್ದಾರೆ, ರೆವಿನ್ಯೂ ಅಧಿಕಾರಿಗಳಿಗೆ ಅಲ್ಲಿ ಅಧಿಕಾರವನ್ನು ಕೊಟ್ಟಿದ್ದಾರೆ, ಯಾರು ಶಿಕ್ಷಣ ಕ್ಷೇತ್ರದವರಲ್ಲದಿರುವಂತಹ ಬಹುತೇಕ ಹೊರಗಿನ ಅಧಿಕಾರಿಗಳಿಗೆ ಇಡೀ ಪರೀಕ್ಷಾ ವ್ಯವಸ್ಥೆಯನ್ನು ಹಸ್ತಾಂತರ ಮಾಡಿದ್ದಾರೆ, ಇವೆಲ್ಲವನ್ನೂ ಇಟ್ಟುಕೊಂಡು ನೀವು ಕೇವಲ ಶಿಕ್ಷಕರು ಮತ್ತು ಉಪನ್ಯಾಸಕರನ್ನು ಟಾರ್ಗೆಟ್ ಮಾಡಿ ಇಂತಹ ವಿಧೇಯಕವನ್ನು ತಂದರೆ ಬಹುಶಃ ಇದು ಒಳ್ಳೆಯ ಕಾಯಿದೆ ಆಗುವುದಿಲ್ಲ. ದಯಮಾಡಿ ಶಿಕ್ಷಣ ಸಚಿವರು ಇದನ್ನು ಸಹಾನುಭೂತಿಯಿಂದ ಪರಿಗಣಿಸಿ, ನೀವು ಒಳ್ಳೆಯದನ್ನು ಮಾಡುವುದಕ್ಕೆ ಹೊರಟಿದ್ದರೂ ಸಹ ಶಿಕ್ಷಕರು ಮತ್ತು ಉಪನ್ಯಾಸಕರನ್ನು ದಯಮಾಡಿ ಟಾರ್ಗೆಟ್ ಮಾಡಬೇಡಿ. ನೀವು ಕ್ರಮ ತೆಗೆದುಕೊಳ್ಳಿ, ಯಾರೋ ಬ್ರೋಕರ್‌ಗಳು,

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಏಜೆಂಟ್‌ಗಳು ಪ್ರಶ್ನೆಪತ್ರಿಕೆಯನ್ನು ಸೋರಿಕೆ ಮಾಡುತ್ತಾರೆ ಎಂದರೆ, ಅವರಿಗೆ ಶಿಕ್ಷೆ ವಿಧಿಸಿ; ದಂಡ ಹಾಕಿ. ಆದರೆ ಶಿಕ್ಷಕರು ಮತ್ತು ಉಪನ್ಯಾಸಕರನ್ನು ಇದಕ್ಕೆ ಬಲಿಪಶು ಮಾಡುವುದು ಬೇಡ ಎಂದು ನಾನು ಈಗಲೂ ಸಹ ಸರ್ಕಾರಕ್ಕೆ ಮನವಿ ಮಾಡುತ್ತೇನೆ. ದಯಮಾಡಿ ಈ ತಿದ್ದುಪಡಿ ವಿಧೇಯಕ ಜನತಂತ್ರ ವ್ಯವಸ್ಥೆಗೆ ವಿರೋಧ ಇರುವುದರಿಂದ ಇದನ್ನು ದಯಮಾಡಿ ವಾಪಸ್ ತೆಗೆದುಕೊಳ್ಳಬೇಕೆಂದು ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಈ ಮೊದಲು ಮಂಡನೆ ಮಾಡಲಾಗಿದ್ದ ವಿಧೇಯಕವನ್ನೇ ಸರ್ಕಾರ ಇವತ್ತು ಸಹ ಮಂಡನೆ ಮಾಡಿದೆ. ಈ ಮೊದಲು ಜಾರಿಯಲ್ಲಿದ್ದ ಕಾನೂನಿನ ಅಡಿಯಲ್ಲಿ ಇಂತಹ ಅಕ್ರಮಗಳನ್ನು ಮಾಡಿದವರ ಮೇಲೆ ಯಾರಿಗಾದರೂ ಶಿಕ್ಷೆ ವಿಧಿಸಲಾಗಿದೆಯೇ? ಇದುವರೆಗೆ ಆ ರೀತಿ ಎಷ್ಟು ಜನ ಸಿಕ್ಕಿಹಾಕಿಕೊಂಡಿದ್ದಾರೆ? ಈ ಮೊದಲಿದ್ದ ಕಾನೂನನ್ನು ಯಾವಾಗಲಾದರೂ ಉಪಯೋಗಿಸಲಾಗಿದೆಯೇ? ಕೊಲೆ ಮಾಡಬಾರದು ಎಂದು ಕಾನೂನಿದೆ, ಆದರೆ ಕೊಲೆಗಳಾಗುವುದು ನಿಂತುಹೋಗಿದೆಯೇ? ನಿಲ್ಲುವುದಿಲ್ಲ. ನೀವು ಕಾನೂನಿನ ಮುಖಾಂತರ ಶಿಕ್ಷಣ ಇಲಾಖೆಯಲ್ಲಿ ಈ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಶಿಕ್ಷಣ ಇಲಾಖೆ ಇರುವುದೇ ಒಳ್ಳೆಯ ಬುದ್ಧಿಯನ್ನು ಕಲಿಸುವುದಕ್ಕೆ. ಆ ರೀತಿ ಒಳ್ಳೆಯ ಬುದ್ಧಿಯನ್ನು ಕಲಿಸತಕ್ಕಂಥವರಿಗೆ ಶಿಕ್ಷಣ ಇಲಾಖೆಯೊಳಗೆ ನಮ್ಮ ಸರ್ಕಾರದಲ್ಲಿ ಸಮರ್ಥ ಅಧಿಕಾರಿಗಳಿದ್ದಾರೆ. I don’t deny it. ನಮ್ಮ ಶಿಕ್ಷಣ ಇಲಾಖೆಯಲ್ಲಿ ಸಮರ್ಥ ಅಧಿಕಾರಿಗಳಿದ್ದಾರೆ. ಈ ಅಧಿಕಾರಿಗಳು ಮನಸ್ಸು ಮಾಡಿದರೆ ಪರೀಕ್ಷೆಗಳಲ್ಲಿ ಕಾಪಿ ಮಾಡುವುದಕ್ಕಾಗಲಿ, ಮೋಸ ಮಾಡುವುದಕ್ಕಾಗಲಿ, ಮೌಲ್ಯಮಾಪನದಲ್ಲಿ ಅಕ್ರಮಗಳಾಗುವುದಕ್ಕಾಗಲಿ ಆಗುವುದಿಲ್ಲ. ಮಾನ್ಯ ಸಚಿವರೂ ಸಮರ್ಥರಿದ್ದಾರೆ, in my opinion, I have seen the best Minister in the Government and I congratulate the Education Minister. ಅವರು ಮನಸ್ಸು ಮಾಡಿದರೆ ಶಿಕ್ಷಣ ಇಲಾಖೆಯಲ್ಲಿ ಈ ರೀತಿ ಕೆಟ್ಟ ಕೆಲಸಗಳಾಗದಿರುವಂತೆ ನೋಡಿಕೊಳ್ಳಬಹುದು. ಆದ್ದರಿಂದ ಅನವಶ್ಯಕವಾಗಿ ಅವರು ಗೊಂದಲ ಮಾಡುತ್ತಿದ್ದಾರೆ. ಈಗಾಗಲೇ ಇರುವಂತಹ ಹಳೆಯ ಕಾನೂನೇ ಸಾಕಾಗಿತ್ತು, ಅದನ್ನೇ ಉಪಯೋಗಿಸುವುದಕ್ಕಾಗುತ್ತಿರಲಿಲ್ಲ. ಆದ್ದರಿಂದ ಹಳೆಯ ಕಾನೂನಿನ ಅಡಿಯಲ್ಲಿಯೇ ನಮ್ಮ ಕೈಯಲ್ಲಿ ಮಾಡುವುದಕ್ಕಾಗದೆ ಹೋದರೆ, ಬೇಕಾದರೆ ಮುಂದೆ ತೆಗೆದುಕೊಂಡು ಬನ್ನಿ. ಹಳೆಯ ಕಾನೂನನ್ನು ಉಪಯೋಗಿಸಿ ನೀವು ಅವರನ್ನು ನಿಯಂತ್ರಣ ಮಾಡುವುದಕ್ಕಾಗದೆ ಹೋದರೆ ಈ ಕಾನೂನನ್ನು ತರಬಹುದೇ ವಿನಃ, ನನಗೆ ಮಾನ್ಯ ಸಚಿವರ ಮೇಲೆ ಸಂಪೂರ್ಣವಾದ ನಂಬಿಕೆ ಇದೆ. ಇವತ್ತು ಶಿಕ್ಷಣ ಇಲಾಖೆಯಲ್ಲಿ ಒಳ್ಳೆಯ ಅಧಿಕಾರಿಗಳಿದ್ದಾರೆ. ಅಧಿಕಾರಿಗಳು ಮನಸ್ಸು ಮಾಡಿದರೆ, ಅಲ್ಲಿ–ಇಲ್ಲಿ ಕೆಲವು ಕಡೆ ಕೆಳಮಟ್ಟದಲ್ಲಿ ಲಂಚಾವತಾರ ನಡೆಯುತ್ತಿದೆ. ಅದನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಆದರೆ ನೀವು ಮನಸ್ಸು ಮಾಡಿದರೆ ಈ ಹೊಸ ತಿದ್ದುಪಡಿ ವಿಧೇಯಕವನ್ನು ತರುವುದು ಬೇಕಾಗಿಲ್ಲ ಎಂದು ನನಗನಿಸುತ್ತಿದೆ. ನೀವು ಹೇಗೆ ನಡೆಸುತ್ತೀರಿ ಎನ್ನುವುದು ನಿಮಗೆ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬಿಟ್ಟದ್ದು. ಬೇಕಾದರೆ ಈ ತಿದ್ದುಪಡಿ ವಿಧೇಯಕವನ್ನು ವಾಪಸ್ ತೆಗೆದುಕೊಂಡುಬಿಟ್ಟರೆ ಬಹಳ ಒಳ್ಳೆಯದು ಎಂದು ನಾನು ಸಲಹೆ ಕೊಡುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ಪ್ರಶ್ನೆಪತ್ರಿಕೆ ಸೋರಿಕೆಯಾಗುತ್ತಿದೆ, ಅದನ್ನು ನಿಲ್ಲಿಸಬೇಕು ಎನ್ನುವ ಕಾರಣಕ್ಕಾಗಿ ಮತ್ತು ಇರುವ ಕಾನೂನನ್ನು ಸಬಲಗೊಳಿಸುವುದಕ್ಕಾಗಿ ಈ ಬಿಲ್ಲನ್ನು ಹಿಂದಿನ ಸದನದಲ್ಲಿ ಮಂಡನೆ ಮಾಡಿ ಆ ಸಮಿತಿಗೆ ಕಳುಹಿಸಿದ್ದರು. ಅದಾದ ಮೇಲೆ ಆ ಸಮಿತಿಯವರು ಸಾಕಷ್ಟು ವಿಮರ್ಶೆಯನ್ನು ಮಾಡಿಕೊಂಡು ತಿದ್ದುಪಡಿಗಳೊಂದಿಗೆ ಮತ್ತೆ ಮಂಡನೆ ಮಾಡಿದ್ದಾರೆ. ಆ ಸಂದರ್ಭದಲ್ಲಿ ನಾವು ಏನು ಮಾತನಾಡಿದ್ದೆವೋ ಅದರಲ್ಲಿ ಕೆಲವು ಅಂಶಗಳನ್ನು ಸೇರಿಸಿಕೊಂಡಿದ್ದಾರೆ, ಕೆಲವು ಅಂಶಗಳನ್ನು ಸೇರಿಸಿಕೊಂಡಿಲ್ಲ. ನನ್ನ ಮೊದಲನೆಯ observation ಇರುವಂತಹದ್ದು **"115ಎ. 24ಎ ಪ್ರಕರಣದ ಉಲ್ಲಂಘನೆಗಾಗಿ ದಂಡ,-** *24ಎ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯದ ತರುವಾಯ ಮೊದಲನೆಯ ಅಪರಾಧಕ್ಕಾಗಿ ಕನಿಷ್ಠ ಮೂರು ವರ್ಷಗಳ ಅವಧಿಯ ಮತ್ತು ಎರಡನೇ ಅಥವಾ ಮುಂದುವರಿದ ಅಪರಾಧಕ್ಕಾಗಿ ಕನಿಷ್ಠ ಐದು ವರ್ಷಗಳ ಅವಧಿಯ ಕಾರಾವಾಸದಿಂದ ಹಾಗೂ ಎರಡೂ ಸಂದರ್ಭಗಳಲ್ಲಿ ಕನಿಷ್ಠ ಐದು ಲಕ್ಷ ರೂಪಾಯಿಗಳ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು."* ಎಂದು ಇದೆ. ಎರಡನೇ ಬಾರಿ ಅವನಿಗೆ ಏಕೆ ಅವಕಾಶವನ್ನು ನೀಡುತ್ತೀರಿ. ಒಂದು ಬಾರಿ ಅವನಿಗೆ ಮೂರು ವರ್ಷಗಳ ಕಾರಾವಾಸ ಶಿಕ್ಷೆಯಾಗಿ ಅವನಿಗೆ ಒಂದು ಲಕ್ಷ ರೂ. ಜುಲ್ಮಾನೆ ಹಾಕಿದ ಮೇಲೆ ಮತ್ತೆ ಅವನನ್ನು ಮೌಲ್ಯಮಾಪನ ಮಾಡುವುದಕ್ಕೆ ಪರೀಕ್ಷಾ ಕಾರ್ಯಕ್ಕೆ ಹಾಕುತ್ತೀರಿ ಎನ್ನುವುದಾದರೆ ನಿಮ್ಮ ಉದ್ದೇಶ ಏನಿದೆ?

***(266) 17.03.2017 02.00 SV-GR***

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮುಂದು. ವಿದ್ಯಾರ್ಥಿಯು ಪರೀಕ್ಷೆಯಲ್ಲಿ ತಪ್ಪು ಮಾಡಿದರೆ ಮೂರು ವರ್ಷ ಡಿಬಾರ್ ಮಾಡಲಾಗುತ್ತದೆ. ಯಾರೋ ಒಬ್ಬ ಅಧಿಕಾರಿ ತಪ್ಪು ಕೆಲಸ ಮಾಡಿ ಸಿಕ್ಕಿ ಹಾಕಿಕೊಂಡ ಮೇಲೆ ಅಂತಹವರಿಗೆ ಎರಡನೇ ಅವಕಾಶವನ್ನು ಮಾನ್ಯ ಶಿಕ್ಷಣ ಸಚಿವರು ನೀಡುತ್ತಾರೆಯೇ? ಎರಡನೇ ಬಾರಿ ಸಿಕ್ಕಿ ಹಾಕಿಕೊಂಡರೆ ಐದು ಲಕ್ಷ ಜುಲ್ಮಾನೆ ಮತ್ತು ಶಿಕ್ಷೆ. ಒಂದು ಬಾರಿ ಸಿಕ್ಕಿಹಾಕಿಕೊಂಡು ತಪ್ಪಿತಸ್ಥ ಎಂದು ಸಾಬೀತಾದ ಮೇಲೆ ಎರಡನೇ ಬಾರಿಗೆ ಅವರಿಗೆ ಅವಕಾಶವನ್ನು ಕೊಡುವ ಪ್ರಶ್ನೆಯೇ ಇಲ್ಲ. ಇದನ್ನು ಶಿಕ್ಷಣ ಸಚಿವರು ಹೇಗೆ ಸೇರಿಸಿಕೊಂಡಿದ್ದಾರೆ? ದಯವಿಟ್ಟು ಇದನ್ನು ತಿದ್ದುಪಡಿ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಎಲ್ಲೋ ಒಂದು ಕಡೆ ಮತ್ತೆ ಮತ್ತೆ ಇಲಾಖೆ ಅಧಿಕಾರಿಗಳಿಗೆ ಇದನ್ನು ಮಾಡಲು ಅವಕಾಶ ಕೊಟ್ಟಾಗ ಅವರು ಆರಾಮವಾಗಿ ದುಡ್ಡು ಕಾಸು ಮಾಡಿಕೊಂಡು ಮಾಡಬಾರದ್ದನ್ನು ಮಾಡಿಕೊಂಡು ಎರಡನೇ ಬಾರಿಗೆ ಮತ್ತೆ ಬರುತ್ತಾರೆ. ಆದ್ದರಿಂದ ಒಂದು ಬಾರಿ ಸಿಕ್ಕಿಹಾಕಿಕೊಂಡು ತಪ್ಪಿತಸ್ಥನೆಂದು ಸಾಬೀತಾದರೆ ಯಾವುದೇ ಕಾರಣಕ್ಕೂ ಎರಡನೇ ಬಾರಿಗೆ ಅವಕಾಶವನ್ನು ನೀಡಬಾರದು. ಇದನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ದಯವಿಟ್ಟು ತಿದ್ದುಪಡಿ ಮಾಡಬೇಕು. ಇದನ್ನು ಏಕೆ ಪರಿಶೀಲನಾ ಸಮಿತಿಯವರು ನೋಡಿಲ್ಲ ಎಂಬುದು ನನಗೆ ಗೊತ್ತಿಲ್ಲ.

ಇನ್ನು ಎರಡನೆಯದಾಗಿ ವಿದ್ಯಾರ್ಥಿಗಳನ್ನು ಮೂರು ವರ್ಷ ಡಿಬಾರ್ ಮಾಡಿದರೆ ಅವರ ಗತಿ ಏನು? ನಿನ್ನೆಯೋ, ಮೊನ್ನೆಯೋ ಮೊಬೈಲ್‌ನಲ್ಲಿ ಒಂದು ವೀಡಿಯೋ ಹರಿದಾಡುತ್ತಿತ್ತು. ರಾಯಚೂರಿನಲ್ಲಿ ಯಾರೋ ಒಬ್ಬ ಶಿಕ್ಷಕರು ಮೊಬೈಲ್ ಕೊಟ್ಟು ವಿದ್ಯಾರ್ಥಿಗಳಿಂದ ಉತ್ತರ ಬರೆಸುತ್ತಿದ್ದರು. ಅವರ ಮೇಲೆ ಮಾನ್ಯ ಶಿಕ್ಷಣ ಸಚಿವರು ಕ್ರಮವನ್ನು ತೆಗೆದುಕೊಂಡಿದ್ದಾರೆ. ಮಕ್ಕಳಿಗೆ ಈ ರೀತಿ ಮಾಡುವಂತೆ ಪ್ರೇರಣೆ ಕೊಡುವವರು ಇದ್ದರೆ, ಆ ಮಕ್ಕಳನ್ನು ಮೂರು ವರ್ಷ ಡಿಬಾರ್ ಮಾಡಿದರೆ ಆ ಮೇಲೆ ಮಕ್ಕಳು ಏನು ಮಾಡಬೇಕೆಂಬುದು ಮಾನ್ಯ ಸಚಿವರ ಇಚ್ಛೆ? ದಯವಿಟ್ಟು ಮಕ್ಕಳನ್ನು ಡಿಬಾರ್ ಮಾಡುವಾಗ ಆರು ತಿಂಗಳು, ವರ್ಷ ಎಂದು ಮಾಡಿ, ಆದರೆ ಮೂರು ವರ್ಷ ಡಿಬಾರ್ ಮಾಡುವುದು ಸರಿಯಲ್ಲ. ಯಾವುದೇ ಕಾರಣವಿರಲಿ ಅವರು ನಮ್ಮ ಮನೆಯ ಮಕ್ಕಳು ಎಂದು ಆಲೋಚನೆ ಮಾಡಿ. ಯಾವುದೋ ಸಣ್ಣ ತಪ್ಪಿನಿಂದ ಅವನು ಸಿಕ್ಕಿಹಾಕಿಕೊಂಡಿರುತ್ತಾನೆ. ಮೂರು ವರ್ಷ ಡಿಬಾರ್ ಮಾಡಿದರೆ ಆ ಮಗುವಿನ ಗತಿ ಏನಾಗಬೇಕು? ಹಾಗಾಗಿ ಪರೀಕ್ಷಾ ಅವ್ಯವಹಾರವನ್ನು ಬಿಗಿ ಮಾಡಬೇಕೆಂದರೆ ಮೊದಲು ತಮ್ಮ ಇಲಾಖೆಯನ್ನು ಬಿಗಿಗೊಳಿಸಬೇಕಾಗುತ್ತದೆ. ಪರೀಕ್ಷೆ ಆರಂಭವಾಗುವುದಕ್ಕೆ ಅರ್ಧ ಗಂಟೆ ಮುಂಚೆ ಉಪನ್ಯಾಸಕರ ಕೈಗೆ ಪ್ರಶ್ನೆಪತ್ರಿಕೆ ಸಿಗುತ್ತದೆ. ಅದಕ್ಕಿಂತ ಮುಂಚೆ ಮಾನ್ಯ ಶಿಕ್ಷಣ ಸಚಿವರ ಕೈಯಲ್ಲೇ ಅಧಿಕಾರವಿರುತ್ತದೆ. ಇಡೀ ವಿಧೇಯಕವನ್ನು ಓದಿದಾಗ ಈ ಎಲ್ಲಾ ಅವ್ಯವಸ್ಥೆಗೆ ಉಪನ್ಯಾಸಕರೇ ಕಾರಣ ಎಂಬ ಭಾವನೆ ಬರುತ್ತದೆ. ಆದರೆ ಉಪನ್ಯಾಸಕರ ಕೈಗೆ ಪ್ರಶ್ನೆಪತ್ರಿಕೆ ಬರುವುದು ಕೊನೆಯ ಅರ್ಧಗಂಟೆಯಲ್ಲಿ ಮಾತ್ರ. ಅವರೂ ತಪ್ಪು ಮಾಡಿ ಸಿಕ್ಕಿ ಹಾಕಿಕೊಂಡರೆ ಅವರಿಗೂ ಶಿಕ್ಷೆ ನೀಡಿ, ನಮ್ಮದೇನು ಅಭ್ಯಂತರವಿಲ್ಲ. ಅದನ್ನು ಸರಿಮಾಡದೆ ಒಂದು ಬಾರಿ ತಪ್ಪು ಮಾಡಿದವರಿಗೆ ಮತ್ತೊಂದು ಬಾರಿ ಅವಕಾಶವನ್ನು ಕೊಡುವುದು; ಮಕ್ಕಳು ಎಡವಿ ಬಿದ್ದರೆ ಅವರು ಏಳದಂತೆ ಮೂರು ವರ್ಷ ಶಿಕ್ಷೆ ಕೊಡುವುದು ಇದು ಸ್ವಲ್ಪ ಜಾಸ್ತಿಯಾಯಿತು ಎಂದು ಭಾವಿಸುತ್ತೇನೆ. ಇದನ್ನು ಸಮಿತಿಯವರು ಏಕೆ ಗಮನಿಸಿಲ್ಲವೋ ಗೊತ್ತಿಲ್ಲ. ದಯವಿಟ್ಟು ಈ ಬದಲಾವಣೆ ತೆಗೆದುಕೊಂಡು ಬಂದು ಪರೀಕ್ಷಾ ಅವ್ಯವಹಾರಕ್ಕೆ ಒಂದು ಇತಿಶ್ರೀ ಹಾಡಬೇಕೆಂಬ ತಮ್ಮ ಪರಿಕಲ್ಪನೆ ಏನಿದೆ, ಅದನ್ನು ಖಂಡಿತವಾಗಿ ಒಪ್ಪಿಕೊಳ್ಳುತ್ತೇವೆ. ನಾವು ಯಾರೂ ಪರೀಕ್ಷಾ ಅವ್ಯವಹಾರವನ್ನು ಸಮರ್ಥನೆ ಮಾಡುತ್ತಿಲ್ಲ. ಯಾರೇ ಸಿಕ್ಕಿಹಾಕಿಕೊಂಡರೂ ಶಿಕ್ಷೆ ಆಗಬೇಕು. ಸ್ವಲ್ಪ ಇದರ ಬಗ್ಗೆ ವಿಮರ್ಶೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಪರೀಕ್ಷಾ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರಬೇಕು ಮತ್ತು ಪ್ರತಿಭೆಗೆ, ಮೆರಿಟ್‌ಗೆ ಹೆಚ್ಚು ಒತ್ತು ಸಿಗಬೇಕೆಂದು ಹೇಳಿ ಸರ್ಕಾರ ಈ ಒಂದು ಕಾನೂನು ತರಲು ಮುಂದಾಗಿರುವುದು ನಿಜಕ್ಕೂ ಮೆಚ್ಚತಕ್ಕಂತಹ ವಿಚಾರ ಎಂದು ಹೇಳಿ ನಾನಾದರೂ ಭಾವಿಸಿದ್ದೇನೆ. ಈ ರೀತಿಯ ಪ್ರಯತ್ನ ನಿಜಕ್ಕೂ ಸ್ವಾಗತಾರ್ಹ. ಆದರೆ ಅದನ್ನು ಮಾಡುವಂತಹ ಸಂದರ್ಭದಲ್ಲಿ ಈ ವಿಧೇಯಕದಲ್ಲಿರುವ ಕೆಲವು

ಪ್ರಾವಿಷನ್ಸ್‌ಗಳ ಬಗ್ಗೆ ಸ್ವಲ್ಪ ಗಮನ ಹರಿಸಬೇಕು. ನಾನು ಸಹ ಒಂದು ಕಾಲೇಜಿನಲ್ಲಿ ಆರು ವರ್ಷಗಳ ಕಾಲ ಪ್ರಾಧ್ಯಾಪಕನಾಗಿ ಕಾರ್ಯ ನಿರ್ವಹಿಸಿರುವ ಹಿನ್ನೆಲೆಯಲ್ಲಿ ಈ ವಿಧೇಯಕದಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಇಡೀ ವ್ಯವಸ್ಥೆಗೆ ಮಾರಕವಾಗುವಂತಹ ವಿಚಾರಗಳು ಹೆಚ್ಚಿವೆ ಎಂದು ಭಾವಿಸುತ್ತೇನೆ. ಈ ವಿಧೇಯಕದಲ್ಲಿ ಮೂರು-ನಾಲ್ಕು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯದಾಗಿ ಪರೀಕ್ಷಾ ಕೆಲಸಕ್ಕೆ ಅಡಚಣೆ ಮಾಡಿದರೆ ಅಂತಹವರ ವಿರುದ್ಧ ಕ್ರಮ ಜರುಗಿಸುವಂತಹದ್ದು. ಎರಡನೆಯದು ಪ್ರಶ್ನೆಪತ್ರಿಕೆಗಳನ್ನು ಯಾವುದಾದರೂ ರೀತಿಯಲ್ಲಿ ಲೀಕ್ ಮಾಡಿದರೆ ಅದಕ್ಕೆ ಕ್ರಮ ಜರುಗಿಸುವಂತಹದ್ದು. ಇದು ಪ್ರಮುಖವಾಗಿ ಇದರಲ್ಲಿ ಪ್ರಸ್ತಾಪ ಮಾಡಿರುವ ವಿಚಾರ. ಆದರೆ ನನಗೆ ಈಗಲೂ ಸಹ ಅರ್ಥವಾಗುತ್ತಿಲ್ಲ. ಪ್ರಶ್ನೆಪತ್ರಿಕೆಗಳು ಲೀಕ್ ಆಗುವುದು ಯಾವ ಪರೀಕ್ಷೆಯಲ್ಲಿ? ಬಹುತೇಕ ಒಂದು ಎಸ್.ಎಸ್.ಎಲ್.ಸಿ., ಮತ್ತೊಂದು ಪಿ.ಯು.ಸಿ., ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಎಂ.ಡಿ., ಎಂ.ಎಸ್., ನಲ್ಲಿ ಇದೇ ರೀತಿಯಾಗಿ ಮಾಲ್‌ಪ್ರಾಕ್ಟೀಸ್ ನಡೆದು 11 ಬಾರಿ ಅನುತ್ತೀರ್ಣರಾಗಿದ್ದವರಿಗೆ ಪ್ರಥಮದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆಂದು ಎಂ.ಡಿ., ಸೀಟು ಕೊಟ್ಟಿದ್ದರು. ಭಾರತೀಯ ಜನತಾ ಪಾರ್ಟಿ ಅಧಿಕಾರದಲ್ಲಿದ್ದಾಗ ನಾನು ವಿರೋಧಪಕ್ಷದ ನಾಯಕನಾಗಿದ್ದಾಗ ಬಹುಶಃ ಅದೊಂದೇ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವ ಪ್ರಯತ್ನ ನಡೆದಿತ್ತು. ಆದರೆ ಈಗ ಅದು ಏನಾಗಿದೆ ಎಂಬುದು ಇಲ್ಲಿಯವರೆವಿಗೂ ತಿಳಿದು ಬಂದಿಲ್ಲ. ಏಕೆಂದರೆ ಕಾನೂನನ್ನು ಒಂದು ಬಾರಿ ಜಾರಿ ಮಾಡಿದ ಮೇಲೆ ಅದರ ಪರಿಣಾಮ ಜಾರಿಗೆ ಬರುತ್ತದೆ. ಒಂದೊಂದು ಬಾರಿ ಬರುತ್ತದೆ, ಒಂದೊಂದು ಬಾರಿ ಬರುವುದಿಲ್ಲ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರು ವಿದ್ಯಾರ್ಥಿಗಳ ಬಗ್ಗೆ ಹೇಳುತ್ತಿದ್ದಾರಲ್ಲ, ಯಾರು ಈ ಕೆಲಸವನ್ನು ಮಾಡಿದರೋ ಅವರ ಹೆಸರನ್ನೂ ಸಹ ಹೇಳಲಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಇದು ಈಗ ಒಂದು ಗಂಟೆಯ ಮುಂಚೆ ನಡೆದ ಘಟನೆಯಷ್ಟೆ. ನಮ್ಮ ಸ್ನೇಹಿತರೊಬ್ಬರು ಸಿಗರೇಟನ್ನು ಸೇದುತ್ತಿದ್ದರು; ಅವರ ಹೆಸರನ್ನು ಪ್ರಸ್ತಾಪಿಸುವುದು ಬೇಡ. ಸಾರ್ವಜನಿಕ ಕಛೇರಿಗಳಲ್ಲಿ ಧೂಮಪಾನ ಮಾಡುವುದು ಕಾನೂನುಬಾಹಿರ. ಅಂತಹವರಿಗೆ ಶಿಕ್ಷೆಯಾಗಬೇಕು ಎಂದು ಹೇಳಿ ಇದೇ ಸದನದಲ್ಲಿ ಕಾನೂನು ಮಾಡಿದೆ. ಆದರೆ ಅದೇ ಸದನದ ಪಕ್ಕದಲ್ಲಿ ನಾವು ಸಿಗರೇಟನ್ನು ಸೇದುತ್ತೇವೆ. ಬಹುಶಃ ಒಂದು ಸಂದೇಶ ಹೋಗಲಿ ಎನ್ನುವ ಸದುದ್ದೇಶದಿಂದ ಈ ಘಟನೆಯನ್ನು ಹೇಳುತ್ತಿದ್ದೇನೆ.

**ಡಾ: ಜಯಮಾಲ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಸ್ಮೋಕಿಂಗ್ ಜೋನ್ ಎಂದೇ ಇದೆಯಲ್ಲ?

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಅದರ ಬಗ್ಗೆ ನನಗೆ ಗೊತ್ತಿಲ್ಲ. ಮಾನ್ಯ ಸದಸ್ಯರಿಗೆ ಅಭ್ಯಾಸವಿದ್ದಲ್ಲಿ....

**ಡಾ: ಜಯಮಾಲ:–** ಮಾನ್ಯ ಸಭಾಪತಿಯವರೆ, ಸಿಗರೇಟ್ ಸೇದುತ್ತೀರಿ ಎಂದು ಹೇಳಿ ನಿಮಗೇನಾದರೂ ಅಭ್ಯಾಸವಿದೆಯೇ ಎಂದು ನಮ್ಮನ್ನು ಕೇಳುತ್ತಿದ್ದಾರಲ್ಲವೆ? ಅವರದನ್ನೆಲ್ಲಾ ನಮ್ಮ ಮೇಲೆ ಏಕೆ ಹೊರಿಸುತ್ತಿದ್ದಾರೆ? ಕೆಳಮನೆಗೆ ಮೊನ್ನೆ ಹೋದಾಗ ಸ್ಮೋಕಿಂಗ್ ಜೋನ್ ಇರುವುದನ್ನು ನಾವು ನೋಡಿದ್ದೇವೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಮೇಲ್ಮನೆಯ ಬಗ್ಗೆ ಮಾತನಾಡುತ್ತಿದ್ದೇನೆ.

**ಡಾ: ಜಯಮಾಲ:–** ಮಾನ್ಯ ಸಭಾಪತಿಯವರೆ, ಮೇಲ್ಮನೆಯಲ್ಲಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಎಲ್ಲೋ ಒಂದು ಕಡೆ ನಾವು ಮಾಡತಕ್ಕಂತಹ ಕಾನೂನು, ಮಾಡುವಂತಹವರ ಮೇಲೆ ನಾವು ಮೊದಲು ಪ್ರಯೋಗ ಮಾಡಿಕೊಂಡು ನಂತರ ಅದಕ್ಕೆ ಸಮ್ಮತಿ ಕೊಡುವಂತಹದ್ದು. ಹಾಗೆ ಬಹಳಷ್ಟು ಜನ ನನ್ನ ಸನ್ಮಿತ್ರರು ಇಲ್ಲಿ ಆ ವರ್ಗವನ್ನು ಪ್ರತಿನಿಧಿಸುವಂತಹವರಿದ್ದಾರೆ. ಬೇರೆ ಬೇರೆ ಕಾರಣಗಳಿಂದ ವಿದ್ಯಾರ್ಥಿಗಳ ಜೊತೆಯಲ್ಲಿ ಸಂಪರ್ಕದಲ್ಲಿರುವವರು ಇದ್ದಾರೆ. ನಾನು ಬಿ.ಎಸ್.ಸಿ., (ಮ್ಯಾಥಮ್ಯಾಟಿಕ್ಸ್) ಪದವಿಯಲ್ಲಿ ಪ್ರಥಮ ದರ್ಜೆ ಗಳಿಸಿದ್ದೆ. ಎಂ.ಎಸ್.ಸಿ.(ಮ್ಯಾಥಮ್ಯಾಟಿಕ್ಸ್) ಸೇರಿಕೊಂಡು ನಂತರ ಬಿಟ್ಟೆ. ಇವತ್ತು ಅದರ ಎ, ಬಿ, ಸಿ, ಡಿ ಗೊತ್ತಿಲ್ಲ. ಕಾಸ್ ತೀಟ, ಸೈನ್ ತೀಟ, ಆ ತೀಟ, ಈ ತೀಟ ಎಂದರೆ ಏನೆಂದು ಹೇಳುವುದಕ್ಕಾಗುವುದಿಲ್ಲ. ಪ್ರತಿಷ್ಠಿತ ಶಾಲಾ ಕಾಲೇಜುಗಳಲ್ಲಿ ಉನ್ನತ ವ್ಯಾಸಂಗ ಮಾಡಬೇಕಾದರೆ ಅಥವಾ ಪಿ.ಯು.ಸಿ.ಗೆ ಸೀಟು ಸಿಗಬೇಕಾದರೆ ವಿದ್ಯಾರ್ಥಿಗೆ ಶೇ.90ರ ಮೇಲ್ಪಟ್ಟು ಅಂಕವಿದ್ದರೆ ಮಾತ್ರ ಕೊಡುವುದು ಎಂದು ಕೆಲವು ಕಾಲೇಜುಗಳಲ್ಲಿ ಹೇಳಲಾಗುತ್ತದೆ. ಎಂ.ಬಿ.ಬಿ.ಎಸ್ ಅಥವಾ ಇಂಜಿನಿಯರಿಂಗ್ ಪದವಿ ವ್ಯಾಸಂಗಕ್ಕೆ ಆ ಮಾರ್ಕ್ಸ್ ಅನ್ನೂ ಸಹ ಗಣನೆಗೆ ತೆಗೆದುಕೊಳ್ಳಬೇಕು ಎಂದು ಇದೆ.

*(267)/17-03-2017/2-10/RC-GR*

**ಶ್ರೀ ವಿ.ಎಸ್.ಉಗ್ರಪ್ಪ:–** ಮುಂದು. ಎನ್.ಆರ್.ಐ., ಮೆಡಿಕಲ್ ಸೀಟು ಬೇಕೆಂದರೆ ಕೋಟಿಗಟ್ಟಲೆ ಹಣ ಕೊಡಬೇಕು. ಅದಕ್ಕೋಸ್ಕರ ಏನು ಮಾಡುತ್ತಾರೆಂದರೆ, ಇಲ್ಲಿ ಏನಾದರು ಮಾಡಿ ಸ್ವಲ್ಪ ಮಾರ್ಕ್ಸ್ ಹೆಚ್ಚಿಗೆ ತೆಗೆದುಕೊಂಡರೆ, ಯಾವುದಾದರು ಮೆಥೆಡ್‌ನಲ್ಲಿ..

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೇ, ತಾವು ವಿಧೇಯಕದ ಬಗ್ಗೆ ಮಾತನಾಡಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ನಾನು ವಿಧೇಯಕಕ್ಕೆ ಸಂಬಂಧಪಟ್ಟಂತೆ ಅಂಕಗಳ ಬಗ್ಗೆ ಮಾತನಾಡುತ್ತಿದ್ದೇನೆಯೇ ವಿನಃ ಕೇಂದ್ರಕ್ಕೆ ಏನು ಹೋಗಲಿಲ್ಲವಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಉಪ ಸಭಾಪತಿಯವರು:-** ಬೇಡ. ನೀವು ಮಾಡಿದಂತಹ ಡಿಗ್ರಿಗಳ ಬಗ್ಗೆ ಮಾತನಾಡಬೇಡಿ. ವಿಧೇಯಕದ ಬಗ್ಗೆ ಹೇಳಿಬಿಡಿ. ಈ ವಿಧೇಯಕದಲ್ಲಿ ಏನು ಮಾಡಬೇಕು ಎಂಬುದನ್ನು ತಿಳಿಸಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ವಿಧೇಯಕದ ಬಗ್ಗೆ ಮಾತನಾಡುವಾಗಲು restriction ಹಾಕಿದರೆ ಹೇಗೆ?

**ಉಪ ಸಭಾಪತಿಯವರು:-** ನೀವು ಪ್ರಾರಂಭವನ್ನು ಚೆನ್ನಾಗಿ ಮಾಡಿದಿರಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನಾವು ಪ್ರೈಮರಿ ಶಾಲೆಯಲ್ಲಿರುವಾಗ ನಮ್ಮ ಊರಿನ ಟೆಂಟ್‌ನಲ್ಲಿ ಶ್ರೀ ಬಿ.ಆರ್.ಪಂತಲು ಅವರ 'ಸ್ಕೂಲ್ ಮಾಸ್ಟರ್' ಎಂಬ ಸಿನಿಮಾ ಹಾಕಿದ್ದರು. ನಾವು ಆ ಸಿನಿಮಾವನ್ನು ನಾಲ್ಕು ನಾಲ್ಕು ಸಲ ನೋಡಿದ್ದೇವೆ. ನಾವು ಪ್ರತಿ ಸಲ ಆ ಸಿನಿಮಾ ನೋಡುವಾಗಲು ನಮಗೆ ಕಣ್ಣೀರು ಬರುತ್ತಿತ್ತು. ಏಕೆಂದರೆ ಆಗ ಮೇಷ್ಟ್ರುಗಳು ಅಷ್ಟು ಕಷ್ಟವನ್ನು ಅನುಭವಿಸುತ್ತಿದ್ದರು. ಆದರೆ ಈಗ ನಾವು ಗಮನಿಸಿರುವಂತೆ ಅತ್ಯಂತ ಉತ್ತಮವಾಗಿರುವಂತಹ ಸ್ಯಾಲರಿ ಲಭ್ಯವಾಗುವಂಥದ್ದು ಟೀಚರ್ಸ್‌ಗೆ, ಪ್ರೊಫೆಸರ್ಸ್‌ಗೆ ಹಾಗೂ ಲೆಕ್ಚರರ್ಸ್‌ಗೆ. ನಾನು ಬೆಳಿಗ್ಗೆ ಮಾತನಾಡುವಾಗ ಸರ್ಕಾರಿ ಶಾಲೆಯ ಟೀಚರ್ಸ್ ಯಾರಿದ್ದಾರೆ ಅವರಲ್ಲಿ ಕೆಲವರು ಎಪ್ಪತ್ತು ಸಾವಿರ, ಎಂಭತ್ತು ಸಾವಿರ, ಒಂದು ಲಕ್ಷ ರೂಪಾಯಿ ಹಾಗೂ ಎರಡು ಲಕ್ಷ ರೂಪಾಯಿಯವರೆಗೂ ಸಂಬಳ ತೆಗೆದುಕೊಳ್ಳುತ್ತಾರೆಂದು ಹೇಳಿದೆ.

**ಉಪ ಸಭಾಪತಿಯವರು:-** ಆದರೆ ಈ ಶಿಕ್ಷಣದವರಿಗೆ ಇಲ್ಲ. ಈ ವಿಧೇಯಕ ಇದೆಯಲ್ಲ, ಈ ವಿಧೇಯಕ ಬಂದಿರುವಂತಹ ಶಿಕ್ಷಕರಿಗೆ ಅದು ಸಿಗುವುದಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:-** ಇವರಲ್ಲಿಯೂ ಸಹ 50 ಸಾವಿರದಿಂದ 70 ಸಾವಿರ ರೂಪಾಯಿಗಳವರೆಗೂ ಸಂಬಳ ತೆಗೆದುಕೊಳ್ಳುವವರು ಇದ್ದಾರೆ.

**ಉಪ ಸಭಾಪತಿಯವರು:-** ಅವರು ನಿವೃತ್ತರಾಗುವಾಗ ಸಿಗುತ್ತದೆ. ಅದು ಪಿಯು ಶಿಕ್ಷಕರಿಗೆ ಮಾತ್ರ. ಪ್ರೌಢ ಶಿಕ್ಷಣದವರಿಗೆ ಎಲ್ಲಿ ಕೊಡುತ್ತೀರಿ?

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಕೆಲಸ ಮಾಡುವಂತಹ 4ನೇ ದರ್ಜೆಯ ನೌಕರರು ಅಥವಾ ಇಲ್ಲಿ ಕೆಲಸ ಮಾಡುವಂಥ ನೌಕರರ ಸಂಬಳ ಎಷ್ಟು ಬರುತ್ತದೆಯೆಂದು ತಿಳಿದಿದೆಯೇ? ಅವರಿಗಿಂತ ಅತಿ ಕಡಿಮೆ ಸಂಬಳ ತೆಗೆದುಕೊಳ್ಳುವಂತಹ ನೌಕರರು ಇಲ್ಲಿಯೇ ಇದ್ದಾರೆ. ಹಾಗಾಗಿ ನಾನು ಏನು ಹೇಳುವುದಕ್ಕೆ ಬಯಸುತ್ತಿದ್ದೇನೆಂದರೆ, ಇವತ್ತಿನ ದಿವಸ ನಮಗೆ ಸರಿಯಾದಂತಹ ಸಂಬಳವಿಲ್ಲ, ವ್ಯವಸ್ಥೆ ಇಲ್ಲ, ಅಥವಾ ಅಪ್ಪಿ ತಪ್ಪಿ ದಾರಿ ತಪ್ಪಿದ್ದಾರೆ ಎನ್ನುವಂತಹ ಪರಿಸ್ಥಿತಿಯಲ್ಲಿಯೂ ಸಹ ಇವತ್ತಿನ ದಿವಸ ಟೀಚರ್ಸ್ ಇಲ್ಲ. ಬಹುತೇಕ ಟೀಚರ್ಸ್ ಉತ್ತಮವಾದಂತಹ ವ್ಯವಸ್ಥೆಯಲ್ಲಿದ್ದಾರೆ. ಇವತ್ತಿನ ದಿವಸ ಸರ್ಕಾರ ಅತ್ಯಂತ ಉತ್ತಮವಾಗಿರುವಂತಹ ಸಂಬಳವನ್ನು ಟೀಚರ್ಸ್‌ಗೆ ಕೊಡುತ್ತಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ನಾವು ಸಂಬಳದ ಬಗ್ಗೆ ಚರ್ಚೆ ಮಾಡುತ್ತಿಲ್ಲ. ಈ ವಿಧೇಯಕದ ಬಗ್ಗೆ ಮಾತ್ರ ಚರ್ಚೆ ಮಾಡಿ ಎಂದರೆ, ಅದು ಬಿಟ್ಟು ಶಿಕ್ಷಕರಿಗೆ ಕೊಡುವಂತಹ ಸಂಬಳ ಸರಿ ಇದೆಯೇ, ಕಡಿಮೆ ಇದೆಯೇ, ಜಾಸ್ತಿ ಇದೆಯೇ ಎಂದು ಮಾತನಾಡುತ್ತಿದ್ದಾರೆ. ಈ ವಿಧೇಯಕದ ಬಗ್ಗೆ ಮಾತ್ರ ಮಾತನಾಡಬೇಕು.

**ಶ್ರೀ ವಿ.ಎಸ್.ಉಗ್ರಪ್ಪ:–** ನೀವು ಹೇಳಿದಂತೆ ಮಾತನಾಡಬೇಕೆ? ಕುಳಿತುಕೊಳ್ಳಿ. ವಿಧೇಯಕದ ಬಗ್ಗೆ ಮಾತನಾಡುವಾಗ ನೀವು dictate ಮಾಡಿದಂತೆ ಮಾತನಾಡಬೇಕೆ? ಆಗಿನಿಂದಲೂ ನೋಡುತ್ತಿದ್ದೇನೆ ಇದು too much ಆಯಿತು.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ...

**ಉಪ ಸಭಾಪತಿಯವರು:–** ದಯವಿಟ್ಟು ಎಲ್ಲರು ಕುಳಿತುಕೊಳ್ಳಿ. ನಾರಾಯಣಸ್ವಾಮಿಯವರೆ ಕುಳಿತುಕೊಳ್ಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಹೇಗೆ ಮಾತನಾಡಬೇಕೆಂದು ನನಗೆ ಗೊತ್ತಿದೆ. ನಾನು ಇವರಿಂದ ಕಲಿಯುವಂತಹ ಅವಶ್ಯಕತೆ ಇಲ್ಲ. Nonsense.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಒಬ್ಬ ಸದಸ್ಯರು ಮಾತನಾಡುವಾಗ ಅವರು ಏಕೆ ಮಾತನಾಡಬೇಕು?

**ಉಪ ಸಭಾಪತಿಯವರು:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿ ಅವರೆ ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಏನು ಮಾತನಾಡಬೇಕು ಎಂಬ ಅರಿವು ನನಗಿದೆ.

(ಗೊಂದಲ)

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ, ತಾವು ಮಾತನಾಡಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಈ ಸದನವಿರುವುದೇ ವಿಧೇಯಕಗಳನ್ನು ಮಾಡುವುದಕ್ಕೆ; ಕಾನೂನುಗಳನ್ನು ಮಾಡುವುದಕ್ಕೆ. ಅದು ಈ ಸದನದ ಪ್ರಮುಖ ಉದ್ದೇಶ. ನೀವು ಹೇಳಿದಂತೆ ಮಾತನಾಡುವುದಕ್ಕೆ ಆಗುವುದಿಲ್ಲ, ಹೇಗೆ ಮಾತನಾಡಬೇಕೆಂದು ನನಗೆ ಗೊತ್ತಿದೆ. ಸ್ವಲ್ಪ ಮಿತಿ ಬೇಕು.

**ಉಪ ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ, ನನ್ನ ಕಡೆ ನೋಡಿ ಮಾತನಾಡಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಇಲ್ಲಿ ಏನಾಗುತ್ತದೆ ಎಂದರೆ, (XXX) ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕೆಲವರು (XXX) ಎಂದು ತಿಳಿದುಕೊಂಡಿದ್ದಾರೆ. ಅಂದರೆ ಈಗ ಯಾರು ಅಡಚಣೆ ಮಾಡುವುದಕ್ಕೆ ಹೊರಟಿರಲ್ಲ ಅವರಿಗೆ.

**ಉಪ ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರೆ ಕುಳಿತುಕೊಳ್ಳಿ. ಮಾನ್ಯ ಉಗ್ರಪ್ಪನವರೆ, ನೀವು ಹೇಳಿದ್ದು ಸರಿ ಇದೆಯೇ? ನೀವು ವಕೀಲರಿದ್ದೀರಿ. ಈಗ (XXX) ಎಂದು ಹೇಳಿದಿರಲ್ಲ, ನೀವು ಮಾತನಾಡಿದ್ದು ಸರಿ ಇದೆಯೇ?

**ಶ್ರೀ ವಿ.ಎಸ್.ಉಗ್ರಪ್ಪ:-** ನಾನು ಎಲ್ಲಾ ಎಂದು ಹೇಳಲಿಲ್ಲ.

**ಉಪ ಸಭಾಪತಿಯವರು:-** ನೀವು ಈ ರೀತಿ ಹೇಳಬಾರದು. ಇದನ್ನು ನಾನು ಕಡತದಿಂದ ತೆಗೆದು ಹಾಕುತ್ತೇನೆ. ಇದೆಲ್ಲಾ ಬೇಡ.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಅಡಚಣೆ ಮಾಡುವುದು ಎಂದರೆ ಏನು?

**ಶ್ರೀ ವಿ.ಎಸ್.ಉಗ್ರಪ್ಪ:-** ವಿಧೇಯಕದ ಬಗ್ಗೆ ಮಾತನಾಡಬೇಕಾದರೆ ಅವರು ಏಕೆ ಮಧ್ಯದಲ್ಲಿ ಮಾತನಾಡಬೇಕು? ಅವರು ಯಾರು ಹೇಳುವುದಕ್ಕೆ? Who is he?

(ಗೊಂದಲ)

**ಉಪ ಸಭಾಪತಿಯವರು:-** ಶ್ರೀಕಂಠೇಗೌಡರೇ ಕುಳಿತುಕೊಳ್ಳಿ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ವಿಧೇಯಕದ ಬಗ್ಗೆ ಮಾತನಾಡುವುದಾದರೆ ಏನು ಬೇಕಾದರು ಮಾತನಾಡಲಿ. ಆದರೆ ಶಿಕ್ಷಕರ ಸಂಬಳದ ಬಗ್ಗೆ ಅರ್ಧ ಗಂಟೆ ಮಾತನಾಡುತ್ತಾರೆ. ಹಾಗಾದರೆ ಅವರು ಮಾತನಾಡುವುದಕ್ಕೆ ಮಿತಿ ಇಲ್ಲವೇ?

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಇವರು ಹೇಳಿದಂತೆ ಮಾತನಾಡುವುದಕ್ಕೆ ಆಗುವುದಿಲ್ಲ.

**ಉಪ ಸಭಾಪತಿಯವರು:–** ನಾನು ಅದನ್ನು ಕಡತದಿಂದ ತೆಗೆದುಹಾಕಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ:–** ನಾನು ಎಲ್ಲಾ ಎಂದು ಹೇಳಲಿಲ್ಲ.

---

**ಉಪ ಸಭಾಪತಿಯವರು:–** ನೀವು ಆ ರೀತಿ ಮಾತನಾಡಬಾರದು. ಇಲ್ಲಿ ಎಲ್ಲರೂ ಸಹ ಶಾಸಕರೆ. ಎಲ್ಲರೂ ಕೂಡ ಜನಪ್ರತಿನಿಧಿಗಳೆ. ನೀವು (XXX) ಎಂದು ಹೇಳಿದಿರಲ್ಲ ಅದನ್ನು ಕಡತದಿಂದ ತೆಗೆದುಹಾಕಿದ್ದೇನೆ. ಅದು ಸರಿ ಅಲ್ಲ.

**ಶ್ರೀ ಪುಟ್ಟಣ್ಣ:–** ನೀವೂ ಸಹ (XXX) ಮಾಡುವುದಕ್ಕೋಸ್ಕರವೆ ಮಾತನಾಡುವುದು. ನಿಮ್ಮ ಲೀಡರ್‌ಗಳಿಗೆ (XXX) ಮಾಡುವುದಕ್ಕೋಸ್ಕರವೆ ಮಾತನಾಡುವುದು. ನೀವು ಸಹ (XXX) ರಾಜಕಾರಣ ಮಾಡುವಂಥದ್ದು. ಅವರು (XXX) ಎಂದು ಹೇಳುವುದು ಸರಿಯಲ್ಲ. This is wrong.

**ಉಪ ಸಭಾಪತಿಯವರು:–** ಪುಟ್ಟಣ್ಣನವರೆ ಕುಳಿತುಕೊಳ್ಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಒಂದು ವಿಷಯವನ್ನು ಸ್ಪಷ್ಟಪಡಿಸುವುದಕ್ಕೆ ಇಷ್ಟಪಡುತ್ತೇನೆ. ಕಾನೂನು ಮಾಡುವಂತಹ ಸಂದರ್ಭದಲ್ಲಿ ಅತ್ಯಂತ ನಿರ್ವಿಕಾರ ಭಾವನೆಯಿಂದ ವ್ಯವಸ್ಥೆಯನ್ನು ಸರಿಪಡಿಸುವಂತಹ ದೃಷ್ಟಿಯಿಂದ ಆರೋಗ್ಯಕರವಾದಂತಹ ಶಿಕ್ಷಣ ಇಲಾಖೆಯಲ್ಲಿ ಪ್ರತಿಭೆಗಳನ್ನು ಗುರುತಿಸುವಂತಹ ದೃಷ್ಟಿಯಿಂದ ಕಾನೂನು ಆಗಬೇಕು ಎನ್ನುವುದು ನನ್ನ ಆಶಯ. ಈ ಆಶಯದಲ್ಲಿ ಈ ಕಾನೂನನ್ನು ತರುವಂಥದ್ದಕ್ಕೆ ಇವತ್ತೇನು ಸರ್ಕಾರ ಹೊರಟಿದೆ, ಇದನ್ನು ನಾನು ಈಗಾಗಲೇ ಪ್ರಾರಂಭದಲ್ಲಿಯೇ ಸ್ವಾಗತ ಮಾಡಿದ್ದೇನೆ. ಆದರೆ ಇಲ್ಲಿ ಕೆಲವು ನ್ಯೂನತೆಗಳೇನಿವೆ, ಅವುಗಳನ್ನು ಸರಿಪಡಿಸುವಂಥದ್ದಕ್ಕೆ. ಸೆಕ್ಷನ್ 21(ii)(ಬಿ) ಯಲ್ಲಿ 'ಪರೀಕ್ಷೆ' ಎಂದರೆ ಏನು ಎಂದು definition clause ಹಾಕಿದ್ದಾರೆ. Regular competitive examination ನಲ್ಲಿ ಆಗಿದ್ದರೆ ಸರಿ. ಆದರೆ, ಇಲ್ಲಿ "…. ಹಾಗೂ ಇದು ಪ್ರಾಯೋಗಿಕ ಪರೀಕ್ಷೆಯನ್ನೂ ಒಳಗೊಳ್ಳುತ್ತದೆ." ಎಂದಿದ್ದಾರೆ. Preparatory examination ಅನ್ನೂ ಸಹ ಒಳಗೊಳ್ಳುತ್ತದೆ. ಬಹುಶಃ ನನಗೆ ಅನ್ನಿಸುವಂಥದ್ದು, ಈ preparatory examination ನಲ್ಲಿ ಆಕಸ್ಮಿಕವಾಗಿ ಏನಾದರು ಸಣ್ಣಪುಟ್ಟ ….

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ):–** ಮಾನ್ಯ ಸಭಾಪತಿಯವರೇ, ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತಿದ್ದೇನೆ. Point of order ಎತ್ತುತ್ತಿದ್ದೇನೆ. ನಮ್ಮಲ್ಲಿ ನಿಯಮ 86 ಮತ್ತು 87 ಅನ್ನು ತಾವು ಗಮನಿಸಬೇಕೆಂದು ಕೋರುತ್ತೇನೆ. ಯಾವುದೇ ಒಂದು ವಿಧೇಯಕವನ್ನು ನಾವು ಸದನದಿಂದ ಪರಿಶೀಲನಾ ಸಮಿತಿಗೆ ಕಳುಹಿಸಿದಂತಹ ಸಂದರ್ಭದಲ್ಲಿ ಅದರ ವರದಿ ಮಂಡನೆ ಆಗಿ, ತಿದ್ದುಪಡಿ ವಿಧೇಯಕ ಬಂದಂತಹ ಸಂದರ್ಭದಲ್ಲಿ ಅದು "ಖಂಡ ಖಂಡವಾಗಿ" ಅಥವಾ ಎಲ್ಲವೂ ಸೇರಿ ಪರ್ಯಾಲೋಚನೆ ಮಾಡುವಂತಹ ಅಧಿಕಾರ ಈ ಸದನಕ್ಕೆ ಇದೆ. ಚರ್ಚೆಗೆ ಸ್ವಲ್ಪ ಸೀಮಿತವಾಗಿದೆ. ಹಾಗಾಗಿ ಈ ವಿಧೇಯಕ ಈ ಹಿಂದೆಯೇ ಚರ್ಚೆಯಾಗಿದೆ. ಇಲ್ಲಿ ಪರ ಅಥವಾ ವಿರುದ್ಧ ಎನ್ನುವುದಲ್ಲ. ಇವತ್ತಿನ ಸನ್ನಿವೇಶಕ್ಕೆ ಏನಾಗಬೇಕು? ಕೆಲವರು ಮಾತನಾಡುವಂತಹ ಸಂದರ್ಭದಲ್ಲಿ ಸರ್ಕಾರ ಶಿಕ್ಷಕರನ್ನು ಮತ್ತು ಉಪನ್ಯಾಸಕರನ್ನು ಗಮನದಲ್ಲಿಟ್ಟುಕೊಂಡು ಮಾಡಿದೆ ಎಂದು ಭಾವಿಸಿದ್ದಾರೆ. ಯಾರೇ ಒಬ್ಬ ವ್ಯಕ್ತಿ ಎಂದು ಹೇಳಿದಮೇಲೆ ಅದು ತಪ್ಪು ಮಾಡಿದಂಥವನು ಎಂದು ಅರ್ಥ. ಮಾನ್ಯ ರಾಮಚಂದ್ರಗೌಡರು ಮಾತನಾಡುವಂತಹ ಸಂದರ್ಭದಲ್ಲಿ ಹೇಳಿದರು, ಕೊಲೆ ಮಾಡಬಾರದು ಎನ್ನುವುದು ಇದೆ. ಆದರೆ ಕೊಲೆ ಆದರೆ ಏನು ಮಾಡಬೇಕು ಎಂಬುದರ ಬಗ್ಗೆ Section 302, IPC ಇದೆ. ಎಲ್ಲರನ್ನೂ ಕರೆದುಕೊಂಡು ಹೋಗಿ ಗಲ್ಲುಶಿಕ್ಷೆ ವಿಧಿಸುತ್ತಿಲ್ಲ. ತಪ್ಪುಗಳು ಮತ್ತು ಅಕ್ರಮಗಳು ಆಗಬಾರದು ಎನ್ನುವ ಕಾರಣಕ್ಕೋಸ್ಕರ ಈ ವಿಧೇಯಕವನ್ನು ತಂದಿರುವಂಥದ್ದು. ಈ ವಿಧೇಯಕದಿಂದ ಎಲ್ಲವೂ ಸಾಧ್ಯವೆ ಎಂದು ಹೇಳುವಂಥದ್ದಲ್ಲ. ಇವತ್ತಿನ ಸನ್ನಿವೇಶಕ್ಕೆ ಈ ಸದನವನ್ನು ಇಡೀ ರಾಜ್ಯದ ಮಕ್ಕಳು ನೋಡುತ್ತಿದ್ದಾರೆ. ಆದುದರಿಂದ ಇಲ್ಲಿಂದ ತಪ್ಪು ಸಂದೇಶ ಹೋಗಬಾರದು. ಇಲ್ಲಿ ಆಗಿರುವಂಥದ್ದು ತಪ್ಪು ಮಾಡಿದಂಥವನಿಗೆ ಶಿಕ್ಷೆ ಎನ್ನುವುದನ್ನು ನಾವು ಹೇಳುತ್ತಿರುವಂಥದ್ದು. ಹಾಗಾಗಿ ದಯವಿಟ್ಟು ಹೇಳುತ್ತೇನೆ ಇದರಲ್ಲಿ ಪಕ್ಷ ಆಗಿರಬಹುದು, ವೃತ್ತಿ ಆಗಿರಬಹುದು ಅದರಲ್ಲಿ division ಮಾಡುವುದಲ್ಲ. ವಿಧೇಯಕಗಳನ್ನು ಮಾಡುವಂತಹ, ಶಾಸನ ರಚನೆ ಮಾಡುವಂತಹ ಅಧಿಕಾರ ಈ ಸದನಕ್ಕೆ ಇದೆ. ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಅವರು ಮಕ್ಕಳ ವಿಚಾರವಾಗಿ ಬಹಳ ಸ್ಪಷ್ಟವಾಗಿ ಮಾತನಾಡಿದರು. ಬಹಳ ಸಂತೋಷವಾಯಿತು.

---

(XXX) ಮಾನ್ಯ ಸಭಾಪತಿಯವರ ಆದೇಶಾನುಸಾರ ತೆಗೆದುಹಾಕಲಾಗಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

*(268) 17.03.2017 KG.MD 2.20*

**ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ):-** ಮುಂದು. ಮಾನ್ಯ ಸಭಾಪತಿಯವರೇ, ನಾವು ಮೂರು ವರ್ಷಗಳವರೆಗೆ ಎನ್ನುವಂತಹ ಒಂದು ಭಯವನ್ನು ಇಟ್ಟಿದ್ದೇವೆ ಹೊರತು, ಆ ರೀತಿ ಯಾವುದೇ ಪ್ರಕರಣಗಳಲ್ಲಿ ಮಾಡಿಲ್ಲ. ನಾವು ಇವತ್ತು ಮಾಡಿರುವಂತಹ ಕೆಲವೊಂದು ತಿದ್ದುಪಡಿಗಳನ್ನು ಮತ್ತು ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಂಡಿರುವುದರ ಹಿನ್ನೆಲೆಯಲ್ಲಿ, ಈ ಬಾರಿಯ ಪಿ.ಯು.ಸಿ. ಪರೀಕ್ಷೆಯಲ್ಲಿ ಆರು ಜನರನ್ನು ನಾವು ಈಗಾಗಲೇ ಜೈಲಿಗೆ ಕಳುಹಿಸಿದ್ದೇವೆ. ಬೀದರ್‌ನ ಒಂದು ಸಂಸ್ಥೆಯಲ್ಲಿನ ಪ್ರಾಂಶುಪಾಲರು ಮತ್ತು ಅಲ್ಲಿರುವಂತಹ ಮೇಲ್ವಿಚಾರಕರು ಹಾಗೂ ವಿದ್ಯಾರ್ಥಿಗಳಿಗೆ ನೀರು ಕೊಡುವಂತಹ ಹುಡುಗ ಈ ಮೂರು ಜನ open ಆಗಿ ಮಕ್ಕಳಿಗೆ ಪ್ರಶ್ನೆಗಳಿಗೆ ಉತ್ತರವನ್ನು ಬೋರ್ಡ್‌ನ ಮೇಲೆ ಬರೆದು ಹೇಳುವಂತಹ ಒಂದು ಪ್ರಸಂಗವನ್ನು ಬೀದರ್‌ನ ಜಿಲ್ಲಾಧಿಕಾರಿಯವರು ಹಿಡಿದ ತಕ್ಷಣ ಆ ಮೂರು ಜನರನ್ನು ಹಿಡಿದು ಜೈಲಿಗೆ ಕಳುಹಿಸಿದ್ದೇವೆ. ಆದರೆ, ವಿದ್ಯಾರ್ಥಿಗಳ ವಿರುದ್ದ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಈಗ ರಾಯಚೂರು ಜಿಲ್ಲೆಯ ಮಾನ್ವಿಯಲ್ಲಿ ನಡೆದಂತಹ ಪ್ರಕರಣ ಹೇಗೆ ಆಯಿತು? ಎಲ್ಲಿಂದ ಅದು ಪ್ರಾರಂಭ ಆಯಿತು? ಎಂಬುದನ್ನು ಪತ್ತೆ ಹಚ್ಚಿದ್ದೇವೆ. ಆ ಬಗ್ಗೆ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಕಾನೂನನ್ನು ಬಿಗಿ ಮಾಡುವುದರಲ್ಲಿ ಅವರಿಗೆ ಆಕ್ಷೇಪಣೆಗಳು ಇದ್ದರೆ, ಬಹುಶಃ ಇದು ಏನಾಗುತ್ತದೆ ಅಂದರೆ, ನಮ್ಮ ಮಕ್ಕಳ ಭವಿಷ್ಯವನ್ನು ರೂಪಿಸುವಂತಹ ಸನ್ನಿವೇಶಗಳು ಬಂದಂತಹ ಸಂದರ್ಭದಲ್ಲಿ ಇಷ್ಟು ಸುದೀರ್ಘವಾದಂತಹ ಚರ್ಚೆ ಅಗತ್ಯ ಇದೆಯೇ ಅಥವಾ ಇಲ್ಲವೇ ಎಂಬುದನ್ನು ನಮ್ಮಷ್ಟಕ್ಕೆ ನಾವೇ ಪ್ರಶ್ನೆ ಮಾಡಿಕೊಳ್ಳಬೇಕಾಗುತ್ತದೆ. ಇವತ್ತು ಇರುವಂತಹ ಸನ್ನಿವೇಶದಲ್ಲಿ ಯಾವುದೇ ವ್ಯಕ್ತಿಯ ವಿರುದ್ಧ ಗುರಿ ಇಟ್ಟುಕೊಂಡು ಈ ವಿಧೇಯಕವನ್ನು ತಂದಿಲ್ಲ. ಈ ಇಲಾಖೆಯಲ್ಲಿ ಉಪನ್ಯಾಸಕರು, ಶಿಕ್ಷಕರು ಮತ್ತು ಮಕ್ಕಳು ಇರುವಂತಹ ಇಲಾಖೆ. ನಾನು ಅದನ್ನು ಸುಧಾರಣೆ ಮಾಡಬೇಕೆಂದು ತಂದಿದ್ದೇನೆ. ನಾವು ತಂದಿರುವಂತಹ ವಿಧೇಯಕ ಶಿಕ್ಷಕರ ವಿರುದ್ಧ ಗುರಿ ಇಟ್ಟಕೊಂಡು ತಂದಿದ್ದೀರಿ ಎಂದು ಹೇಳಿದರೆ, ನಾಳೆ ಶಿಕ್ಷಕರಿಗೆ ಬಡ್ತಿ ಕೊಡುವಂತಹದ್ದನ್ನು ಅಥವಾ ಸಂಬಳ ಹೆಚ್ಚು ಮಾಡುವಂತಹದ್ದನ್ನು ತಂದಾಗ, ನಾನು ಯಾರ ಪರವಾಗಿ ಇದ್ದೇನೆ ಎಂದು ಹೇಳುತ್ತಾರೆ? ಯಾವುದನ್ನು ಯಾವ ಯಾವ ಹಂತದಲ್ಲಿ ಕೊಡಬೇಕಾಗುತ್ತದೆ ಅದನ್ನು ಕೊಡಲೇಬೇಕಾಗುತ್ತದೆ. ಒಂದು ಕಾನೂನಿನ ಅಡಿಯಲ್ಲಿ ಅವರು ಸರ್ಕಾರಿ ಸೇವೆಗೆ ಸೇರಿರಬಹುದು ಅಥವಾ ಸರ್ಕಾರದ ಪರವಾಗಿ ಸೇವೆ ಸಲ್ಲಿಸುವವರ ವಿರುದ್ಧ ಕ್ರಮ ತೆಗೆದುಕೊಳ್ಳಲೇಬಾರದು, ಅವರ ಮೇಲೆ ನಿಗಾವಹಿಸಲೇಬಾರದು ಎಂದು ಹೇಳಿದಾಗ, ಬಹುಶಃ ಇಂತಹ ವಿಧೇಯಕಗಳನ್ನು ತರುವಂತಹ ಅಗತ್ಯ ಇದೆಯೇ ಎಂಬುದನ್ನು ತಾವೇ ಹೇಳಬೇಕಾಗುತ್ತದೆ.

**ಶ್ರೀ ರಮೇಶ್‌ಬಾಬು (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಿಗೆ ವಿಧೇಯಕಗಳನ್ನು ತರಬೇಡಿ ಎಂದು ಹೇಳುತ್ತಿಲ್ಲ. ದಯಮಾಡಿ ಕ್ಷಮೆ ಇರಲಿ.

**ಉಪ ಸಭಾಪತಿಯವರು:–** ಮಾನ್ಯ ರಮೇಶ್‌ಬಾಬುರವರೆ ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಚಿವರು ಮಾತನಾಡುತ್ತಿದ್ದಾರೆ. **ಶ್ರೀ ರಮೇಶ್‌ಬಾಬು:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೆ ಆ ರೀತಿ ನಡೆದಿದೆ ಎಂಬುದನ್ನು ಒಪ್ಪಿಕೊಳ್ಳುತ್ತಿದ್ದಾರೆ. ಅವರ ವಿರುದ್ಧ ಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ.

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್‌ಬಾಬುರವರು ಸದನದಲ್ಲಿ ಮಾತನಾಡುವಂತಹ ಸಂದರ್ಭದಲ್ಲಿ ಯಾರ ಮೇಲೆಯೋ ಗುರಿ ಇಟ್ಟುಕೊಂಡು ಈ ವಿಧೇಯಕವನ್ನು ತಂದಿದ್ದಾರೆ ಎಂದು ಹೇಳಿದರು. ಇದರಿಂದ ಜನತೆಗೆ ತಪ್ಪು ಸಂದೇಶಗಳು ಹೋಗುವುದು ಬೇಡ. ನಮ್ಮ Select Committee ಯಲ್ಲಿ ಆಗಿರುವಂತಹ ಚರ್ಚೆಗಳು ಮತ್ತು ಮಾತುಗಳನ್ನು ನಾವು ಇಲ್ಲಿ ಬಹಿರಂಗಪಡಿಸಿಕೊಂಡು ಕುಳಿತುಕೊಳ್ಳುವುದೇ ಬೇಡ. ಅದು ಸರ್ಕಾರದ ಸ್ವತ್ತು. ಆದರೆ, ಇಲ್ಲಿ ನಾನು ಹೇಳುವುದೇನೆಂದರೆ, pros and cons ನೋಡಬೇಕಾಗುತ್ತದೆ, limitations ಏನು ಇದೆ? ಇದರ ಅಗತ್ಯ ಏನಿದೆ? ಅದರ ಮೇಲೆ ಮಾತನಾಡಿದಂತಹ ಸಂದರ್ಭದಲ್ಲಿ ನಾವು ಎಲ್ಲೋ ಹೋಗಬಹುದು. ಈ ಉದಾಹರಣೆಗಳನ್ನು ಕೊಟ್ಟುಕೊಂಡು ಹೋಗುತ್ತಿದ್ದರೆ, ತಾವು ಎಷ್ಟು ದಿವಸ ಬೇಕಾದರೂ ನಡೆಸಬಹುದು. ಆದರೆ, ಇವತ್ತಿನ ಸನ್ನಿವೇಶಕ್ಕೆ ಇದರ ಅಗತ್ಯವೇನು? ಆ ಕಾರಣಕ್ಕಾಗಿ ನಿಯಮ 86 ಮತ್ತು 87 ಅನ್ನು ತಾವು ಒಂದು ಬಾರಿ ನೋಡಿ ರೂಲಿಂಗ್‌ಅನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ ಮಾತನಾಡಿ.

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೇ, ನಾನು ಕ್ರಿಯಾಲೋಪ ಎತ್ತಿರುವುದು. ನಿಯಮ 86 ಏನು ಹೇಳುತ್ತದೆ ಹೇಳಿ?

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೇ, ನಿಯಮ 86 ಮತ್ತು 87 ಏನು ಹೇಳುತ್ತದೆ ಎಂಬುದನ್ನು ಸ್ವಲ್ಪ ನೋಡಿ ತಮ್ಮ ರೂಲಿಂಗ್ ಕೊಟ್ಟುಬಿಡಿ.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ಆಯಿತು ಕೊಡುತ್ತೇನೆ. ಅದನ್ನು ಪರಿಶೀಲಿಸುತ್ತೇನೆ. ಮಾನ್ಯ ಪುಟ್ಟಣ್ಣನವರೆ ಕುಳಿತುಕೊಳ್ಳಿ. ಮಾನ್ಯ ಸಚಿವರೆ, ತಮ್ಮ ಕ್ರಿಯಾಲೋಪಕ್ಕೆ ರೂಲಿಂಗ್ ಕೊಡುತ್ತೇನೆ. ಮಾನ್ಯ ಉಗ್ರಪ್ಪನವರೆ, ಮಾತನಾಡಿ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿರ್ದೇಶನ):-** ಮಾನ್ಯ ಸಭಾಪತಿಯವರೇ, ತಾವು ರೂಲಿಂಗ್ ಕೊಡುವಂತಹ ಅವಶ್ಯಕತೆ ಇಲ್ಲ. ಏಕೆಂದರೆ, Member of this House has to raise a point of order, not a Minister. That is the rule. Rule 329 is very clear. Only a member of this House has a right to raise a point of order.

**ಉಪ ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ ಇರಲಿ. ಮಾನ್ಯ ಸಚಿವರೆ ಬೇಡ. ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, ಈ ಚರ್ಚೆ ಎಲ್ಲೋ ಹೊರಟು ಹೋಗುತ್ತದೆ. **(ಗೊಂದಲ)**

---

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಆಯಿತು ಬಿಡಿ. ಮಾನ್ಯ ಸಚಿವರು ಇನ್ನೂ youngster ಇದ್ದಾರೆ. ಮಾನ್ಯ ಸಭಾಪತಿಯವರೆ, ನಾನು ಹೇಳಿದ್ದು ಬಹುಶಃ ಸರಿ ಅನಿಸುತ್ತದೆ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ, Conclude ಮಾಡಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಈಗ ನಾನು provisions ಗೆ ಬಂದಿದ್ದೇನೆ.

**ಉಪ ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ, ತಮಗೆ ಇನ್ನೂ ಎಷ್ಟು ಕಾಲವಕಾಶ ಬೇಕು?

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನನಗೆ 5 ರಿಂದ 10 ನಿಮೀಷ ಬೇಕಾಗುತ್ತದೆ.

**ಉಪ ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೆ ಇನ್ನು ಬಹಳಷ್ಟು ಸದಸ್ಯರು ಮಾತನಾಡಬೇಕು. ತಾವು 5 ನಿಮೀಷದಲ್ಲಿ ಮಾತನಾಡಿ ಮುಗಿಸಿ ಬಿಡಿ. ಈಗ ಊಟದ ಸಮಯ ಆಗಿದೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಮೊದಲನೆಯದು, Preparatory Examination ಅವಶ್ಯಕತೆ, ಅದರಲ್ಲಿ ಏಕೆ ಕ್ರಮ?

**ಶ್ರೀ ತನ್ವೀರ್ ಸೇಠ್:-** ಮಾನ್ಯ ಸಭಾಪತಿಯವರೇ, Annual Examination ಎಂದು ಹೇಳಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಪ್ರಾಯೋಗಿಕ ಪರೀಕ್ಷೆಯನ್ನು ಒಳಗೊಂಡಂತೆ ಅಂದರೆ, definition clause ನಲ್ಲಿ ಅಂದರೆ ಅದರ ಅರ್ಥ ಏನೆಂದರೆ, even Preparatory Examination ನಲ್ಲಿ ಮಾಡಿದರೆ, ಬಹುಶಃ ಇದರ ಅವಶ್ಯಕತೆ ನನಗೆ ಕಾಣುತ್ತಿಲ್ಲ ಎನ್ನುವುದನ್ನು ನಾನು ಸ್ಪಷ್ಟವಾಗಿ ಹೇಳಲಿಕ್ಕೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬಯಸುತ್ತೇನೆ. ಎರಡನೆಯದು, ಈ Section 23(d) ನಲ್ಲಿ ಉತ್ತರ ಪತ್ರಿಕೆಯ ಮೌಲ್ಯಮಾಪನ ಮತ್ತು ಉತ್ತರ ಪತ್ರಿಕೆಯ ಮೇಲ್ವಿಚಾರಣೆಯ ಹೊಣೆಗಾರಿಕೆಯನ್ನು ಯಾರಿಗೆ ವಹಿಸಲಾಗಿದೆಯೋ ಆತನು ಉದ್ದೇಶಪೂರ್ವಕವಾಗಿಯೋ ಅಥವಾ ಗೊತ್ತಿದ್ದು ಮೌಲ್ಯಮಾಪನ ಅಥವಾ ಮೇಲ್ವಿಚಾರಣೆಯನ್ನು ಸಮಕ್ಷಮ ಪ್ರಾಧಿಕಾರವು ನಿರ್ದಿಷ್ಟ ಪಡಿಸಿದ ಮೌಲ್ಯಮಾಪನದ scheme ಅನ್ನು ಉಲ್ಲಂಘಿಸತಕ್ಕದಲ್ಲ. ಇಲ್ಲಿ ಕೆಲವು ನನ್ನ ಗಮನಕ್ಕೆ ಬಂದಿರುವ ಗುಲ್ಬರ್ಗದ ಒಬ್ಬ ಹೆಣ್ಣು ಮಗಳು ಆಂಗ್ಲ ಭಾಷೆಯ ಉಪನ್ಯಾಸಕಿ, ಆಕೆ ಅದೇ ಸಮಯದಲ್ಲಿ ಕೆ.ಪಿ.ಎಸ್.ಸಿ ಪರೀಕ್ಷೆಯಲ್ಲಿ ಹಾಜರಾಗಬೇಕಾಗಿತ್ತು. ಆ ಮೇಲೆ ಇನ್ನೂ ಕೆಲವರಿಗೆ ಆರೋಗ್ಯ ಸಮಸ್ಯೆ ಇರತಕ್ಕಂತಹವರು. ಹಾಗಾಗಿ, ಇಲ್ಲಿ ಸಕಾರಣ ಎನ್ನುವಂತಹ ಸಕಾರಣ ಇಲ್ಲದೇ, ಕಾರಣ ಇಲ್ಲದೇ ಯಾರು ಇದನ್ನು violate ಮಾಡುತ್ತಾರೆ, ಅವರ ವಿರುದ್ಧ ಕ್ರಮ ಜರುಗಿಸಬೇಕು. Otherwise ಯಾವುದೋ health grounds ಮೇಲೆ ಮತ್ತೊಂದು grounds ಮೇಲೆ ನಿಜಕ್ಕೂ reasoning ಇದ್ದಂತಹ ಸಮಯದಲ್ಲಿ ಇದನ್ನು apply ಮಾಡುವಂತಹದ್ದು ಅಷ್ಟೊಂದು ಸಮಂಜಸವಲ್ಲ. ಮಾನ್ಯ ಸಭಾಪತಿಯವರೇ, ಕೊನೆಯದಾಗಿ, ಸೆಕ್ಷನ್ 23 ಬಗ್ಗೆ ಹೇಳುವುದಾದರೆ, ಯಾರು ಪರೀಕ್ಷೆಯ ಕೆಲಸಕ್ಕೆ ಬರುವುದಿಲ್ಲವೋ ಒಂದು ಪರೀಕ್ಷೆಯ ಕೆಲಸಕ್ಕೆ ಬರಲಿಲ್ಲವೆಂದು ಹೇಳಿದರೆ ಅವರಿಗೆ ಆರು ತಿಂಗಳು ಶಿಕ್ಷೆ ಆಮೇಲೆ ಒಂದು ಲಕ್ಷ ರೂಪಾಯಿಗಳ ದಂಡ. ಒಂದು ಬಾರಿ ಆರು ತಿಂಗಳು ಶಿಕ್ಷೆ ಮತ್ತು ದಂಡವಾದರೆ ಅಲ್ಲಿಗೆ ಅವನ career ಮುಗಿಯಿತು. ಆತನನ್ನು ಕೆಲಸದಿಂದ ತೆಗೆಯಲೇಬೇಕು. Next is 3 years and 5 lakhs fine. Conviction ಆದಂತಹವನಿಗೆ ಹೇಗೆ ಕೆಲಸದಲ್ಲಿ ಇಟ್ಟುಕೊಳ್ಳುತ್ತಾರೆ. ನನಗೆ ಅನಿಸುವಂತಹದ್ದು ಯಾರು ಪರೀಕ್ಷೆಯ ಕೆಲಸಕ್ಕೆ ಯಾವುದಾದರೂ ಕಾರಣದಿಂದ ಬರಲಿಲ್ಲವೆಂದರೆ, ಅವರಿಗೆ one increment or two increment cut ಮಾಡುತ್ತೇವೆ ಮತ್ತು next examination duty ಗೆ, ಏಕೆಂದರೆ especially valuation ಗೆ ಹಣ ಬರುವುದು ಅಲ್ಲವಲ್ಲವಾ? ನಿಮ್ಮಗೆ ಈ ರೀತಿ academic ಆಗಿ ಇರತಕ್ಕಂತಹ punishment ಮಾಡುತ್ತೇವೆಂದು add ಮಾಡಿದರೆ, ಒಂದು ಬಾರಿ ಜೈಲಿಗೆ ಕಳುಹಿಸಿದರೆ ಆತನನ್ನು ಒಂದು ಬಾರಿಗೆ ಕರ್ತವ್ಯದಿಂದ ಮನೆಗೆ ಕಳುಹಿಸಿದಂತೆ. ಶಿಕ್ಷಣ ರಂಗದಲ್ಲಿ ವಿದ್ಯೆ ಎಂದರೆ,

**"ವಿದ್ಯಾದದಾತಿ ವಿನಯಂ, ವಿನಯಾಧ್ಯಾತಿ ಪಾತ್ರತ್ವಂ,**
**ಪಾತ್ರತ್ವಾ ಧನಮಾಪ್ನೋತಿ, ಧನಧರ್ಮಂ ತಥಸುಖಂ"**

ವಿದ್ಯೆಯಿಂದ ವಿನಯ ಬರುತ್ತದೆ. My second language is sanskrit. ನಾನು ಹೈಸ್ಕೂಲ್ ಪ್ರಥಮ ವರ್ಷದಿಂದ ಹಿಡಿದು ಬಿ.ಎಸ್.ಸಿ., ವರೆಗೆ ಸಂಸ್ಕೃತ ಭಾಷೆಯನ್ನು ಓದಿದ್ದೇನೆ. ನಾನು ಮಹರ್ಷಿ ವಾಲ್ಮೀಕಿ ವಂಶಸ್ಥ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆದಿಕವಿ ಮಹರ್ಷಿ ವಾಲ್ಮೀಕಿ ಸಂಸ್ಕೃತದಲ್ಲಿ ರಾಮಾಯಣವನ್ನು ಬರೆದಿದ್ದಾರೆ, ಅವರ ವಂಶಸ್ಥ. ಹಾಗಾಗಿ, ಯಾವುದು ಭೂತ ಯಾವುದು ಅಲ್ಲ ಎಂದು ಗೊತ್ತಾಯಿತಲ್ಲ.

ಮಾನ್ಯ ಸಭಾಪತಿಯವರೇ, ನನಗೆ ಅನಿಸತಕ್ಕಂತಹ ಸೆಕ್ಷನ್ 23 ಮತ್ತು 24(ಎ) ಇಲ್ಲಿ punishment ಏನಾಗಿದೆ ಅಂದರೆ ಬಹುಶಃ increment ಕಡಿತಗೊಳಿಸುವುದು ಮತ್ತು examination ಗೆ ತೆಗೆದುಕೊಳ್ಳುವುದಿಲ್ಲ.

*(269) 02.30 17-03-2017 CS.MD*

**ಶ್ರೀ ವಿ.ಎಸ್.ಉಗ್ರಪ್ಪ:– ಮುಂದು.** ಒಂದೆರಡು increment cut ಮಾಡಿದರೆ ಯಾವುದೇ ಟೀಚರ್ ಆದರೂ ಸಹ ಇಂತಹ ಕೆಲಸ ಮಾಡುವುದಕ್ಕೆ ಹೋಗುವುದಿಲ್ಲ. ಇದರ ಜೊತೆಗೆ ಕಳೆದ ವರ್ಷ ತುಮಕೂರಿನ ಶಿವಕುಮಾರ್ ಎನ್ನುವವರು ಪ್ರಶ್ನೆ ಪತ್ರಿಕೆಗಳನ್ನು ಸೋರಿಕೆ ಮಾಡಿದ ವರದಿಯಾಗಿತ್ತು. ಈ ರೀತಿಯ prima facie ಸಿಕ್ಕಿದ ಮೇಲೆ ಪ್ರಶ್ನೆ ಪತ್ರಿಕೆಗಳನ್ನು ಸೋರಿಕೆ ಮಾಡುವವರ ಮೇಲೆ ಗೂಂಡಾ ಆಕ್ಟ್ ಪ್ರಕಾರ ಕ್ರಮ ಕೈಗೊಳ್ಳಿ, ಅದಕ್ಕೆ ನನ್ನ ಅಭ್ಯಂತರವೇನಿಲ್ಲ. ಪ್ರಶ್ನೆ ಪತ್ರಿಕೆಗಳನ್ನು ಮಾರಾಟ ಮಾಡಿ ಹಣ ಮಾಡಿಕೊಳ್ಳುವವರ ಮೇಲೆ you invoke the provisions of 'Gunda Act'. I have no objection for that. ಆದರೆ ಪರೀಕ್ಷೆಗಳಿಗೆ, ಮೌಲ್ಯಮಾಪನಕ್ಕೆ ಬರದವರ ಮೇಲೆ ಇದನ್ನು ಹಾಕುವುದು ಸ್ವಲ್ಪ ಜಾಸ್ತಿಯಾಗುತ್ತದೆ ಎನ್ನುವುದು ನನ್ನ ಭಾವನೆ.

ಕೊನೆಯದಾಗಿ ಸೆಕ್ಷನ್ 121(ಎ)(3)ನಲ್ಲಿ 3 ವರ್ಷಗಳ ಕಾಲ ವಿದ್ಯಾರ್ಥಿಗೆ ಪರೀಕ್ಷೆಯಿಂದ ಡಿಬಾರ್ ಮಾಡಬೇಕೆಂದಿದೆ. ಆತ ಎಸ್ಎಸ್ಎಲ್‌ಸಿ ಹುಡುಗ, ಆತನಿಗೆ 16 ವರ್ಷಗಳಿರಬಹುದು. ಆತನಿಗೆ ಅವರ ತಂದೆ–ತಾಯಿಗಳೋ, ಟೀಚರ್ಸ್ ಅಥವಾ ಮತ್ತೊಬ್ಬರು ದಾರಿ ತಪ್ಪಿಸಿರಬಹುದು, ಆತನಿಗೆ 3 ವರ್ಷಗಳ ಕಾಲ ಪರೀಕ್ಷೆಯಿಂದ ಡಿಬಾರ್ ಮಾಡಿದಲ್ಲಿ ಅವನ ಭವಿಷ್ಯ ಏನು? As per Article 21(A) of the Constitution, Right to Education Act ಬಂದ ಮೇಲೆ ವಿದ್ಯಾರ್ಥಿಗಳನ್ನು ಬೈಯುವ ಹಾಗೆ ಇಲ್ಲ ಎನ್ನುವುದನ್ನು ಕೂಡ ಸ್ಪಷ್ಟಪಡಿಸಿದ್ದಾರೆ. ನಾನು ಮೊನ್ನೆ ಹುಳಿಯಾರದ ಒಂದು ಶಾಲೆಗೆ ಹೋಗಿದ್ದೆನು. ಅಲ್ಲಿ ಕ್ಲಾಸ್‌ನಲ್ಲಿ ತೂಕಡಿಸುವವರಿಗೆ, ನಿದ್ದೆ ಮಾಡುವವರಿಗೆ ನೂರು ರೂಪಾಯಿಗಳ ದಂಡ ಎಂದು ಎಲ್ಲಾ ಕ್ಲಾಸ್‌ರೂಮ್‌ಗಳಲ್ಲಿಯೂ ಸಹ ಬೋರ್ಡ್ ಹಾಕಿದ್ದಾರೆ. ನಾನು ಕೂಡಲೇ ಅಲ್ಲಿನ ಎಸ್‌ಪಿಯವರಿಗೆ you immediately register a case against this Institution ಎಂದು ಹೇಳಿದೆನು. ಇಲ್ಲಿ ಒಬ್ಬ ವಿದ್ಯಾರ್ಥಿಗೆ ಮೂರು ವರ್ಷಗಳ ಕಾಲ ಪರೀಕ್ಷೆಗೆ ಡಿಬಾರ್ ಮಾಡಿದಲ್ಲಿ ...

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಬೋರ್ಡ್‌ನಲ್ಲಿ ಒಬ್ಬ ವಿದ್ಯಾರ್ಥಿಯನ್ನು ಮೂರು ವರ್ಷಗಳ ಕಾಲ ಪರೀಕ್ಷೆಯಿಂದ ಡಿಬಾರ್ ಮಾಡಿದಲ್ಲಿ ಇದು ಮತ್ತೊಂದು ದೊಡ್ಡ ಭ್ರಷ್ಟಾಚಾರಕ್ಕೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಇದರಿಂದ ಶಾಲೆಯಲ್ಲಿನ ಕೇಸ್‌ವರ್ಕರ್ ಮೂರು ವರ್ಷ ನಿನ್ನ ಮಗನನ್ನು ಡಿಬಾರ್ ಮಾಡುತ್ತೇವೆ ಎಂದು ಪೋಷಕರಿಗೆ ಹೇಳಿದಾಗ ಅವರು ಏನಾದರೂ ಮಾಡಿ ಎಂದು ಕೇಳಿಕೊಂಡರೆ 50,000 ಅವರಿಂದ ಪಡೆದು ಆ ಅವಧಿಯನ್ನು 2 ವರ್ಷಗಳಿಗೆ ಇಳಿಸುತ್ತಾನೆ. 1 ಲಕ್ಷ ಕೊಟ್ಟರೆ 1 ವರ್ಷಕ್ಕೆ ಇಳಿಸುತ್ತಾನೆ. ಇನ್ನೂ ಜಾಸ್ತಿ ಕೊಟ್ಟರೆ ಅದನ್ನು ಒಂದು attempt ಗೆ ತರುತ್ತಾನೆ. ಇದರಿಂದ ಸರ್ಕಾರವೇ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಟ್ಟ ಹಾಗೆ ಆಗುತ್ತದೆ. ಒಂದೊಮ್ಮೆ ಮೂರು ವರ್ಷಗಳ ಕಾಲ ಒಬ್ಬ ವಿದ್ಯಾರ್ಥಿಯನ್ನು ಡಿಬಾರ್ ಮಾಡಿದಲ್ಲಿ ಆತ ಪುನಃ ವಾಪಸ್ ಬರುವುದಿಲ್ಲ. ನಾನು ಕೂಡ 27 ವರ್ಷಗಳ ಕಾಲ ಪ್ರಿನ್ಸಿಪಾಲ್ ಆಗಿ ಕೆಲಸ ಮಾಡಿದ್ದೇನೆ. ಒಂದು ಸಲ ಡಿಬಾರ್ ಮಾಡಿದರೆ ಒಬ್ಬ ವಿದ್ಯಾರ್ಥಿಗೆ ಆತ ಮುಂದಿನ ಸಲ fees ಕಟ್ಟುವುದಕ್ಕೆ ಬರುವುದಿಲ್ಲ. ಆಗ ತಂದೆ ತಾಯಿಗಳಿಗೆ ಕೈ ಮುಗಿದು ಕರೆದುಕೊಂಡು ಬಂದು fees ಕಟ್ಟಿಸುತ್ತೇವೆ. ಎಷ್ಟೋ ಮಕ್ಕಳು ಅವಮಾನದಿಂದ ಮರಕ್ಕೆ ನೇಣು ಹಾಕಿಕೊಳ್ಳುತ್ತವೆ. ಇದು ಸೂಕ್ಷ್ಮವಾದ ವಿಚಾರ.

**ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಗಳೇ, ತಮ್ಮಗಳ ಆತಂಕ ಮತ್ತು ಉಗ್ರಪ್ಪನವರ ಹೇಳಿರುವ ವಿಚಾರ, ಮಂಡಳಿ ಮತ್ತು ಇಲಾಖೆಗೆ ಇರತಕ್ಕ ಜವಾಬ್ದಾರಿ ಇದು. ಇದನ್ನು ಯಾವುದೇ ಸಂಸ್ಥೆಗಳಿಗೆ ಬಿಟ್ಟಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಗಳೇ, ಅಂತಿಮವಾಗಿ ನನಗೆ ಅನಿಸುವುದೇನೆಂದರೆ ಒಬ್ಬ ವಿದ್ಯಾರ್ಥಿಯನ್ನು ಮೂರು ವರ್ಷಗಳ ಕಾಲ ಪರೀಕ್ಷೆಯಿಂದ ಡಿಬಾರ್ ಮಾಡುವುದಕ್ಕಿಂತ ಆ ಒಂದು ಪರೀಕ್ಷೆಯನ್ನು ನಿಲ್ಲಿಸಿ, ಇದರಿಂದ ಆತನಿಗೆ ಎಚ್ಚರಿಕೆ ಉಂಟಾಗುತ್ತದೆ. ನಿನ್ನ ಬದುಕು ನಿನ್ನ ಜೀವನ ಮುಗಿದೇ ಹೋಗುತ್ತದೆ, ಈ ಪರೀಕ್ಷೆ ನಿನಗಿಲ್ಲ, ಈ ಶಿಕ್ಷೆಯನ್ನು ಒಂದು ಪರೀಕ್ಷೆಗೆ ಸೀಮಿತಗೊಳಿಸಿದರೆ ಬಹುಶಃ ಆ ಹುಡುಗ ತನ್ನ ತಪ್ಪನ್ನು ತಿದ್ದುಕೊಳ್ಳುವುದಕ್ಕೆ ಮತ್ತು ಸುಧಾರಣೆ ಆಗಲಿಕ್ಕೆ ಅವಕಾಶ ಇರುತ್ತದೆ, ದಯಮಾಡಿ ಅದನ್ನು ಮಾಡುವುದು ಸೂಕ್ತ. ಇದರ ಜೊತೆಗೆ ಸೆಕ್ಷನ್ 24(ಎ)ನಲ್ಲಿ ಇರುವ definition ನಲ್ಲಿ ಏನೆಲ್ಲಾ ಇದೆ ಅದು ಅನ್ವಯ ಆಗುತ್ತದೆ. ಅವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಒಬ್ಬ minor ಆಗಿರುವವನಿಗೆ ಐಪಿಸಿ ಸೆಕ್ಷನ್ 302 ಅಡಿಯಲ್ಲಿ ಅಪರಾಧ ಮಾಡಿದ್ದರೂ ಸಹ ಒಬ್ಬ minor ಅನ್ನು ಕೋರ್ಟ್ ಹೇಗೆ view ಮಾಡುತ್ತಾರೆ ಎನ್ನುವುದು ತಮ್ಮ ಗಮನದಲ್ಲಿರಲಿ. ಹಾಗಾಗಿ ಒಂದು ಪರೀಕ್ಷೆಯಿಂದ ಡಿಬಾರ್ ಮಾಡುವುದು ಸೂಕ್ತ ಎನ್ನುವುದು ನನ್ನ ಭಾವನೆ. ಇನ್ನು clause 4



ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರಕಾರ ಯಾವ ಶೈಕ್ಷಣಿಕ ಸಂಸ್ಥೆ ಅಥವಾ ಪರೀಕ್ಷಾ ಕೇಂದ್ರವು ಅವರಿಗೂ ಸಹ 3 ವರ್ಷ ಎಂದಿದೆ. ಯಾರೋ ಒಬ್ಬ ಕೆಲಸಕ್ಕೆ ಬಾರದ ಶಿಕ್ಷಕ ಅಥವಾ ಯಾರಾದರೂ ಒಂದು ಚೀಟಿಯನ್ನು ತಂದು ಕಿಟಿಕಿಯಿಂದ ಪರೀಕ್ಷೆ ನಡೆಯುತ್ತಿರುವ ಕಡೆಗೆ ಎಸೆದರೆ ಆ ಶಾಲೆಗೆ ಎಷ್ಟೇ ಉತ್ತಮ ಹೆಸರು ಪಡೆದಿದ್ದರೂ ಸಹ ಆ ಶಾಲೆಯ ಹೆಸರು ಹಾಳಾಗುತ್ತದೆ. ಉದಾಹರಣೆಗೆ ನಮ್ಮ ವೆಂಕಟಪುರದ ಶಾಲೆ 10 ವರ್ಷಗಳಿಂದಲೂ ಸಹ 100% ಫಲಿತಾಂಶವನ್ನು ನೀಡುತ್ತಿತ್ತು. ಇಂತಹ ಶಾಲೆಗಳಿಗೆ ಯಾರಾದರೂ ಒಂದು ಚೀಟಿ ತಂದು ಎಸೆದು ಆ ಶಾಲೆ 3–5 ವರ್ಷ ಮಾನ್ಯತೆ ಕಳೆದುಕೊಂಡರೆ ಹೇಗೆ? ಒಂದು ವೇಳೆ ಶಾಲಾ ಆಡಳಿತ ಮಂಡಳಿಯವರು ಇಂತಹ ಕೃತ್ಯದಲ್ಲಿ ಭಾಗಿಯಾಗಿದ್ದರೆ you initiate action against them. ಆದರೆ ಯಾವುದಾದರೊಂದು ಪರೀಕ್ಷಾ ಕೇಂದ್ರದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಅಥವಾ ಸಾಮೂಹಿಕ ನಕಲು ಎಂದು ಇದು ಸ್ವಲ್ಪ harsh ಆಗಬಹುದು. ನನಗೆ ಅನ್ನಿಸುವಂಥಾದ್ದು ಏನೆಂದರೆ, ಮೂರು ವರ್ಷಗಳ ಬದಲು ಆ ಪರೀಕ್ಷೆಗೆ ಆ ವರ್ಷಕ್ಕೆ ಸೀಮಿತಗೊಳಿಸುವುದು ಸೂಕ್ತ ಹಾಗೆಯೇ ಸರ್ಕಾರ ಮತ್ತೊಮ್ಮೆ ಯೋಚಿಸಿ, ಕೆಲವು ಬದಲಾವಣೆಗಳನ್ನು ತಂದು ಈ ಬಿಲ್ ಜಾರಿಗೆ ತರುವುದು ಸೂಕ್ತ. Otherwise, ಈಗೇನೂ ಪಾರದರ್ಶಕತೆ ಮತ್ತು ಮೆರಿಟ್‌ಗೆ ಮೊದಲ ಆದ್ಯತೆಯನ್ನು ನೀಡುತ್ತಿದ್ದಾರೆ ಅದಕ್ಕೆ ನನ್ನ ಪೂರ್ಣ ಬೆಂಬಲ ಇದೆ ಎಂದು ಹೇಳಬಯಸುತ್ತೇನೆ.

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:– ಮಾನ್ಯ ಸಭಾಪತಿಗಳೇ, 2017ರ ಕರ್ನಾಟಕ ಶಿಕ್ಷಣ ಕಾಯ್ದೆ ಅನ್ನು ಈ ಸದನದಲ್ಲಿ ಎರಡನೇ ಬಾರಿಗೆ ಮಂಡಿಸತಕ್ಕ ...

**ಡಾ॥ ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು ಆಗಲೇ ನಿಯಮ 86 ಅನ್ನು ಉಲ್ಲೇಖ ಮಾಡಿದರು. ಈ ವಿಚಾರವನ್ನು ನಾನು ಮತ್ತೊಂದು ಬಾರಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಏಕೆಂದರೆ ವಿಚಾರ ಈಗ ಎಲ್ಲೆಲ್ಲಿಗೋ ಹೋಗುತ್ತಿದೆ. Joint Select Committee ಯಲ್ಲಿ ತೀರ್ಮಾನ ಆದ ಮೇಲೆ ಅದನ್ನು ಯಾವ ರೀತಿ ಪರಿಗಣಿಸಬೇಕೆಂದು ಹಿಂದೆ ಸಚಿವನಾಗಿ ಸಮಿತಿಯಲ್ಲಿ ಕೆಲಸ ಮಾಡಿದ್ದ ನನಗೂ ಸಹ ತಿಳಿದಿದೆ.

> ***"Rules of Procedure and Conduct of Business - Rule 86 Scope of debate on report of Select or Joint Select Committee:*** *The debate on a motion that the Bill as reported by the Select or Joint Select Committee be taken into consideration shall be confined to consideration of the report of the Select or Joint Select*

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

*Committee and the matters referred to in that report or any alternative suggestions consistent with the principle of the bill."*

ಹೀಗಾಗಿ ಇಲ್ಲಿ ಹೇಗೆ ಇದರ ಮೇಲಿನ ಚರ್ಚೆಗೆ ಅವಕಾಶ ಮಾಡಿ ಕೊಡುತ್ತೀರಿ? Let us confine to only that particular aspect of the Bill. ಚರ್ಚೆ ಈಗ ಎಲ್ಲೆಲ್ಲಿಗೋ ಹೋಗುತ್ತಿದೆ. ಬಹಳ ಜನ ಮಾತನಾಡುವವರಿದ್ದರು ಸಹ we should confine to that.

**Sri IVAN D'SOUZA:-** Sir, I am also endorsing the argument of the Leader of the House. ನಿಯಮ 86 ಪ್ರಕಾರ ಈ ಸದನದಲ್ಲಿ ಚರ್ಚೆ ಮುಗಿದ ಮೇಲೆ ಅದನ್ನು ಒಂದು Select Committee ಗೆ ನೀಡಿದ ಮೇಲೆ ಅದಕ್ಕೆ very limited scope ಇರುತ್ತದೆ. This matter has been discussed for more than one hour.

***(270) 2.40 17-03-2017 ಎಂವಿ:ಆರ್‌ಎನ್***

ಶ್ರೀ ಐವನ್ ಡಿ'ಸೋಜಾ:– ಮುಂದು. ಈ ವಿಧೇಯಕ ಎಲ್ಲೆಲೋ ಹೋಗುತ್ತಿದೆ, ತಾವು ರೂಲಿಂಗ್ ಕೊಡಿ. Point of order raise ಮಾಡಿದ್ದೇವೆ, ತಾವು ರಿಪೋರ್ಟ್ ಕೊಡಿ. ಕುಳಿತುಕೊಳ್ಳಿ ಎಂದು ಹೇಳುವುದು ಉತ್ತರವಲ್ಲ, ನನಗೂ ಜವಾಬ್ದಾರಿ ಇದೆ.

**ಉಪಸಭಾಪತಿಯವರು:–** ಇದರ ಬಗ್ಗೆ ಮಾನ್ಯ ಸಭಾನಾಯಕರು ಹೇಳಿದ್ದಾರೆ, ಮಾನ್ಯ ಸಚಿವರು ಹೇಳಿದ್ದಾರೆ, ನೀವು ಮತ್ತೆ ಅದನ್ನೇ ಹೇಳುತ್ತಿದ್ದೀರಾ? ರೂಲಿಂಗ್ ಕೊಡುತ್ತೇವೆ ತಾವು ದಯಮಾಡಿ ಕುಳಿತುಕೊಳ್ಳಿ. ನೋಡಿ ಶ್ರೀ ಹಣಮಂತ ರುದ್ರಪ್ಪ ನಿರಾಣಿಯವರೆ ದಯಮಾಡಿ ಈಗ Joint Select Committee Report ಏನು ಬಂದಿದೆ, ಅದರಲ್ಲಿ ಯಾವುದಾದರೂ ಕೂಡ ನ್ಯೂನತೆಗಳು ಇದ್ದರೆ, ಅದರ ಬಗ್ಗೆ ನಿರ್ದಿಷ್ಟವಾಗಿ ಎರಡು ನಿಮಿಷದಲ್ಲಿ ತಾವು ತಮ್ಮ ಅಭಿಪ್ರಾಯವನ್ನು ಹೇಳಬೇಕು. ನೀವು ಬೇರೆ ವಿಸ್ತೃತವಾದಂತಹ ಚರ್ಚೆಗೆ ಹೋಗಬಾರದು, ದಯವಿಟ್ಟು ಅದಕ್ಕೆ ಅವಕಾಶವಿಲ್ಲ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈಗ ಸಲ್ಲಿಸಿರತಕ್ಕಂತಹ ವಿಧೇಯಕ ಶಿಕ್ಷಕರನ್ನು ಗುರಿಯಾಗಿಟ್ಟುಕೊಂಡು, ಶಿಕ್ಷೆಯನ್ನು ವಿಧಿಸಬೇಕು ಎಂಬ ನಿಟ್ಟಿನಲ್ಲಿ ಬಂದಿದೆ ಎನ್ನತಕ್ಕಂಥ ಚರ್ಚೆ ಕೂಡ ಸುದೀರ್ಘವಾಗಿ ಆಗತಕ್ಕಂಥ ಸಂದರ್ಭದಲ್ಲಿ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಬಯಸುವುದಿಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಈ ಒಂದು ಪ್ರಕರಣದಲ್ಲಿ ಬೇರೆ ವಿಚಾರಗಳನ್ನು ಇಟ್ಟುಕೊಂಡು, ದಂಡ ಹಾಕುವಂತಹ ಮತ್ತು ಶಿಕ್ಷೆಯನ್ನು ವಿಧಿಸುವಂತಹ ಕೆಲಸ ಶಿಕ್ಷಣ ಕ್ಷೇತ್ರದಲ್ಲಿ ಆಗಬಾರದು. ಇವತ್ತಿನ ದಿವಸ ಶಿಕ್ಷಣ ಕ್ಷೇತ್ರವನ್ನು ಅತ್ಯಂತ ಪವಿತ್ರವಾಗಿ ನೋಡತಕ್ಕಂಥ ಸಂದರ್ಭದಲ್ಲಿ ಮೊದಲ ಬಾರಿಗೆ ಮೂರು ವರ್ಷ ಮತ್ತು ಎರಡನೇ ಬಾರಿಗೆ ಐದು ವರ್ಷ ಶಿಕ್ಷೆ ಎನ್ನತಕ್ಕಂಥದ್ದು ಮತ್ತು ಜುಲ್ಮಾನೆ ಹಾಕುವಂಥದ್ದನ್ನು ಬಿಟ್ಟು ಬೇರೆ ರೀತಿಯಿಂದ ಅವರನ್ನು ಶಿಕ್ಷಿಸುವಂಥದ್ದು, ಈಗಾಗಲೇ ಮಾನ್ಯ ಸದಸ್ಯರಾದಂತಹ ಶ್ರೀ ವಿ.ಎಸ್.ಉಗ್ರಪ್ಪ ನವರು ಹೇಳಿದ ಹಾಗೆ ಇನ್‌ಕ್ರಿಮೆಂಟ್ ಕಟ್ ಮಾಡುವುದಾಗಲಿ ಅವರನ್ನು ಹಿಂಬಡ್ತಿ ಮಾಡತಕ್ಕಂಥ ವಿಚಾರವನ್ನು ತಂದುಕೊಂಡು ಅವರನ್ನು ಗುರಿ ಮಾಡಬೇಕೆಂದು ಹೇಳುತ್ತಾ, ಜೊತೆಗೆ ಶಿಕ್ಷಣ ಸಂಸ್ಥೆಗಳ ಬಗ್ಗೆ ಹೇಳತಕ್ಕಂಥ ಸಂದರ್ಭದಲ್ಲಿ ಮೂರು ವರ್ಷಗಳ ಕಾಲ ಶಿಕ್ಷಣ ಸಂಸ್ಥೆಗಳನ್ನು ಮುಚ್ಚಿದರೆ, ಸಾವಿರಾರು ಶಿಕ್ಷಣ ಸಂಸ್ಥೆಗಳು ಮತ್ತು ಹತ್ತು ಸಾವಿರ ಮಕ್ಕಳ ಮುಂದಿನ ಜೀವನದ ಗತಿಯೇನು? ಅವರು ಯಾವ ಸ್ಕೂಲಿನಲ್ಲಿ ಮತ್ತು ಕಾಲೇಜಿಗೆ ಹೋಗಿ ಶಿಕ್ಷಣವನ್ನು ಪಡೆಯಬೇಕು ಎನ್ನುವಂತಹ ಸಮಸ್ಯೆ ಕೂಡ ಇಲ್ಲಿ ಬರುತ್ತಿದೆ. ಇವತ್ತು ಖಾಸಗಿ ಸಂಸ್ಥೆ ಇದ್ದರೆ ಅದನ್ನು ಮುಚ್ಚುತ್ತಿದ್ದೇವೆ, ಈಗ ಸರ್ಕಾರಿ ಸಂಸ್ಥೆ ಇತ್ತು, ಆ ಸರ್ಕಾರಿ ಸಂಸ್ಥೆಯಲ್ಲಿ ಈ ತರಹ ಏನಾದರೂ ಪರೀಕ್ಷೆಯಲ್ಲಿ ಅಕ್ರಮ ನಡೆದಾಗ, ಆ ಸಂಸ್ಥೆಯನ್ನು ಮುಚ್ಚುವುದಕ್ಕೆ ಸಾಧ್ಯವಾಗುತ್ತದೆಯೇ? ಸರ್ಕಾರಿ ಶಾಲೆಯನ್ನು ನಾವು ಬಂದ್ ಮಾಡಲಿಕೆ ಸಾಧ್ಯವಿದೆಯೇ ಎನ್ನುವುದನ್ನು ಕೂಡ ಇವತ್ತಿನ ದಿವಸ ಗಮನಿಸಬೇಕು. ನಾವು ಮೊನ್ನೆ ತುಮಕೂರಿನಲ್ಲಿ ನೋಡಿದ್ದೇವೆ, ಮಕ್ಕಳ ಊಟದಲ್ಲಿ ವಿಷಾಹಾರದ ಪರಿಣಾಮವಾಗಿ ಮೂರ್‍ನಾಲ್ಕು ಮಕ್ಕಳು ಸತ್ತರು, ಯಾರೋ ಒಬ್ಬರು ಮಾಡಿದ ತಪ್ಪಿಗಾಗಿ ಇಡೀ ಶಿಕ್ಷಣ ಸಂಸ್ಥೆಯನ್ನು ಮುಚ್ಚುವಂತಹ ಪ್ರಸಂಗ ಸೆಕ್ಷನ್ 121 ರಲ್ಲಿ ಬರತಕ್ಕಂಥದ್ದನ್ನು ಗಮನದಲ್ಲಿಟ್ಟುಕೊಂಡು, ಬೇಕಾದರೆ ಆ ಶಿಕ್ಷಣ ಸಂಸ್ಥೆಯಲ್ಲಿ ನಡೆಸತಕ್ಕಂಥ ಪರೀಕ್ಷೆಯ ಕೇಂದ್ರವನ್ನು ರದ್ದು ಮಾಡಬೇಕು. ಸಂಸ್ಥೆಗಳನ್ನು ಮುಚ್ಚುವಂತಹ ಕೆಲಸ ಈ ಒಂದು ವಿಧೇಯಕದಲ್ಲಿ ಆಗಬಾರದು ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಹೇಳಿ, ನನಗೆ ಹೆಚ್ಚಿಗೆ ಮಾತನಾಡುವುದಕ್ಕೆ ಅವಕಾಶವಿಲ್ಲ, ತಾವು ಈಗಾಗಲೇ ಹೇಳಿದ್ದೀರಿ, ಈ ವಿಧೇಯಕವನ್ನು ಮತ್ತೊಮ್ಮೆ ಪರಿಶೀಲನೆ ಮಾಡಿ, ಇದು ಯಥಾವತ್ತಾಗಿ ಮಂಜೂರು ಆಗಬಾರದು ಎನ್ನುವಂತಹ ವಿಚಾರವನ್ನು ಸದನದ ಗಮನಕ್ಕೆ ತಂದು ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಭಿನಂದನೆಗಳು. ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರಾದಂತಹ ಶ್ರೀ ವಿ.ಎಸ್.ಉಗ್ರಪ್ಪನವರು ಎಲ್ಲಾ ಮಾತನಾಡಿಬಿಟ್ಟಿದ್ದಾರೆ, ಮಾತನಾಡುವುದು ಏನು ಇಲ್ಲ. ನಾನು ಮಂತ್ರಿಗಳನ್ನು ಮತ್ತು ಪರೀಕ್ಷಾ ನೀತಿಯನ್ನು ಸುಧಾರಣೆ ಮಾಡುವುದಕ್ಕೆ ತಂದಿರತಕ್ಕಂಥ ವಿಧೇಯಕವನ್ನು ಸ್ವಾಗತಿಸುತ್ತಾ, ಬಹಳ ಉತ್ತಮವಾದಂತಹ ವಿಧೇಯಕವನ್ನು ಇವತ್ತಿನ ದಿವಸ ಮಂಡಿಸಿದ್ದಾರೆ. ಈ ಪಿ.ಯು.ಸಿ. ಮತ್ತು ಎಸ್.ಎಸ್.ಎಲ್.ಸಿ ಪರೀಕ್ಷೆ ಬಂತು ಎಂದರೆ, ನಮ್ಮ ಕಡೆ ಹಳ್ಳಿಗಳಲ್ಲಿ ಒಂದು ಗಾದೆ ಮಾತು ಹೇಳುತ್ತಾರೆ, ಯಾರು ಇದನ್ನು ತಪ್ಪಾಗಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅರ್ಥೈಸಿಕೊಳ್ಳಬಾರದು 'ಬಾಣಂತಿ ಬಿಳುಚಿಕೊಂಡ ಹಾಗೆ ಬಿಳುಚಿಕೊಂಡು ಬಿಟ್ಟಿದ್ದಿಯಲ್ಲೋ' ಎಂದು ಹೇಳುತ್ತಾರೆ. ಓದುವಂತಹ ಮಕ್ಕಳ ಮನೆಯಲ್ಲಿ ಕೇಬಲ್ ಕಿತ್ತು ಹಾಕಿಬಿಡುತ್ತಾರೆ. ಟಿ.ವಿ ನೋಡುವುದಿಲ್ಲ, ಒಂದು ಹಬ್ಬ, ಒಂದು ಫಂಕ್ಷನ್ ಏನೂ ಮಾಡುವುದಿಲ್ಲ, ಏನಾದರೂ ನೆಂಟರು ಮನೆಗೆ ಹೋದರೆ ಹೆಣ್ಣು ಮಗಳೋ ಅಥವಾ ಮಗನೋ ರೂಮ್‌ನಲ್ಲಿ ಓದುತ್ತಿರುತ್ತಾನೆ. ನಾವು ಹೋಗಿ ಕುಳಿತುಕೊಂಡರೆ ಮೆಲ್ಲಗೆ ಮಾತನಾಡುತ್ತಾರೆ, ಹೊರಗೆ ಕರೆದುಕೊಂಡು ಬಂದು ಮಾತನಾಡುತ್ತಾರೆ ಏಕೆಂದರೆ ನಾವು ಜೋರಾಗಿ ಮಾತನಾಡಿದರೆ ಅವರಿಗೆ ತೊಂದರೆಯಾಗುತ್ತದೆಂದು. ಮನೆಯೇ ಒಂದು ರೀತಿಯ ಕರ್ಫ್ಯೂ, 144 ಸೆಕ್ಷನ್ ಇದ್ದ ಹಾಗೆ, ಎಲ್ಲಿ ಪಿ.ಯು.ಸಿ. ಮತ್ತು ಎಸ್.ಎಸ್.ಎಲ್.ಸಿ ಮಕ್ಕಳು ಓದುತ್ತಿದ್ದಾರೆಂದರೆ ಅವರ ಮನೆಯಲ್ಲಿ ಒಂದು ಪ್ರವಾಸಕ್ಕೆ ಹೋಗುವುದಿಲ್ಲ, ಮದುವೆ ಮತ್ತು ಮುಂಜಿಗೆ ಹೋಗುವುದಿಲ್ಲ, ಆ ರೀತಿ ಅವರನ್ನು ಕಾಯ್ದುಕೊಂಡು, ಜೋಪಾನವಾಗಿ ಅವನ ಭವಿಷ್ಯದ ಪ್ರಶ್ನೆ ಎಂದು ಹೇಳಿ, ನೋಡಪ್ಪ ನಿನಗೆ 15-16 ವರ್ಷ, ನೀನು 70-80 ವರ್ಷ ಬದುಕುತ್ತೀಯಾ, ಈ ಎರಡು ವರ್ಷ ಕಣಯ್ಯಾ ನೀನು ಓದಬೇಕು, ಅಂದರೆ ಅಷ್ಟು ಜಾಗ್ರತೆಯನ್ನು ಮಾಡುತ್ತಾರೆ. ಅಂದರೆ ಇವೊತ್ತು ಸ್ಪರ್ಧಾತ್ಮಕವಾದಂತಹ ಯುಗ, ಈಗ ಶೇಕಡಾ 80ರಷ್ಟು ಅಂಕಗಳನ್ನು ಪಡೆದರೂ ಸಾಲುವುದಿಲ್ಲ. ಈಗ ಪಿ.ಇ.ಎಸ್, ಬಿ.ಎಂ.ಎಸ್ ಮತ್ತು ಆರ್.ವಿ. ಯಂತಹ ಕಾಲೇಜುಗಳಲ್ಲಿ ಸೀಟ್ ತೆಗೆದುಕೊಳ್ಳಬೇಕು, ಒಳ್ಳೆಯ ಪ್ರತಿಷ್ಠಿತ ಕಾಲೇಜಿನ ಕ್ಯಾಂಪಸ್‌ನಲ್ಲಿ ಕೆಲಸ ಹುಡುಕಿಕೊಂಡು ಬಂದು ಕೆಲಸ ಕೊಡುವಂತಹ ಮತ್ತು ಕ್ಯಾಂಪಸ್‌ನಲ್ಲಿ ನೀವು ಸೆಲೆಕ್ಷನ್ ಆಗಬೇಕಾದರೆ, 90%, 95% ಮೇಲೆ ಇವತ್ತಿನ ದಿವಸ ಅವರಿಗೆ 95% ಅಂಕಗಳು ಸಹ ಸಾಲುತ್ತಿಲ್ಲ. 95%, .05% ಅಂತಹ competition ಇರುವಂತಹ ಯುಗ ಇದು. ಸ್ಪರ್ಧಾತ್ಮಕ ಯುಗ, ಮಕ್ಕಳನ್ನು ನೋಡಿದರೆ, ಏಕಪ್ಪ ಬೇಕು ಈ ಶಿಕ್ಷಣ ಅನಿಸುತ್ತದೆ.

**ಉಪ ಸಭಾಪತಿಯವರು:-** ಈಗ ಈ ವಿಧೇಯಕದ ಬಗ್ಗೆ ಏನು ಮಾಡಬೇಕು ಅದನ್ನು ಹೇಳಿ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೆ, ಈಗ ಎಲ್ಲರಿಗೂ ಅರ್ಧ ಗಂಟೆ ಕೊಟ್ಟಿದ್ದೀರಾ, ನಾನು ಎರಡು ನಿಮಿಷ ಮಾತನಾಡಿದರೆ ಆಗುವುದಿಲ್ಲವೆನ್ನುತ್ತೀರಾ. ಕುಳಿತುಕೊಳ್ಳಿ ಎಂದು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ. ಮಾನ್ಯ ಸಭಾಪತಿಯವರೆ, ನಾನು ಮಾತನಾಡುವುದೇ ಕಡಿಮೆ, ಎರಡು ನಿಮಿಷ ಮಾತನಾಡುತ್ತೇನೆ.

**ಉಪ ಸಭಾಪತಿಯವರು:-** ನೀವು ಈ ವಿಧೇಯಕದ ಬಗ್ಗೆ ಮಾತನಾಡಿ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೆ, ಅಂತಹ ಎಕ್ಸಾಮ್ ಸ್ವಾಮಿ, ಅಷ್ಟು ಕಷ್ಟಪಟ್ಟು ಮಕ್ಕಳು ಎಕ್ಸಾಮ್‌ಗೆ ಓದುತ್ತಾರೆ. ಎಕ್ಸಾಮ್‌ಗೆ ಓದಿಕೊಂಡು, ಅದು ಆದ ಮೇಲೆ ಯಾರೋ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆ ಲೀಕ್ ಆಗಿ ಹೋಯಿತು ಎನ್ನುತ್ತಾರೆ. ಎಕ್ಸಾಮ್ ಮುಗಿದು ಹೋದರೆ ಸಾಕು ಎಂದು ಕಾಯುತ್ತಿರುತ್ತಾರೆ, ಎಕ್ಸಾಮ್

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮುಗಿಯುತ್ತದೆ, ಎಕ್ಸಾಮ್ ಮುಗಿದ ತಕ್ಷಣ, ಎ.ಇ.ಇ.ಇ., ಜೆ.ಇ.ಇ.ಟಿ, ಸಿ.ಇ.ಟಿ., ಕೆ.ಎ.ಟಿ, ಎನ್.ಇ.ಇ.ಟಿ ಮಾದರಿಯ 28 ಎಕ್ಸಾಮ್ ಅವು ಯಾವ್ಯಾವೋ ಇನ್ಸ್‌ಟಿಟ್ಯೂಷನ್ ಕರೆಯುವುದು. ಆ ಮಕ್ಕಳಂತೂ ಎಷ್ಟು ಹೊತ್ತಿಗೆ ರಿಸಲ್ಟ್ ಬರುತ್ತದೆಂದು ಕಾಯುತ್ತಿರುತ್ತಾರೆ. ಅದರ ಮಧ್ಯೆ ಒಂದು ಪೇಪರ್ ಲೀಕ್ ಆಗಿ ಹೋಗುತ್ತದೆ. ಆ ಪೇಪರ್ ಲೀಕ್ ಆದ ತಕ್ಷಣ ಒಂದು ವಾರ, ಹದಿನೈದು ದಿನ ಮುಂದಕ್ಕೆ ಹೋಗುತ್ತದೆ, ಆ ಮಕ್ಕಳಿಗೆ ಇನ್ನು ಹದಿನೈದು ದಿನ ಟೆನ್ಷನ್. ಆ ಮಾನಸಿಕವಾದಂತಹ ತೊಳಲಾಟ, ಸ್ವಾಮಿ ನಮ್ಮ ಶತ್ರುಗಳಿಗೂ ಬೇಡ. ಆದುದರಿಂದ ಇವತ್ತಿನ ದಿವಸ ಏನು ಕಾನೂನು ತರುತ್ತಿದ್ದಾರಲ್ಲ, ಕಾನೂನನ್ನು ಮತ್ತಷ್ಟು ಕಠಿಣವಾಗಿ ತರುವಂತಹ, ಏಕೆ ಸ್ವಾಮಿ ಶಿಕ್ಷಕರಿಗೆ ಅನ್ವಯವಾಯಿತು ಇದು, ಏಕೆ ಬಡ ಶಿಕ್ಷಕರಿಗೆ ಅನ್ವಯವಾಗುತ್ತದೆ? ನಾನು ಹುಡುಕುತ್ತಾ ಹೋಗುತ್ತೇನೆ, ನನಗೂ ಕನ್ನಡ ಬರುವುದಿಲ್ಲವೇನೋ ಎಂದು, ಶಿಕ್ಷಕರು ಎಂದು ಎಲ್ಲೂ ಇಲ್ಲವಲ್ಲ ಸ್ವಾಮಿ. ಯಾರು ಕಾಪಿ ಹೊಡೆಸುತ್ತಿದ್ದಾರೆ, ಯಾರು ಸಹಕಾರ ಕೊಡುತ್ತಿದ್ದಾರೆ, ಯಾರು ತಪ್ಪು ಮಾಡುತ್ತಿದ್ದಾರೆ ಅವರ ಮೇಲೆ ತಾನೆ ಇದನ್ನು ಮಾಡುತ್ತಿರುವುದು. ಇದಕ್ಕೆ ಏಕೆ ಶಿಕ್ಷಕರು ಬಡ ಶಿಕ್ಷಕರ ಪರವಾಗಿ ನೀವು ಅನ್ಯಾಯ ಮಾಡುತ್ತಿದ್ದೀರಿ, ಸರ್ಕಾರ ಏನೋ ಮಾಡಿಬಿಡುತ್ತದೆ, ನಾವೆಲ್ಲಾ ಶಿಕ್ಷಕರ ಪರವಾಗಿ ಹೋರಾಟ ಮಾಡಿ ಅವರಿಗೆ ರಕ್ಷಣೆ ಕೊಡುತ್ತಿದ್ದೇವೆ, ನೀವು ತಪ್ಪು ಮಾಡುತ್ತಿದ್ದೀರಿ ಅರ್ಥೈಸುವ ರೀತಿಯಲ್ಲಿ ಇಲ್ಲಿ ಏಕೆ ಚರ್ಚೆ ನಡೆಯುತ್ತಿದೆ. ಯಾರು ತಪ್ಪು ಮಾಡುತ್ತಾರೋ ಅವರು ಅನುಭವಿಸುತ್ತಾರೆ ಬಿಡಿ. ನಮ್ಮ ಮೇಷ್ಟುಗಳೆಲ್ಲರೂ ಎಷ್ಟು ಒಳ್ಳೆಯವರಿದ್ದಾರೆ, ಈ ತರಹ ಮಾತನಾಡಿ ಮೇಷ್ಟ್ರುಗಳಿಗೆಲ್ಲಾ ಕೆಟ್ಟ ಹೆಸರು ತರುತ್ತೀರಿ. ಯಾರು ಪಾಪ ನೀರು ಕೊಡುವವನೋ, ಕಾಪಿ ಹೊಡೆಯುವವನೋ, ಇನ್ನೊಬ್ಬನೋ.

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ,...

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೆ, ದಯಮಾಡಿ ಮಾನ್ಯ ಸದಸ್ಯರಾದಂತಹ ಶ್ರೀ ರಮೇಶ್‌ಬಾಬುರವರನ್ನು ಕುಳಿತುಕೊಳ್ಳುವುದಕ್ಕೆ ಹೇಳಿ. ಅವರು ನಂತರ ಮಾತನಾಡಲಿ.

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ದಯಮಾಡಿ ಸೆಕ್ಷನ್ 123ನ್ನು ಪೂರ್ಣವಾಗಿ ಓದಲಿ, ಮೊದಲು ಅವರು ಪ್ರಾವಿಜನ್ ಓದಲಿ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೆ, ಏನು ಸ್ವಾಮಿ ಅಂತಹ ಒಂದು ಸಂದರ್ಭದಲ್ಲಿ, ಓಟು ಹಾಕುತ್ತಾರೆಂದು ಹೇಳಿದರೆ ತಪ್ಪಾಗುತ್ತದೆ ಬೇಡ ಬಿಡಿ. ಓಟು ಹಾಕುತ್ತಾರೆಂದು ಅವರನ್ನು ಓಲೈಸಲಿಕ್ಕೆ ಹೇಳುತ್ತಾರೆಂದು ಮಾನ್ಯ ಸದಸ್ಯರಾದಂತಹ ಶ್ರೀ ಉಗ್ರಪ್ಪನವರು ಹೇಳಿದರು, ನಾನು ಆ ಮಾತನ್ನು ಹೇಳುವುದು ಬೇಡ. ಆದುದರಿಂದ ನಾನು ಹೇಳುವಂಥದ್ದು, ಮಾನ್ಯ ಸಭಾಪತಿಯವರೆ, ಕಠಿಣವಾದಂತಹ ಕ್ರಮ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತೆಗೆದುಕೊಳ್ಳಬೇಕು. ಜೊತೆಗೆ ಇನ್ನೂ ಒಂದು ಇದೆ, ಸೆಕ್ಷನ್.23ರಲ್ಲಿ ಮೌಲ್ಯಮಾಪನಕ್ಕೆ ಯಾರು ತೊಂದರೆ ಕೊಡುತ್ತಾರೆ, ಮೌಲ್ಯಮಾಪನ ಮಾಡದೆ ಈ ಸಮಯದಲ್ಲಿ ಇಂತಹ ಸಂದರ್ಭ ಉಪಯೋಗಿಸಿಕೊಂಡು ಮುಷ್ಕರ ಮಾಡುತ್ತಾರಲ್ಲ ಸಾರ್, ಸೆಕ್ಷನ್ 24(ಎ)ನಲ್ಲಿ ಏನೇನೂ ತಂದಿದ್ದೀರೋ ದಯಮಾಡಿ 23ಕ್ಕೂ ಅದನ್ನೇ ತನ್ನಿ. ಏಕೆಂದರೆ ಆ ಮೌಲ್ಯಮಾಪನ ಆಗಲಿಲ್ಲವೆಂದರೆ ನಾನು ಆಗಲೇ ಹೇಳಿದ್ದೇನೆ, 128 ಎಕ್ಸಾಮ್, ಅಂದರೆ ಸಿ.ಇ.ಟಿ. ಯಿಂದ ಹಿಡಿದು ಎ.ಇ.ಇ.ಇ ಯಿಂದ ಹಿಡಿದು, ಐ.ಐ.ಟಿ.ಯಿಂದ ಹಿಡಿದು, ಕಾಮೆಡ್-ಕೆ ಹಿಡಿದು, 128 ಎಕ್ಸಾಮ್, ರಿಸಲ್ಟ್‌ನ್ನು ಆ ಮಕ್ಕಳು ಜಾತಕ ಪಕ್ಷಿಯಂತೆ ಕಾಯುತ್ತಿರುತ್ತಾರೆ. ಆ ಮಕ್ಕಳನ್ನು ನೋಡಿದರೆ, ಈ ವಿದ್ಯಾಭ್ಯಾಸವೂ ಬೇಡ, ಜೀವನ ಈ ರೀತಿಯಾಗುವುದು ಬೇಡ ಅನಿಸಿಬಿಡುತ್ತದೆ. ಅವರಿಗಿಂತ ಅವರ ಪೋಷಕರು ಅವರನ್ನು ನೋಡಿದರೆ, ನಾನು ಕೂಡ ಒಬ್ಬ ಪೋಷಕನೆ, ನನ್ನ ಮಗಳು ದ್ವಿತೀಯ ಪಿ.ಯು.ಸಿ.ಯಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ, ಎಷ್ಟು ಹೊತ್ತಿಗೆ ಎಕ್ಸಾಮ್ ಮುಗಿಯುತ್ತದೆಯೋ ಅನಿಸಿಬಿಟ್ಟಿದೆ. ಈಗ ಅವಳು ಸುಮಾರು 15 ರಿಂದ 20 ಕೆ.ಜಿ.ಯಷ್ಟು ತೂಕ ಇಳಿದಿದ್ದಾಳೆ. ಊಟ ಮಾಡು ಅಂದರೂ ಊಟ ಮಾಡುವುದಿಲ್ಲ, ನಾವು ಬಲವಂತವಾಗಿ ಊಟ ಕೊಟ್ಟರೆ, ಊಟ ಮಾಡಿದರೆ ನಿದ್ದೆ ಬರುತ್ತದೆಂದು, ಊಟ ಮಾಡಿ ಒಂದು ಲೋಟ ಬಿಸಿ ಹಾಲು ಕುಡಿದು ಬಿಟ್ಟರೆ, ನಿದ್ದೆ ಬರುತ್ತದೆ ಮಲಗಿ ಬಿಡುತ್ತಾರೆ. ಹೀಗಿರುವಾಗ ಈ ಉತ್ತಮವಾದಂತಹ ಕಾನೂನನ್ನು, ಈಗ ಏನಾದರೂ ಕಾಪಿ ಹೊಡೆದುಬಿಟ್ಟರೆ ತಕ್ಷಣ ಮಂತ್ರಿಗಳ ರಾಜೀನಾಮೆ ನೀಡಿ ಎಂದುಬಿಡುತ್ತಾರೆ. ಈ ಹಿಂದೆ ಮಾನ್ಯ ಸಚಿವರಾಗಿದಂತಹ ಶ್ರೀ ಕಿಮ್ಮನೆ ರತ್ನಾಕರ್‌ರವರು ಎಷ್ಟು ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗುತ್ತಿದ್ದರು, ರಾಜೀನಾಮೆ ತೆಗೆದುಕೊಂಡು ಅವರನ್ನು ಮನೆಗೆ ಕಳುಹಿಸಿಬಿಟ್ಟರು, ಈಗ ಇರುವಂತಹ ಸಚಿವರಾದಂತಹ ಶ್ರೀ ತನ್ವೀರ್ ಸೇಠ್‌ರವರು ಮಾತು ಕೇಳಿದರೆ, ಇವರನ್ನೂ ಮನೆಗೆ ಕಳುಹಿಸಿಬಿಡುತ್ತಾರೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವರನ್ನು ಅವರೇ ಕಳುಹಿಸಿದ್ದು, ನಮಗೆ ಏಕೆ ಹೇಳುತ್ತಿದ್ದಾರೆ?

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದಂತಹ ಶ್ರೀ ಪುಟ್ಟಣ್ಣನವರನ್ನ ತಾವು ಕುಳಿತುಕೊಳ್ಳುವುದಕ್ಕೆ ಹೇಳಿ. ಆದುದರಿಂದ ಈಗ ಬಹಳ ಒಂದು ಒಳ್ಳೆಯ ಕಾನೂನು ತರುತ್ತಿದ್ದಾರೆ, ದಯಮಾಡಿ ಇನ್ನು ಒಂದಷ್ಟು ಕಠಿಣ ಈಗ 23ಕ್ಕೂ ಮತ್ತು 24(ಎ)ಗೆ ಏನೂ ತಂದಿದ್ದೀರೋ ಅದಕ್ಕೂ ಅಷ್ಟೇ ಶಿಕ್ಷೆಯಾಗಬೇಕು ಸ್ವಾಮಿ. ಈಗ 16-18 ವರ್ಷದ ಒಳಗಡೆ ಇರುವಂತಹ ಮಕ್ಕಳಿಗೆ ಮೂರು ವರ್ಷ ಜಾಸ್ತಿಯಾಯಿತು. ಮಾನ್ಯ ಸದಸ್ಯರಾದಂತಹ ಶ್ರೀ ಉಗ್ರಪ್ಪನವರು ಹೇಳಿದ ಹಾಗೆ ಅವರಿಗೆ ಒಂದು ಎಕ್ಸಾಮ್ ಡಿಬಾರ್ ಮಾಡಿ, ಪಾಪ ಅವರಿಗೆ ಇನ್ನೂ ತಿಳುವಳಿಕೆಯೇ ಇರುವುದಿಲ್ಲ, ಅವರಿಗೆ ಏಕೆ ಸ್ವಾಮಿ ಮೂರು ವರ್ಷ ತೆಗೆದುಕೊಂಡು ಹೋಗಬೇಕು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ರಿಮಿನಲ್‌ಗಳ ತರಹ, ತಪ್ಪು ಮಾಡುವವರನ್ನು ನೋಡಿ ಕ್ರಿಮಿನಲ್‌ಗಳ ತರಹ. ದಯಮಾಡಿ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ನಮಸ್ಕಾರ ಸ್ವಾಮಿ.

**ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಮ್ಮ ಹಿರಿಯ ಸದಸ್ಯರಾದಂತಹ ಶ್ರೀ ರಾಮಚಂದ್ರಗೌಡರು ಹೇಳಿದ ಹಾಗೆ, ಮೊದಲು ಶಿಕ್ಷೆ ಅನುಭವಿಸುವುದು, ಜೈಲಿಗೆ ಹಾಕುವುದು ಕಾನೂನಿನಲ್ಲಿದೆ. ಅದು ಯಥಾವತ್ತಾಗಿ ಇರಲಿ. ಅದನ್ನು ಹೆಚ್ಚುಮಾಡಿ, ಅದರ ನಿಯಂತ್ರಣ ಆಗುತ್ತಿಲ್ಲವೆಂಬುದಕ್ಕಾಗಿ ಈ ಹೊಸ ವಿಧೇಯಕವನ್ನು ಜಾರಿಗೆ ತಂದು, ಜಾಸ್ತಿ ಶಿಕ್ಷೆ ಮಾಡಿದರೆ ಅದಕ್ಕೆ ಅರ್ಥ ಇರುತ್ತದೆ ಎಂಬುದು ಒಂದನೇ ಅಂಶ. ಎರಡನೆಯದಾಗಿ, ಮಾನ್ಯ ಸದಸ್ಯರಾದಂತಹ ಶ್ರೀ ಉಗ್ರಪ್ಪನವರು ಹೇಳಿದ ಹಾಗೆ, ಆ ಮಕ್ಕಳಿಗೆ ಮೂರು ವರ್ಷ ಡಿಬಾರ್ ಮಾಡುವ ಬಗ್ಗೆ ಇರುವ ಅಂಶವನ್ನು ತೆಗೆಯಬೇಕು, ಶಿಕ್ಷಣ ಸಂಸ್ಥೆಯಲ್ಲಿ ಪರೀಕ್ಷಾ ಅಕ್ರಮವಾದಾಗ, ಆ ವರ್ಷದ ಪರೀಕ್ಷಾ ಕೇಂದ್ರವನ್ನು ರದ್ದುಪಡಿಸಿ ಎನ್ನುವುದು ಒಂದು. ಮತ್ತೆ ಇನ್ನೊಂದು ಏನೆಂದರೆ, ಈ ವಿಧೇಯಕದ ಬಗ್ಗೆ ಏನೂ ಈಗಾಗಲೇ ಸದನ ಸಮಿತಿ ಆಗಿತ್ತೋ, ಆ ಸಮಿತಿಯ ವರದಿಯ ಬಗ್ಗೆ ಈಗಾಗಲೇ ನಮ್ಮ ಕೆಲವು ಸದಸ್ಯರುಗಳಲ್ಲಿ ಕೇಳಿದ್ದೇವೆ, ಅವರು ಸಹಿ ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ, ಸಹಿ ಮಾಡದೆ ಇದ್ದನ್ನು ಮಂಡಿಸಲು ಬಂದಿರುವುದಕ್ಕೆ ಈ ತರಹದ ಅವಾಂತರಗಳು ಸೃಷ್ಟಿ ಆಗಿರುತ್ತವೆ. ಅವರೆಲ್ಲರ ಒಮ್ಮತದ ಅಭಿಪ್ರಾಯವನ್ನು ಪಡೆದುಕೊಂಡು, ಎಲ್ಲರ ಸಹಿಯನ್ನು ಪಡೆದುಕೊಂಡು ಈ ಒಂದು ವಿಧೇಯಕವನ್ನು ಮಂಡಿಸಿದ್ದರೆ ಸರಿ ಆಗುತ್ತಿತ್ತೋ ಏನೋ? ಮಾನ್ಯ ಸದಸ್ಯರಾದಂತಹ ಶ್ರೀ ಪುಟ್ಟಣ್ಣನವರನ್ನು ಕೇಳಿದರೆ ನಾನು ಸಹಿ ಹಾಕಿಲ್ಲವೆಂದು ಹೇಳುತ್ತಾರೆ, ಮಾನ್ಯ ಸದಸ್ಯರಾದಂತಹ ಶ್ರೀ ಕೆ.ಟಿ.ಶ್ರೀಕಂಠೇಗೌಡರನ್ನು ಕೇಳಿದರೆ ನಾನು ಸಹಿ ಮಾಡಿಲ್ಲವೆಂದು ಹೇಳುತ್ತಾರೆ. ಈಗ ಎಲ್ಲರ ಅಭಿಪ್ರಾಯ ತೆಗೆದುಕೊಂಡು ಮಂಡನೆ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಇದು ಯಾವ ನ್ಯಾಯ.

*(271) 17.03.2017 02.50 LL-RN*

**ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು):-** ಮಾನ್ಯ ಸಭಾಪತಿಯವರೆ, ಎಂಟು ಜನ ಮಾನ್ಯ ಸದಸ್ಯರುಗಳು ವರದಿಯಲ್ಲಿ ಸಹಿ ಹಾಕಿದ್ದಾರೆ.

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಎಲ್ಲರೂ ಸಹಿ ಮಾಡಿದ್ದಾರೆಂದು ಹೇಳಿದ್ದಾರೆ.

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ಮಾನ್ಯ ಶ್ರೀಕಂಠೇಗೌಡರೆ, ನಾನು ಮಾತನಾಡುತ್ತೇನೆ. ಹಾಗಾದರೆ, ಮಾನ್ಯ ಸಚಿವರು ಸದನಕ್ಕೆ ತಪ್ಪು ಮಾಹಿತಿ... **(ಗೊಂದಲ)** ಒಂದು ನಿಮಿಷ ಮಾನ್ಯ ಶ್ರೀಕಂಠೇಗೌಡರೆ. ಹಾಗಾದರೆ, ಮಾನ್ಯ ಸಚಿವರು ಈ ವಿಧೇಯಕವನ್ನು ಮಂಡನೆ ಮಾಡುವ ಸಮಯದಲ್ಲಿ ಇಬ್ಬರು ಸದಸ್ಯರು ವರದಿಗೆ ಸಹಿ ಹಾಕಿಲ್ಲವೆಂದು ಹೇಳಿದ್ದರೆ ಸದನಕ್ಕೆ ಸರಿಯಾದಂತಹ ಅರ್ಥ ಸಿಗುತ್ತಿತ್ತು. ಹಾಗಾದರೆ, ಮಾನ್ಯ ಸಚಿವರು ಸದನಕ್ಕೆ ಸುಳ್ಳು ಮಾಹಿತಿ ಕೊಟ್ಟಂತಾಯಿತು. ಏತಕ್ಕೆ, ಈ ವಿಧೇಯಕವನ್ನು ಮಾಡಲೇಬೇಕೆಂದು ಹೊರಟಿದ್ದಾರೆ? ಖಂಡಿತವಾಗಿ ನನಗೆ ಅರ್ಥವಾಗುತ್ತಿಲ್ಲ. ಇದರಲ್ಲಿ ನನ್ನ ಒಂದು ವೈಯಕ್ತಿಕ ಅಭಿಪ್ರಾಯವೆಂದರೆ, ಈ ವಿಧೇಯಕವನ್ನು ತಂದಂತಹ ಉದ್ದೇಶ ಬೇರೆ ಇತ್ತು. ಅದು ಬೇರೆ ರೀತಿ ತಿರುಗಿದೆ. ಕಾರಣ ಇಷ್ಟೇ. ಕಳೆದ ಬಾರಿ ನಮ್ಮ ಪಿ.ಯು. ಉಪನ್ಯಾಸಕರು ಮುಷ್ಕರ ಮಾಡಿದಂತಹ ಸಂದರ್ಭದಲ್ಲಿ 'ಕುಮಾರನಾಯಕ್ ವರದಿ' ಅನುಷ್ಠಾನವಾಗಬೇಕೆಂದು ಹೇಳಿ ಮೌಲ್ಯಮಾಪನವನ್ನು ಮಾಡುವುದಿಲ್ಲವೆಂದು ಹೇಳಿದರು. ಆ ಸಮಯದಲ್ಲಿ...

**ಉಪ ಸಭಾಪತಿಯವರು:-** ಮಾನ್ಯ ಚೌಡರೆಡ್ಡಿಯವರೆ, ಈಗ ಆ ವಿಚಾರದ ಬಗ್ಗೆ ಚರ್ಚೆ ಬೇಡ. ಈ ವಿಧೇಯಕದ ಬಗ್ಗೆ ಮಾತನಾಡಿ.

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೆ, ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಂಡು, ಈಗ ಮೌಲ್ಯಮಾಪನಕ್ಕೆ ಮತ್ತೆ ಏನು ತೊಂದರೆ ಮಾಡುತ್ತಾರೆ, ಅದಕ್ಕೆ ಈ ರೀತಿ ಕಠಿಣ ಕಾನೂನುಗಳು ತರುವಂತಹ ವಿಧೇಯಕವನ್ನು ತರುವುದಕ್ಕೆ ಹೊರಟು...

**ಉಪ ಸಭಾಪತಿಯವರು:-** ಈಗ ಏನು ಮಾಡಬೇಕು, ಅದನ್ನು ಹೇಳಿ.

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ:-** ಮಾನ್ಯ ಸಭಾಪತಿಯವರೇ, ಇದು ತದ್ವಿರುದ್ಧವಾಗಿದೆ. ಈಗ ಎಲ್ಲಾ ಸದಸ್ಯರು ಇದಕ್ಕೆ ಸಹಿ ಹಾಕಿರುವುದಿಲ್ಲ. ದಯವಿಟ್ಟು, ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

**ಶ್ರೀ ಆರ್.ಪ್ರಸನ್ನ ಕುಮಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆಗಳು. ಏನು ಶಿಕ್ಷಣ ಸಚಿವರು ಈ ವಿಧೇಯಕವನ್ನು ತೆಗೆದುಕೊಂಡು ಬಂದಿದ್ದಾರೆ ಆ ವಿಧೇಯಕಕ್ಕೆ ನಾನು ಸಂಪೂರ್ಣವಾದ ಬೆಂಬಲವನ್ನು ಕೊಡುತ್ತೇನೆ. ಕಾರಣ, ನಮ್ಮ ಸಮಾಜದಲ್ಲಿ ಶಿಕ್ಷಕರಿಗೆ ಮತ್ತು ವೈದ್ಯರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರದೇ ಆದಂತಹ ಒಂದು ಗೌರವವಿದೆ. ಶಿಕ್ಷಕರು ಈ ಸಮಾಜವನ್ನು ನಿರ್ಮಾಣ ಮಾಡುವಂತಹ, ನಮಗೆ ಉತ್ತಮವಾದಂತಹ ಸಮಾಜವನ್ನು ಕೊಡುವಂತಹ ಕೆಲಸ ಮಾಡುತ್ತಿರುತ್ತಾರೆ. ಈಗ ಯಾರು ತಪ್ಪು ಮಾಡುತ್ತಾರೆ ಅವರಿಗೆ ಶಿಕ್ಷೆಯಾಗುತ್ತದೆ. ಇದರಲ್ಲಿ ತಪ್ಪು ಮಾಡದಿರುವಂತಹ ಶಿಕ್ಷಕರಿಗೆಲ್ಲಾ ಶಿಕ್ಷೆ ಕೊಡುವಂತಹ ಪ್ರಶ್ನೆಯಿಲ್ಲ. ಇದೊಂದು ಹೆದರಿಕೆಗಿರುವ ಕಾನೂನು. ಹಾಗಾಗಿ ಈ ಒಂದು ವಿಧೇಯಕವನ್ನು ಏನು ಸಚಿವರು ಮಂಡಿಸಿದ್ದಾರೆ ಅದನ್ನು ಸಂಪೂರ್ಣವಾಗಿ ಇದೇ ರೀತಿ ನಾನು ಬೆಂಬಲಿಸುತ್ತಿದ್ದೇನೆ. ಈ ವಿಧೇಯಕವನ್ನು ಅನುಮೋದನೆ ಮಾಡಬೇಕೆಂದು ಈ ಸದನದಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಹಾಗಾದರೆ, ವಿದ್ಯಾರ್ಥಿಗಳು ಮೂರು ವರ್ಷ ಡಿಬಾರ್ ಆದರೂ ಪರವಾಗಿಲ್ಲವೇ?

**ಶ್ರೀ ಆರ್.ಪ್ರಸನ್ನ ಕುಮಾರ್:–** ಮಾನ್ಯ ಸಭಾಪತಿಯವರೇ, ವಿದ್ಯಾರ್ಥಿಗಳು ಮೂರು ವರ್ಷ ಡಿಬಾರ್ ಆಗಬೇಕೆಂದು ನಾನು ಹೇಳುತ್ತಿಲ್ಲ. ನಾನು ಆಗಲೇ ಹೇಳಿದಂತೆ, ಇದೊಂದು ಹೆದರಿಕೆಗಾಗಿ ಇರುವಂತಹ ಕಾನೂನು.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಪುಟ್ಟಣ್ಣನವರೇ, ದಯವಿಟ್ಟು ಬೇಡ. ತಾವು ಸಮಿತಿಯಲ್ಲಿ ಸದಸ್ಯರಿದ್ದೀರಿ. ಆದುದರಿಂದ, ದಯಮಾಡಿ ಬೇಡ. **(ಗೊಂದಲ)** ಆ ಸಮಿತಿಯ ವರದಿಗೆ ಸಮಿತಿಯ ಅಧ್ಯಕ್ಷರು ಸಹಿ ಮಾಡಿದರೆ ಸಾಕು.

**(ಗೊಂದಲ)**

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರು ಇಲ್ಲಿ ಇದ್ದಾಗ ಒಂದು ರೀತಿ ಮಾತನಾಡುತ್ತಾರೆ. ಅಲ್ಲಿ ಹೋದಾಗ ಒಂದು ರೀತಿ ಮಾತನಾಡುತ್ತಾರೆ. ಒಂದು ವೇಳೆ ಅವರು ಇಲ್ಲಿ ಇದ್ದಿದ್ದರೆ ಎದ್ದು ಎದ್ದು ಕುಣಿದುಬಿಡುತ್ತಿದ್ದರು. ಏನು ಮಾಡುವುದಕ್ಕೆ ಆಗುತ್ತದೆ?

**(ಗೊಂದಲ)**

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ಕೂಡ ಅಲ್ಲಿ ಇದ್ದಾಗ ಹೇಗೆ ಇದ್ದರೆಂದು ಅರ್ಥ ಮಾಡಿಕೊಳ್ಳಲಿ. ಅನೇಕ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ, ಒಂದು ನಿಮಿಷ.

**ಶ್ರೀ ಕೆ.ಸಿ. ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಜವಾಬು ಕೊಡುವಾಗ ನಾನು ಅಡ್ಡ ಬಂದೆ. ಒಂದೇ ಒಂದು ವಿಷಯವನ್ನು ಸದಸ್ಯರಲ್ಲಿ ನಾನು ಕೇಳುತ್ತಿದ್ದೇನೆ. ಪ್ರಶ್ನೆ ಪತ್ರಿಕೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸೋರಿಕೆ. ಇದೊಂದು ದೊಡ್ಡ ಗ್ಯಾಂಗ್ ಇದ್ದ ಹಾಗೆ. ಇದು ಎಲ್ಲಿ ಅಂದರೆ, ಪಿ.ಯು. ಬೋರ್ಡ್‌ನಲ್ಲಾಗಲೀ ಅಥವಾ ಎಸ್‌ಎಸ್‌ಎಲ್‌ಸಿ ಬೋರ್ಡ್‌ನಲ್ಲಾಗಲೀ, ಅಲ್ಲಿ ಅವನಿಂದ ಪ್ರಶ್ನೆಪತ್ರಿಕೆಯನ್ನು ಪ್ರಿಂಟ್ ಅಥವಾ ಡೌನ್‌ಲೋಡ್ ಮಾಡಿಕೊಳ್ಳುವ ದುರಾಚರಣೆ ನಡೆಸುವ ಪ್ರಯತ್ನಗಳಾಗಿರುತ್ತವೆ. ಇದನ್ನು ಅವನು ಏನು ಮಾಡಿಕೊಂಡಿದ್ದಾನೆಂದರೆ, ಕಡಿಮೆ ಅವಧಿಯಲ್ಲಿ ಅಂದರೆ, ತಕ್ಷಣವೇ ಸಾಹುಕಾರ ಆಗಬೇಕು ಎನ್ನುವುದಕ್ಕಾಗಿ ನಕಲು ಪ್ರತಿಗೆ 5 ಲಕ್ಷ, 10 ಲಕ್ಷ ರೂಪಾಯಿ ದರ ನಿಗದಿ ಮಾಡಿಕೊಂಡು, ಅದಕ್ಕೆ ಈಗ ಬರುತ್ತಿರುವಂತಹ ಸಾಧನಗಳೆಂದರೆ, ವ್ಯಾಟ್ಸಾಪ್ ಮುಂತಾದರಲ್ಲಿ ನಕಲು ಪ್ರಶ್ನೆಪತ್ರಿಕೆಗಳನ್ನು ಕಳುಹಿಸುವುದು. ಸರಿ ಅವನನ್ನು ಬಂಧಿಸಿ ಆತನ ವಿರುದ್ಧ ಪ್ರಕರಣ ದಾಖಲಿಸಿ, ಈ ರೀತಿಯ ತಪ್ಪು ಮಾಡಿದರೆ ನಾನು ಜೈಲಿಗೆ ಹೋಗುತ್ತೇನೆಂಬ ಒಂದು ಭಯ ಅವನಿಗೆ ಸೃಷ್ಟಿಯಾಗಬೇಕು, ಆದರೆ ಆತ ಪ್ರಚೋದಿಸುತ್ತಿರುವುದು ಯಾರನ್ನೆಂದರೆ, ಈ ವಿದ್ಯಾರ್ಥಿಗಳನ್ನು. ಅವರದು ಏನು ತಪ್ಪಾಗುತ್ತದೆ? ಇವನು ಕೊಟ್ಟರೆ ಅವನು ತೆಗೆದುಕೊಳ್ಳುತ್ತಾನೆ. ಈತ ನಕಲು ಪ್ರಶ್ನೆಪತ್ರಿಕೆ ಸರಬರಾಜು ಮಾಡಿದರೆ, ಅವನ ಪೋಷಕರು ಏನು ಮಾಡುತ್ತಾರೆ. "ಅರೆ, ಬಂದಿದೆ ನೋಡಪ್ಪಾ, ಆದರೆ ನಮ್ಮ ಹುಡುಗ ಬೇಗ ಉತ್ತೀರ್ಣನಾಗಲಿ" ಎಂದು, ಮೂರು ವರ್ಷ ಅವನ ಜೀವನ ಹಾಳು ಮಾಡುವುದು ಒಳ್ಳೆಯದಲ್ಲವೆನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯವಾಗಿದೆ. ಅದನ್ನು ಒಂದು ದಯವಿಟ್ಟು ಸರಿಪಡಿಸಬೇಕು. ಏಕೆಂದರೆ, ಆತ ಕೊನೆಯ ವ್ಯಕ್ತಿ. ಈ ವರ್ಷ ಸರ್ಕಾರದವರು ಒಂದು ವ್ಯವಸ್ಥೆ ಮಾಡಿದ್ದಾರೆ. ನಾನು ಒಂದೆರಡು ಪರೀಕ್ಷಾ ಕೇಂದ್ರಗಳಿಗೆ ಹೋಗಿದ್ದೆನು. ಜಿಲ್ಲಾಧಿಕಾರಿಗಳಿಗೆ ಈ ಕೆಲಸವನ್ನು ಕೊಟ್ಟಿದ್ದಾರೆ. ಅವರು ಜಿಲ್ಲಾ ಖಜಾನೆಗಳಿಗೆ ಹೋಗಿ ಅದನ್ನು ಓಪನ್ ಮಾಡಿ ಅಲ್ಲಿದ್ದ ಪ್ರತಿಯೊಬ್ಬ ಹಿರಿಯ ಅಧಿಕಾರಿಯನ್ನು ಜಿಲ್ಲೆಯಲ್ಲಿಯ ಆಯಾ ಶಾಲೆಗಳಿಗೆ ಕಳುಹಿಸಿದರೆ ಅವರು ಆ ಪ್ರಶ್ನೆಪತ್ರಿಕೆಗಳನ್ನು ತೆಗೆದುಕೊಂಡು ಅಲ್ಲಿಗೆ ಹೋಗುತ್ತಾನೆ. ಇವನು ನಕಲು ಮಾಡುವುದಕ್ಕೆ ಅದನ್ನು ಕೊಟ್ಟಿರುವುದಿಲ್ಲ, ಅವನು ನಕಲು ಮಾಡಿದನೆಂಬ ಕಾರಣಕ್ಕೆ, ಕೊಟ್ಟವನು ಯಾರೋ ಅವನು ತಪ್ಪಿಸಿಕೊಂಡುಬಿಡುತ್ತಾನೆ. ಇವನನ್ನು ಮೂರು ವರ್ಷ ಡಿಬಾರ್ ಮಾಡುವುದು ಒಳ್ಳೆಯದಲ್ಲ. ಇದನ್ನು ದಯವಿಟ್ಟು ಮಾನವತಾ ದೃಷ್ಟಿಯಿಂದ, ಆ ಯುವಕರ ಜೀವನ ಹಾಳು ಮಾಡುವುದು ಒಳ್ಳೆಯದಲ್ಲ. ಕನಿಷ್ಠ ಪಕ್ಷ ಒಂದು ಪರೀಕ್ಷೆ ಆತನಿಗೆ ಡಿಬಾರ್ ಮಾಡಿ. ಅಷ್ಟು ಶಿಕ್ಷೆ ಸಾಕು. ಏಕೆಂದರೆ, ನಾವು ವ್ಯಾಸಂಗ ಮಾಡುತ್ತಿದ್ದಂತಹ ಸಂದರ್ಭದಲ್ಲಿ ಕೂಡ ಡಿಬಾರ್ ಎನ್ನುವಂತಹ ಪದ್ಧತಿ ಇತ್ತು. ಒಂದು ಪರೀಕ್ಷೆ ಡಿಬಾರ್ ಮಾಡುತ್ತಿದ್ದರು. ಆದುದರಿಂದ, ದಯವಿಟ್ಟು ಇದೊಂದು ತಿದ್ದುಪಡಿ ಮಾಡಿಕೊಡಬೇಕೆಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

**ಶ್ರೀ ತನ್ವೀರ್ ಸೇಠ್:–** ಮಾನ್ಯ ಸಭಾಪತಿಯವರೇ, ಅನೇಕ ಸದಸ್ಯರುಗಳು ಈ ವಿಧೇಯಕದ ಮೇಲೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ. ಈ ಎಲ್ಲಾ ಅನಿಸಿಕೆಗಳಿಗೆ ಮೊಟ್ಟಮೊದಲನೆಯದಾಗಿ ನಾನು ಒಂದಂತು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. 'ಕರ್ನಾಟಕ ಶಿಕ್ಷಣ ಕಾಯ್ದೆ 1983' ನಮ್ಮಲ್ಲಿ ಜಾರಿಯಲ್ಲಿರುವಂತಹದ್ದು. ಕಾನೂನಿಗೆ ತಿದ್ದುಪಡಿ ತರುವಂತಹ ಸಂದರ್ಭದಲ್ಲಿ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತಹ ತಿದ್ದುಪಡಿ ಪ್ರತ್ಯೇಕವಾಗಿ ನಾವು ಶಿಕ್ಷಕರಿಗೆ ಗುರಿ ಮಾಡಿಕೊಂಡು ತಂದಿದ್ದೇವೆ ಎನ್ನುವಂತಹ ಏನು ಮಾತನ್ನಾಡಿದ್ದಾರೆ, ಅದು ನಿಜಕ್ಕೂ ತಪ್ಪು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಯಾರಾದರೂ ಇಂತಹ ಅಕ್ರಮಗಳಿಗೆ ಬಂದಾಗ ಮಾತ್ರ ಅದಕ್ಕೆ ಶಿಕ್ಷೆಯೆನ್ನುವುದನ್ನು ನಾವು ತಂದಿದ್ದೇವೆ. ಬಹಳ ಸ್ಪಷ್ಟವಾದಂತಹ ಮಾತುಗಳು ಮೊದಲು ನಾನು ಮಾತನಾಡುವಂತಹ ಸಂದರ್ಭದಲ್ಲಿ ಈ ರೀತಿಯ ವಿಚಾರಗಳ ಬಗ್ಗೆ ಬೆಳಕು ಚೆಲ್ಲಿದ್ದೇನೆ. 'ಪ್ರಾಯೋಗಿಕ ಪರೀಕ್ಷೆ'ಯೆಂಬ ಪದ ಎಲ್ಲಿ ಬಳಕೆಯಾಗಿದೆ, ಅದು ಪ್ರಾಕ್ಟಿಕಲ್ ಎಕ್ಸಾಮಿನೇಷನ್, ಪೂರಕ ಪರೀಕ್ಷೆಯಲ್ಲ. ಹಾಗಾಗಿ ಪ್ರಾಕ್ಟಿಕಲ್ ಎಕ್ಸಾಮ್ ಮತ್ತು ಪ್ರಿಪರೇಟರಿ ಎಕ್ಸಾಮ್‌ಗಳಲ್ಲಿ ವ್ಯತ್ಯಾಸಗಳು ಬರುತ್ತದೆ. ಮಾನ್ಯ ಸದಸ್ಯರು ಸಂಸ್ಕೃತವೆಂದು ಹೇಳಿದ್ದರಿಂದ ನಾನು ಅದನ್ನು ತಿದ್ದುವುದಕ್ಕೆ ಹೋಗಿರುವುದಿಲ್ಲ. ಪ್ರಾಯೋಜಿಕ ಪರೀಕ್ಷೆಯೆಂದು ಹೇಳಿದಾಗ, ಪ್ರಾಕ್ಟಿಕಲ್ ಪರೀಕ್ಷೆ ಅದು. ಪ್ರಾಕ್ಟಿಕಲ್ ಪರೀಕ್ಷೆಗಳಲ್ಲಿ ಆಗುವಂತಹ ಅಕ್ರಮಗಳನ್ನು ನಾವು ಇಲ್ಲಿ ನಮೂದಿಸಿದ್ದೇವೆ. ಮಕ್ಕಳ ಭವಿಷ್ಯದ ದೃಷ್ಟಿಯಿಂದ, ಮಕ್ಕಳ ಕಳಕಳಿ ಈ ಸದನದಲ್ಲಿ ಏನು ವ್ಯಕ್ತವಾಗಿದೆ, ಅದನ್ನು ನಾನು ಅತ್ಯಂತ ಗೌರವದಿಂದ ಮನ್ನಿಸಿದ್ದೇನೆ. ಇಲ್ಲಿ ಪ್ರಶ್ನೆಪತ್ರಿಕೆ ಸೋರಿಕೆಯಾಗಿ ಮಕ್ಕಳಿಗೆ ಹಂಚಿದಾಗ ಮಾತ್ರ ಮಕ್ಕಳು ಅಪರಾಧ ಮಾಡುವುದೆಂದು ಹೇಳುವಂತಹ ಮಾತು ಹಿರಿಯ ಸದಸ್ಯರಾದ ಮಾನ್ಯ ಕೊಂಡಯ್ಯನವರು ಏನು ಹೇಳಿದರು, ಪ್ರಶ್ನೆ ಪತ್ರಿಕೆ ಸೋರಿಕೆಯಾಗಿಲ್ಲವೆಂದರೂ ಕೂಡ ಯಾರೋ ಸೃಷ್ಟಿ ಮಾಡಿದ್ದನ್ನು ಆಮಿಷಕ್ಕೆ ಮಕ್ಕಳು ಒಳಗಾಗುತ್ತಾರೆ. ಅದರ ಭಯ ಇಡುವಂತಹದ್ದಕ್ಕೆ ನಾವು ಈ ಸೆಕ್ಷನ್ ಇಡಲೇಬೇಕಾಗುತ್ತದೆ. ಮೂರು ವರ್ಷದವರೆಗೂ ಎಂದು ಇರುವಂತಹದ್ದು, ಮೂರು ವರ್ಷ ಅಲ್ಲ. ಬಹಳ ಸ್ಪಷ್ಟವಾಗಿದೆ. ಇಲ್ಲಿ ಪರೀಕ್ಷಾ ಕೇಂದ್ರಗಳು ಮತ್ತು ಸಂಸ್ಥೆಗಳು, ಇವತ್ತು ಅನೇಕ ಸದಸ್ಯರಿಗೆ ಈ ವಿಚಾರ ಗೊತ್ತಿದೆ. ಕೆಲವೊಂದು ಶಿಕ್ಷಣ ಸಂಸ್ಥೆಗಳು ಆ ಶ್ರೇಣಿಗಳಿಗೋಸ್ಕರ, ಆ ರ್‍ಯಾಂಕಿಂಗ್‌ಗೋಸ್ಕರ, ನೂರಕ್ಕೆ ನೂರು ಫಲಿತಾಂಶ ತರುವಂತಹ ಕಾರಣಗಳಿಂದ ಸಾಕಷ್ಟು ಅವ್ಯವಹಾರಗಳು ಮತ್ತು ನಾನಾ ರೀತಿಯ ಅಕ್ರಮಗಳನ್ನು ಮಾಡುತ್ತಿರುವಂತಹದ್ದು. ಇದು ಏನು ಹೊಸದಲ್ಲ. ಇದನ್ನು ನಾವು ಹೇಳಲೇಬೇಕೆನ್ನುವುದು ಕೂಡ ಅಲ್ಲ. ಈಗ ಈ ವಿಧೇಯಕದಲ್ಲಿ ಎಲ್ಲವೂ ಸಮಗ್ರವಾಗಿ ತಂದಿರುವಂತಹ ಕಾರಣ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ವಿದ್ಯಾರ್ಥಿ ಯಾವ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ ಅದೇ ಶಾಲೆಯಲ್ಲಿ ಪರೀಕ್ಷೆ ಬರೆಯಬಾರದೆಂದು ಕಳೆದ ಐದು ವರ್ಷದ ಹಿಂದೆ ತಮ್ಮ ಸರ್ಕಾರ ಇದ್ದಾಗಲೇ ಮಾಡಿರುವಂತಹದ್ದು. ಇವತ್ತು ನಾವು ಪಿ.ಯು.ಸಿ.ಗೆ ಕೂಡ ಅದನ್ನೇ ಮಾನದಂಡವಾಗಿ ಇಟ್ಟುಕೊಂಡಿದ್ದೇವೆ. ಈಗಾಗಲೇ ನಾವು ಹೇಳುವಂತಹದ್ದು, ಕಾನೂನು ಇರುವಂತಹದ್ದು ಇದೆ. ಇದನ್ನು ಇನ್ನಷ್ಟು ಬಿಗಿ ಮಾಡಬೇಕು ಎನ್ನುವಂತಹದ್ದನ್ನು ಎಲ್ಲರೂ ಅರ್ಥ ಮಾಡಿಕೊಂಡಿದ್ದಾರೆ.

ಇವತ್ತು ಒಂದು ಸನ್ನಿವೇಶದಲ್ಲಿ ಮಕ್ಕಳು ಮತ್ತು ಆ ಪೋಷಕರ ಆತಂಕ ಏನು ಇದೆ ಅದನ್ನು ನಾವು ಮನದಲ್ಲಿಟ್ಟುಕೊಂಡು ಕಾನೂನನ್ನು ಮಾಡಬೇಕಾಗಿರುವಂತಹದ್ದು. ತಪ್ಪು ಮಾಡಿದವರಿಗೆ ರಕ್ಷಣೆ ಕೊಡುವುದಕ್ಕಾಗಿಯಲ್ಲ ಇಲ್ಲಿ ನಿರಪರಾಧಿಗೆ ಶಿಕ್ಷೆ ಕೊಡಿ ಎಂದು ನಾವು ಯಾರೂ ಹೇಳುವುದಿಲ್ಲ. ಅಪರಾಧ ಯಾರು ಮಾಡುತ್ತಾರೆ ಅವನಿಗೆ ಶಿಕ್ಷೆ ಕೊಡಿ ಎಂದು ಇರುವುದು. ಈ ಸನ್ನಿವೇಶದಲ್ಲಿ ನನ್ನ ಗೌರವಾನ್ವಿತ ಸದಸ್ಯರು ನಮ್ಮವರು ಯಾರೂ ಇಂತಹ ತಪ್ಪು ಮಾಡುವುದಿಲ್ಲ, ತಾವು ಇಂತಹ ಕಾನೂನು ತಂದರೂ ನಮಗೆ ಏನು ಅನ್ವಯಿಸುವುದಿಲ್ಲ, ನೀವು ಮಾಡಿ ಎನ್ನುವಂತಹ

ವಿಚಾರ ಇವರ ಬಾಯಿಯಲ್ಲಿ ಬರುತ್ತದೆಯೆಂದು ನಾನಾದರೂ ಭಾವಿಸಿದ್ದೆ. ಏಕೆಂದರೆ, ನಾವು ಯಾರನ್ನು ನಮ್ಮ ಜೊತೆ ಇಟ್ಟುಕೊಂಡಿದ್ದೇವೆ, ಅವರು ತಪ್ಪು ಮಾಡುತ್ತಾರೆ ಅವರಿಗೆ ರಕ್ಷಣೆ ಕೊಡಬೇಕು. ಆದುದರಿಂದ, ಅದನ್ನು ಸರಳ ಮಾಡಿ, ಇನ್ನು ಕಡಿಮೆ ಮಾಡಿ ಎನ್ನುವಂತಹ ಮಾತು ಬರಬಾರದು. ಮಾಧ್ಯಮದ ಮೂಲಕ ನಾವು ರಾಜ್ಯದುದ್ದಕ್ಕೂ ಒಂದು ಸಂದೇಶ ಕಳುಹಿಸಬೇಕಾದರೆ ಕರ್ನಾಟಕ ಇವತ್ತು ಶಿಕ್ಷಣ ಕ್ಷೇತ್ರದಲ್ಲಿ ಒಂದು ಮಾದರಿ ಕ್ಷೇತ್ರ. ಅನೇಕರು ಹೇಳಿದರು. ಕೇಂದ್ರ ಸರ್ಕಾರ ಈಗ ಶಿಕ್ಷಣ ನೀತಿ ತರುತ್ತಿದೆ. ಮತ್ತೊಂದು ತರುತ್ತಿದೆ. ಕರ್ನಾಟಕ ಮಕ್ಕಳ ಶಿಕ್ಷಣ ನೀತಿಯೆಂದು ನಾವು ಏನು ನಮ್ಮ ಬಜೆಟ್‌ನಲ್ಲಿಯೂ ಸಹ ನಮೂದಿಸಿದ್ದೇವೆ. ಬಹಳ ಸ್ಪಷ್ಟ ರೂಪದಲ್ಲಿ ಅನೇಕ ವಿಚಾರಗಳನ್ನು ತರಬೇಕೆನ್ನುವುದನ್ನು ನಾವು ಮುಂದಿಟ್ಟುಕೊಂಡಿದ್ದೇವೆ. ಈ ಕಾನೂನನ್ನು ತಂದಿರುವಂತಹದ್ದು, ಅಪರಾಧ ಮಾಡಿದಂತಹವರಿಗೆ ಯಾವುದೇ ಕಾರಣಕ್ಕೆ ಕ್ಷಮೆಯಿಲ್ಲ.

*(272)/17-3-2017/3-00/ಎಲ್‌ಎಂ/ವಿಕೆ*

**ಶ್ರೀ ತನ್ವೀರ್ ಸೇಠ್:-** ಮುಂದು. ಅಪರಾಧವನ್ನು ತಡೆಗಟ್ಟಬೇಕು, ಯಾವುದೆ ಅಪರಾಧಗಳು ನಡೆಯದಂತೆ ಪರೀಕ್ಷೆಗಳು ನಡೆಯಬೇಕು ಎನ್ನುವ ದೃಷ್ಟಿಯಿಂದ ಮತ್ತು ಜನರ ಆತಂಕಕ್ಕೆ ಉತ್ತರ ಕೊಡುವ ರೀತಿಯಲ್ಲಿ ಈ ಕಾನೂನನ್ನು ತರಲಾಗಿದೆ. ಅನೇಕ ವಿಧಾನಗಳು ದುರಪಯೋಗವಾಗಬಾರದು ಎನ್ನುವ ಕಾರಣಕ್ಕಾಗಿ ಪರೀಕ್ಷಾ ಮಂಡಳಿಗೆ ಮತ್ತು ಇಲಾಖೆಗೆ ಅದರ ಜವಾಬ್ದಾರಿಯನ್ನು ಕೊಟ್ಟಿದ್ದೇವೆ. ಸ್ಥಳೀಯ ಮಟ್ಟದಲ್ಲಿ ಯಾರಿಗೂ ಅಧಿಕಾರವನ್ನು ಕೊಟ್ಟಿರುವುದಿಲ್ಲ. ಇದರಲ್ಲಿ ಇರುವ ನ್ಯೂನತೆಗಳ ಬಗ್ಗೆ ಪರಿಶೀಲನಾ ಸಭೆಯಲ್ಲಿ ಚರ್ಚೆ ಮಾಡಿದ್ದೇವೆ. ಸದಸ್ಯರ ಸಲಹೆಗಳನ್ನು ನಾವು ನಮೂದಿಸಿಕೊಂಡಿದ್ದೇವೆ. ಆದ್ದರಿಂದ ಈ ವಿಧೇಯಕವನ್ನು ದಯಾಮಾಡಿ ಪರ್ಯಾಲೋಚಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಗಳೇ, ಪರೀಕ್ಷಾ ಅಕ್ರಮಗಳನ್ನು ತಡೆಯುವ ವಿಚಾರದಲ್ಲಿ ನಮ್ಮ ಸಹಕಾರ ಇವತ್ತು ಇದೆ, ಮುಂದೆಯು ಇರುತ್ತದೆ. ಅದರಲ್ಲಿ ಎರಡು ಪ್ರಶ್ನೆ ಇಲ್ಲ. ಇಲ್ಲಿ ಇರುವ ಪ್ರಶ್ನೆ ಎಂದರೆ, ಪ್ರಶ್ನೆ ಪತ್ರಿಕೆಗಳ ಸೋರಿಕೆ ನೆಪದಲ್ಲಿ.... ಶಿವಕುಮಾರ್‌ರಂತವರನ್ನು ತಂದು ಜೈಲಿಗೆ ಹಾಕಿದರೆ ಖಂಡಿತವಾಗಿ ನಾವು ಬೆಂಬಲ ಕೊಡುತ್ತೇವೆ.

**ಶ್ರೀ ತನ್ವೀರ ಸೇಠ್:-** ಪ್ರಶ್ನೆ ಪತ್ರಿಕೆಗಳ ಸೋರಿಕೆಗೂ ಇದು ಕಡಿವಾಣ ಹಾಕುತ್ತದೆ. ಈ ರೀತಿಯ ಆಂತಕಗಳು ಏಕೆ ಬೇಕು? ಎರಡನೆಯದು ಸಾಮೂಹಿಕವಾಗಿ ನಕಲು ಮಾಡುವುದನ್ನು ಇದರಿಂದ ತಡೆಯಬಹುದಾಗಿದೆ. ಈಗ ಇವರು ಮಾಡುತ್ತಿರುವ ಚರ್ಚೆ ಸುಮ್ಮನೆ ಅನಗತ್ಯ ಎಂದು ನಾನು ಭಾವಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ನಾವು ಚರ್ಚೆ ಮಾಡುತ್ತಿಲ್ಲ. ಈ ವಿಧೇಯಕಕ್ಕೆ ನಮ್ಮ ವಿರೋಧವಿರುವುದರಿಂದ ನಮ್ಮ ಪಕ್ಷದವರು ಇದನ್ನು ಖಂಡಿಸಿ ಸಭಾತ್ಯಾಗ ಮಾಡುತ್ತೇವೆ, ಸದನವನ್ನು ಬಹಿಷ್ಕರಿಸುತ್ತಿದ್ದೇವೆ.

(ಗೊಂದಲ)

**ಶ್ರೀ ಪುಟ್ಟಣ್ಣ:-** ಈಗ ತಂದಿರುವ ವಿಧೇಯಕವನ್ನು ನಾವು ಖಂಡಿಸುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ತಂದರೆ ಮುಂದೆ ಇವರೇ ಸಂಕಷ್ಟವನ್ನು ಅನುಭವಿಸುತ್ತಾರೆ. ಆದ್ದರಿಂದ ಈ ವಿಧೇಯಕವನ್ನು ವಿರೋಧಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಗಳೇ, ಈ ವಿಧೇಯಕವನ್ನು ವಿರೋಧಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಗೊಂದಲ)

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೇ, ಅವರು ಸಭಾತ್ಯಾಗ ಮಾಡಿದರೆ ಮಾಡಲಿ, ತಾವು ಈ ವಿಧೇಯಕವನ್ನು ಪಾಸ್ ಮಾಡಿ.

**(ಈ ಹಂತದಲ್ಲಿ ಸರ್ಕಾರದ ನಿಲುವನ್ನು ವಿರೋಧಿಸಿ ಭಾರತೀಯ ಜನತಾ ಪಕ್ಷದ ಸದಸ್ಯರು ಮತ್ತು ಜನತಾ ದಳ(ಎಸ್) ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು)**

**ಉಪ ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕ 2 ರಿಂದ 5ರ ವರೆಗಿನ ಖಂಡಗಳಿಗೆ ವಿಧಾನ ಪರಿಷತ್ತಿನ ಪರಿಶೀಲನಾ ಸಮಿತಿಯು ಮಾಡಿರುವ ತಿದ್ದುಪಡಿಗಳ ವರದಿ ರೀತ್ಯಾ ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2ರಿಂದ 8ರವರೆಗೆ**

**ಉಪ ಸಭಾಪತಿಯವರು:-** "ಖಂಡ 2ರಿಂದ 8ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2ರಿಂದ 8ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಖಂಡ 1 ಇತ್ಯಾದಿ**

**ಉಪ ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕಕ್ಕೆ ವಿಧಾನ ಪರಿಷತ್ತಿನ ಪರಿಶೀಲನಾ ಸಮಿತಿಯು ಮಾಡಿರುವ ತಿದ್ದುಪಡಿಗಳ ವರದಿ ರೀತ್ಯಾ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಉಪ ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕವನ್ನು ವಿಧಾನ ಪರಿಷತ್ತಿನ ಪರಿಶೀಲನಾ ಸಮಿತಿಯು ಮಾಡಿರುವ ತಿದ್ದುಪಡಿಗಳ ವರದಿ ರೀತ್ಯಾ ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಉಪ ಸಭಾಪತಿಯವರು:–** ಈಗ ಸದನವನ್ನು ಸೋಮವಾರ ಬೆಳಗ್ಗೆ 11–00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಮಧ್ಯಾಹ್ನ 3 ಗಂಟೆ 6 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 20ನೇ ಆಗಸ್ಟ್ ಮಾಹೆ 2017ರ ಸೋಮವಾರದಂದು ಬೆಳಿಗ್ಗೆ 11–00 ಗಂಟೆಗೆ ಸೇರಲು ನಿಶ್ಚಯಿಸಿತು)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "